

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ


ಆಗಸ್ಟ್ 17 ಶನಿವಾರ 2024

ಸಂಪುಟ: 45 | ಸಂಚಿಕೆ: 122 | ಪುಟಗಳು: 12

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4





70ನೇ ರಾಷ್ಟ್ರೀಯ ಸಿನಿಮಾ ಪ್ರಶಸ್ತಿ ಪ್ರಕಟ

‘ಕಾಂತಾರ’ ರಿಷಭ್‌ಶೆಟ್ಟಿ ಅತ್ಯುತ್ತಮ ನಟ; ಯಶ್ ‘ಕೆಜಿಎಫ್–2’ ಅತ್ಯುತ್ತಮ ಚಿತ್ರ

ಸ್ಯಾಂಡಲ್‌ವುಡ್‌ಗೆ ಏಳು ಪ್ರಶಸ್ತಿ







ನಿತ್ಯಾಮೆನನ್

ನವದೆಹಲಿ: 70ನೇ ರಾಷ್ಟ್ರೀಯ ಸಿನಿಮಾ ಪ್ರಶಸ್ತಿ ವಿಜೇತರನ್ನು ಶುಕ್ರವಾರ ಪ್ರಕಟಿಸಲಾಗಿದೆ. ಕನ್ನಡದ ‘ಕಾಂತಾರ’ ಸಿನಿಮಾದಲ್ಲಿ ಅತ್ಯುತ್ತಮ ಅಭಿನಯಕ್ಕಾಗಿ ನಟ ರಿಷಭ್ ಶೆಟ್ಟಿ ಅತ್ಯುತ್ತಮ ನಟ ಪ್ರಶಸ್ತಿ ಪಡೆದುಕೊಂಡಿದ್ದಾರೆ. ಅತ್ಯುತ್ತಮ ಜನಪ್ರಿಯ ಹಾಗೂ ಮನರಂಜನಾ ಚಿತ್ರವಾಗಿ ಎರಡು ವಿಭಾಗದಲ್ಲಿ ‘ಕಾಂತಾರ’ ಪ್ರಶಸ್ತಿ ಬಾಚಿಕೊಂಡಿದೆ. 2022ನೇ ಸಾಲಿನಲ್ಲಿ ಚಿತ್ರರಂಗದಲ್ಲಿ ಅತ್ಯುತ್ತಮ ಸಾಧನೆಗೈದ ಚಿತ್ರಗಳ ಪಟ್ಟಿಯನ್ನು ಕೇಂದ್ರ ವಾರ್ತಾ ಪ್ರಸಾರ ಮತ್ತು ಮಾಹಿತಿ ಸಚಿವಾಲಯ ಘೋಷಿಸಿದೆ. ಅತ್ಯುತ್ತಮ ನಟರ ರೇಸ್‌ನಲ್ಲಿ ರಿಷಬ್ ಶೆಟ್ಟಿ ಹಾಗೂ ಮಲೆಯಾಳಂ ನಟ ಮಮ್ಮುಟ್ಟಿ ನಡುವೆ ಭಾರಿ ಸ್ಪರ್ಧೆ ಏರ್ಪಟ್ಟಿತ್ತು. ಕೊನೆಗೆ ರಿಷಭ್ ಶೆಟ್ಟಿಗೆ ಪ್ರಶಸ್ತಿ ಒಲಿದುಬಂದಿದೆ. ರಾಕಿಂಗ್ ಸ್ಟಾರ್ ಯಶ್ ನಟನೆಯ ಕೆಜಿಎಫ್–2 ಅತ್ಯುತ್ತಮ ಕನ್ನಡ ಚಿತ್ರವಾಗಿ ರಾಷ್ಟ್ರ ಪ್ರಶಸ್ತಿ ಪಡೆದುಕೊಂಡಿದೆ. ಸಾಹಸ ನಿರ್ದೇಶನ ವಿಭಾಗದಲ್ಲೂ ಕೆಜಿಎಫ್–2 ಪ್ರಶಸ್ತಿ ಗೆದ್ದಿದೆ. ■9ನೇ ಪುಟಕ್ಕೆ

ಮುಂದಿನ 30 ದಿನ ಎಚ್ಚರ

● ಭಾರೀ ಮಳೆ ಹಿನ್ನಲೆಯಲ್ಲಿ ಅಧಿಕಾರಿಗಳಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಎಚ್ಚರಿಕೆ ● ಮಳೆ ನಿಂತ ಕೂಡಲೇ ನಷ್ಟ ಪರಿಹಾರದತ್ತ ಗಮನಹರಿಸಿ ● ಹಾಗೆಯೇ ಬೆಳೆ ನಷ್ಟವಾದ ರೈತರಿಗೆ ಸಮೀಕ್ಷೆ ನಡೆಸಿ ಪರಿಹಾರ ಕಲ್ಪಿಸಿ



ಗೃಹ ಕಚೇರಿ ಕೃಷ್ಣಾದಲ್ಲಿ ಸಂಬಂಧಪಟ್ಟ ಇಲಾಖಾ ಸಚಿವರು ಮತ್ತು ಅಧಿಕಾರಿಗಳ ಜೊತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಸಭೆ ನಡೆಸಿದರು.

ಬೆಂಗಳೂರು, ಆ.16(ಕೆಎಂಶಿ)– ಮುಂಗಾರು ಮಳೆಯಿಂದ ಉಂಟಾಗಿರುವ ಬೆಳೆ ನಷ್ಟಕ್ಕೆ ಪರಿಹಾರ ನೀಡಲು ತಕ್ಷಣವೇ ಕ್ರಮ ಕೈಗೊಳ್ಳಿ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಇಂದಿಲ್ಲಿ ಆದೇಶ ಮಾಡಿದ್ದಾರೆ.

ಅತಿವೃಷ್ಟಿ ಮತ್ತು ಪ್ರವಾಹ ಪರಿಸ್ಥಿತಿ ಕುರಿತು ಗೃಹ ಕಚೇರಿ ಕೃಷ್ಣಾದಲ್ಲಿ ಸಂಬಂಧಪಟ್ಟ ಇಲಾಖಾ ಸಚಿವರು ಮತ್ತು ಅಧಿಕಾರಿಗಳ ಸಭೆ ನಡೆಸಿದ ಮುಖ್ಯಮಂತ್ರಿ, ಬೆಳೆ ನಷ್ಟ ಸಮೀಕ್ಷೆ ನಡೆಸಿ ನಷ್ಟ ಅನುಭವಿಸಿದ ರೈತರ ಖಾತೆಗಳಿಗೆ ಹಣ ವರ್ಗಾವಣೆ ಮಾಡಿ ಎಂದಿದ್ದಾರೆ.

ಹವಾಮಾನ ಇಲಾಖೆ ಮಾಹಿತಿಯಂತೆ ಮುಂದಿನ 30 ದಿನಗಳು ನಮಗೆ ಕಠಿಣ ಸ್ಥಿತಿ ಎದುರಾಗಲಿದೆ. ಭಾರೀ ಮಳೆ ಬೀಳುವ ಮುನ್ಸೂಚನೆ ಇದೆ, ಈ ಬಗ್ಗೆ ಜಿಲ್ಲಾಡಳಿತ ದಿನಪೂರ್ತಿ ಎಚ್ಚರದಿಂದ ಕೆಲಸ ಮಾಡಿ. ಮುಂಗಾರಿನ ಮೊದಲ ಭಾಗದಲ್ಲಿ ಬಿದ್ದ ಮಳೆಯಿಂದ ಬಹುತೇಕ ಎಲ್ಲಾ ಜಲಾಶಯಗಳು ಭರ್ತಿಯಾಗಿವೆ. ಇದರ ಜೊತೆಗೆ ಪಶ್ಚಿಮಘಟ್ಟ ಪ್ರದೇಶದಲ್ಲಿ ಗುಡ್ಡ ಕುಸಿತದಿಂದ ಅಪಾರ ಹಾನಿಯಾಗಿದೆ. ಭಾರೀ ಮಳೆಯಿಂದ ಮುಂದಿನ ದಿನಗಳಲ್ಲಿ ಜಲಾಶಯಗಳಿಗೆ ಹೆಚ್ಚಿನ ನೀರು ಹರಿದುಬರಲಿದೆ, ಎಷ್ಟು ಪ್ರಮಾಣದಲ್ಲಿ ನೀರನ್ನು ಹೊರಬಿಡಬೇಕು ಮತ್ತು ಅಣೆಕಟ್ಟುಗಳ ಸುರಕ್ಷತೆಗೆ ನಿಗಾವಹಿಸಿ. ತುಂಗಭದ್ರಾ ಜಲಾಶಯದಲ್ಲಿ ಉಂಟಾದ ಲೋಪ ಪಾಠ ಇದ್ದಂತೆ. ಸಂಬಂಧಪಟ್ಟ ಮಂಡಳಿ, ಪ್ರಾಧಿಕಾರ ಇಲ್ಲವೇ ಅಧಿಕಾರಿಗಳು ದಿನನಿತ್ಯ ಅಣೆಕಟ್ಟುಗಳ ನಿರ್ವಹಣೆ ಬಗ್ಗೆ ಪರಿಶೀಲನೆ ನಡೆಸಲಿ. ■6ನೇ ಪುಟಕ್ಕೆ




ಮಂಡ್ಯದಲ್ಲಿ ಮತ್ತೊಂದು ಹೆಣ್ಣು ಭ್ರೂಣ ಹತ್ಯೆ ಪ್ರಕರಣ ಬೆಳಕಿಗೆ

● ಡಿಎಚ್‌ಓ ಡಾ.ಮೋಹನ್ ನೇತೃತ್ವದಲ್ಲಿ ದಾಳಿ, ಮೂವರ ಬಂಧನ ● ಪ್ರಕರಣದ ಕಿಂಗ್‌ಪಿನ್ ಅಭಿಷೇಕ್ ಪರಾರಿ, ಬಂಧನಕ್ಕೆ ಶೋಧ ● ಪರಿಕರಗಳು, ಗರ್ಭಿಣಿಗೆ ನೀಡುತ್ತಿದ್ದ ಮಾತ್ರೆಗಳು ವಶಕ್ಕೆ

ಮಂಡ್ಯ,ಆ.16– ಹೆಣ್ಣು ಭ್ರೂಣ ಹತ್ಯೆ ಪ್ರಕರಣಗಳಿಂದ ಇಡೀ ರಾಜ್ಯದಲ್ಲೇ ಕುಖ್ಯಾತಿ ಪಡೆದಿದ್ದ ಮಂಡ್ಯ ಜಿಲ್ಲೆಯಲ್ಲೀಗ ಮತ್ತೊಂದು ಪ್ರಕರಣ ಬೆಳಕಿಗೆ ಬಂದಿದ್ದು, ನಾಗಮಂಗಲ ತಾಲೂಕಿನ ಮಾವಿನಕೆರೆಯಲ್ಲಿ ಭ್ರೂಣ ಪತ್ತೆ ಮತ್ತು ಹತ್ಯೆ ಮಾಡುತ್ತಿದ್ದ ಮನೆಯ ಮೇಲೆ ಜಿಲ್ಲಾ ಆರೋಗ್ಯ ಇಲಾಖೆ ಹಾಗೂ ಪೊಲೀಸರು ದಾಳಿ ಮಾಡಿ ಮೂವರನ್ನು ಬಂಧಿಸಿದ್ದಾರೆ.

ಮಂಡ್ಯ ಜಿಲ್ಲೆಯ ನಾಗಮಂಗಲ ತಾಲೂಕಿನ ಮಾವಿನಕೆರೆ ಗ್ರಾಮದಲ್ಲಿ ಧನಂಜಯ ಎಂಬಾತನ ತೋಟದ ಮನೆಯಲ್ಲಿ ಕಳೆದ ಹಲವು ವರ್ಷಗಳಿಂದ ಭ್ರೂಣ ಪತ್ತೆ ಮತ್ತು ಹತ್ಯೆ ನಡೆಯುತ್ತಿದ್ದು, ಖಚಿತ ಮಾಹಿತಿ ಆಧರಿಸಿ ಜಿಲ್ಲಾ ಆರೋಗ್ಯಾಧಿಕಾರಿ ಡಾ.ಮೋಹನ್ ನೇತೃತ್ವದಲ್ಲಿ ಹಾಗೂ ಬೆಳ್ಳೂರು ಠಾಣೆ ಪೊಲೀಸರ ಸಹಕಾರದೊಂದಿಗೆ ಕಳೆದ ಗುರುವಾರ ರಾತ್ರಿ ದಾಳಿ ಮಾಡಲಾಗಿದೆ. ದಾಳಿ ವೇಳೆ ಭ್ರೂಣ ಪತ್ತೆ ನಡೆಯುತ್ತಿದ್ದುದು, ಬೆಳಕಿಗೆ ಬಂದಿದೆ. ದಾಳಿ ವೇಳೆ ಮನೆಯಲ್ಲಿ ಭ್ರೂಣ ಪತ್ತೆ ಮತ್ತು ಹತ್ಯೆಗೆ ದಂಪತಿ ಬಂದಿದ್ದರು. ಈ ವೇಳೆ ಏಕಾಏಕಿ ತಡರಾತ್ರಿಯಲ್ಲಿ ಅಧಿಕಾರಿಗಳು ದಾಳಿ ನಡೆಸಿದ್ದಾರೆ. ಮನೆಯ ಮಾಲೀಕ ಧನಂಜಯ, ಖಾಸಗಿ ಆಸ್ಪತ್ರೆ ನೌಕರೆ ಹಾಗೂ ಭ್ರೂಣಹತ್ಯೆಗೆ ಬಂದಿದ್ದ ಗರ್ಭಿಣಿಯ ಗಂಡನನ್ನು ಪೊಲೀಸರು ಬಂಧಿಸಿದ್ದಾರೆ. ಬಂಧಿತ ಧನಂಜಯ ಆರೋಗ್ಯ ಇಲಾಖೆಯ ಡಿ ಗ್ರೂಪ್ ನೌಕರ ಎಂಬುದು ತಿಳಿದು ಬಂದಿದೆ. ಆದರೆ ಭ್ರೂಣ ಪತ್ತೆ ಮತ್ತು ಹತ್ಯೆಗೆ ಸಂಬಂಧಿಸಿದಂತೆ ಸ್ಕ್ಯಾನಿಂಗ್ ನಡೆಸುತ್ತಿದ್ದ ಅಭಿಷೇಕ್ ಎಂಬಾತ ಪರಾರಿಯಾಗಿದ್ದು, ಪ್ರಮುಖ ಆರೋಪಿಯಾದ ಆತನ ಬಂಧನಕ್ಕೆ ಪೊಲೀಸರು ಬಲೆ ಬೀಸಿದ್ದಾರೆ. ಅಭಿಷೇಕ್ ಪಾಂಡವಪುರ, ಬೆಂಗಳೂರಿನ ಬೈಯಪ್ಪನಹಳ್ಳಿ ಭ್ರೂಣ ಹತ್ಯೆ ಮತ್ತು ಪತ್ತೆ ಪ್ರಕರಣದಲ್ಲೂ ಭಾಗಿಯಾಗಿದ್ದು, ಪೊಲೀಸರಿಗೆ ಬೇಕಾದ ಆರೋಪಿಯಾಗಿದ್ದಾನೆ. ಈತನ ನಾಗಮಂಗಲ ನಿವಾಸದ ಮೇಲೆ ಆರೋಗ್ಯ ಇಲಾಖೆ ಅಧಿಕಾರಿಗಳು ಮತ್ತು ಪೊಲೀಸರು ದಾಳಿ ನಡೆಸಿದ್ದಾರೆ.



ದಾಳಿ ವೇಳೆ ಧನಂಜಯ ಮನೆಯಲ್ಲಿ ಪತ್ತೆಯಾದ ಸ್ಕ್ಯಾನಿಂಗ್ ಯಂತ್ರ ಹಾಗೂ ಗರ್ಭಪಾತದ ಕಿಟ್‌ಗಳನ್ನು ಪೊಲೀಸರು ವಶಕ್ಕೆ ಪಡೆದಿದ್ದು, ಪೊಲೀಸರ ಸಹಕಾರದೊಂದಿಗೆ ಮೂವರು ಆರೋಪಿಗಳ ಬಂಧಿಸಿ, ವಶಕ್ಕೆ ಪಡೆಯಲಾಗಿದೆ. ಈ ಸಂಬಂಧ ನಾಗಮಂಗಲ ಗ್ರಾಮಾಂತರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಪ್ರಕರಣ ದಾಖಲಾಗಿದೆ.

ಎರಡು ತಿಂಗಳಿನಿಂದ ಪ್ಲಾನ್: ನಾಗಮಂಗಲದಲ್ಲಿ ಹೆಣ್ಣು ಭ್ರೂಣ ಪತ್ತೆ ಮತ್ತು ಹತ್ಯೆ ಪ್ರಕರಣಕ್ಕೆ ಸಂಬಂಧಿಸಿದಂತೆ ಮಾತನಾಡಿದ ಡಿಎಚ್‌ಓ ಡಾ.ಮೋಹನ್, ಈ ಪ್ರಕರಣಕ್ಕೆ ■6ನೇ ಪುಟಕ್ಕೆ



ಕೊಲ್ಕತ್ತಾದಲ್ಲಿ ವೈದ್ಯೆ ಮೇಲೆ ಅತ್ಯಾಚಾರ–ಹತ್ಯೆ ಖಂಡಿಸಿ ಐಎಂಎ ಕರೆಯಂತೆ

ರಾಷ್ಟ್ರವ್ಯಾಪಿ 24 ಗಂಟೆ ವೈದ್ಯರ ಮುಷ್ಕರ

● ಎಲ್ಲಾ ಆಸ್ಪತ್ರೆಗಳಲ್ಲಿ ಹೊರ ರೋಗಿ ಘಟಕ ಬಂದ್
● ತುರ್ತು ಹಾಗೂ ಗಂಭೀರ ಶಸ್ತ್ರ ಚಿಕಿತ್ಸೆಗೆ ಅಡ್ಡಿಯಿಲ್ಲ
● ದೇಶಾದ್ಯಂತ ಮೆಡಿಕಲ್ ಸ್ಟೋರ್‌ಗಳು ತೆರೆದಿರುತ್ತವೆ



ಮೈಸೂರು, ಆ.16(ಆರ್‌ಕೆ)– ಕೊಲ್ಕತ್ತಾದಲ್ಲಿ ವೈದ್ಯೆ ಮೇಲೆ ಅತ್ಯಾಚಾರವೆಸಗಿ ಹತ್ಯೆಗೈದಿರುವ ಘಟನೆ ಖಂಡಿಸಿ ನಾಳೆ(ಆ.17) ಬೆಳಗ್ಗೆ 6 ರಿಂದ ಆಗಸ್ಟ್ 18ರ ಬೆಳಗ್ಗೆ 6 ಗಂಟೆವರೆಗೆ ರಾಷ್ಟ್ರವ್ಯಾಪಿ 24 ಗಂಟೆಗಳ ಕಾಲ ಸೇವೆ ಸ್ಥಗಿತಗೊಳಿಸಿ ಮುಷ್ಕರ ಮಾಡಲು ಭಾರತೀಯ ವೈದ್ಯಕೀಯ ಸಂಘ (ಐಎಂಎ)ವು ವೈದ್ಯರಿಗೆ ಕರೆ ನೀಡಿವೆ.

ಕೊಲ್ಕತ್ತಾದ ಆರ್.ಜಿ., ಕೆಎಆರ್ ಮೆಡಿಕಲ್ ಕಾಲೇಜು ಮತ್ತು ಆಸ್ಪತ್ರೆ ಚೆಸ್ಟ್ ಮೆಡಿಸಿನ್‌ನಲ್ಲಿ ಸ್ನಾತಕೋತ್ತರ ಪದವಿ ವಿದ್ಯಾರ್ಥಿನಿ ಮೇಲೆ ಲೈಂಗಿಕ ದೌರ್ಜನ್ಯವೆಸಗಿ ಹತ್ಯೆಗೈದ ಅಮಾನುಷ ಘಟನೆ ವಿರೋಧಿಸಿ ವೈದ್ಯರ ಮುಷ್ಕರಕ್ಕೆ ಐಎಂಎ ಕರೆ ನೀಡಿರುವ ಹಿನ್ನೆಲೆಯಲ್ಲಿ ತುರ್ತು ಸೇವೆ ಮತ್ತು ತುರ್ತು ಶಸ್ತ್ರ ಚಿಕಿತ್ಸೆ ಹೊರತುಪಡಿಸಿ ಉಳಿದ ಸೇವೆಗಳನ್ನು ಬಹಿಷ್ಕರಿಸಿ ಪ್ರತಿಭಟನೆಯಲ್ಲಿ ಭಾಗಿಯಾಗುವಂತೆ ಐಎಂಎ ಮೈಸೂರು ಶಾಖೆ ಅಧ್ಯಕ್ಷ ಎಂ.ಎಸ್.ಜಯಂತ ವೈದ್ಯರಿಗೆ ಕರೆ ನೀಡಿದ್ದಾರೆ. ಅದರಂತೆ ಹೊರ ರೋಗಿ ವಿಭಾಗ ಹಾಗೂ ಆಯ್ದ ಸರ್ಜರಿಗಳಿಗೆ ಹಾಜರಾಗದೇ ಮುಷ್ಕರ ದಲ್ಲಿ ಪಾಲ್ಗೊಂಡು ಪ್ರತಿಭಟನೆಗೆ ಬೆಂಬಲ ನೀಡಲು ಐಎಂಎ ಮೈಸೂರು ಶಾಖೆ ಸದಸ್ಯರು ನಿರ್ಧರಿಸಿದ್ದಾರೆ. ಈ ಸಂಬಂಧ ‘ಮೈಸೂರು ಮಿತ್ರ’ನಿಗೆ ಪ್ರತಿಕ್ರಿಯೆ ನೀಡಿರುವ ಐಎಂಎ ಮೈಸೂರು ಶಾಖೆ ಅಧ್ಯಕ್ಷ ಎಂ.ಎಸ್. ಜಯಂತ್, ತುರ್ತು ವೈದ್ಯಕೀಯ ಸೇವೆಗಳು, ತುರ್ತು ಶಸ್ತ್ರ ಚಿಕಿತ್ಸೆಗಳಲ್ಲಿ ಭಾಗಿಯಾಗಲಿರುವ ವೈದ್ಯರು, ಉಳಿದ ಸಾಮಾನ್ಯ ಸೇವೆಗಳನ್ನು ಬಹಿಷ್ಕರಿಸಿ ವೈದ್ಯರು ■6ನೇ ಪುಟಕ್ಕೆ

ಈ ಹಿಂದಿನ ಆಯುಕ್ತರ ವರ್ಗಾವಣೆ ನಂತರವೂ 500 ಸೆಕ್ಯೂರಿಟಿ ಬಾಂಡ್ ಪೇಪರ್ ಪಡೆದ ಪ್ರಕರಣ

ಆಪ್ತ ಸಹಾಯಕನಿಗೆ ಮುಡಾ ಹಾಲಿ ಆಯುಕ್ತರ ನೋಟಿಸ್



ಮೈಸೂರು, ಆ.16 (ಆರ್‌ಕೆ)–ಈ ಹಿಂದಿನ ಮುಡಾ ಆಯುಕ್ತ ವರ್ಗಾವಣೆಯಾದ ನಂತರವೂ ನಿವೇಶನ ಮಂಜೂರಾತಿ ಪತ್ರಕ್ಕೆ ಬಳಸಲಾಗುವ 500 ಸೆಕ್ಯೂರಿಟಿ ಬಾಂಡ್ ಪೇಪರ್‌ಗಳನ್ನು ಸ್ಟೋರ್‌ರೂಂನಿಂದ ತರಿಸಿಕೊಂಡಿದ್ದಾರೆಂಬ ‘ಮೈಸೂರು ಮಿತ್ರ’ ಪತ್ರಿಕೆ ವರದಿ ಹಿನ್ನೆಲೆಯಲ್ಲಿ ಮಾಹಿತಿ ಕೇಳಿ ಆಯುಕ್ತ ಎಎನ್.ರಘುನಂದನ ಅವರು ಆಪ್ತ ಸಹಾಯಕನಿಗೆ ನೋಟಿಸ್ ನೀಡಿದ್ದಾರೆ.

ಕಳೆದ ನಾಲ್ಕು ವರ್ಷಗಳಿಂದ ಒಟ್ಟು 4,839 ನಿವೇಶನ ಮಂಜೂರಾತಿ ಪತ್ರದ ಕ್ರಮ ಸಂಖ್ಯೆಯುಳ್ಳ ಹೈ ಸೆಕ್ಯೂರಿಟಿ ಬಾಂಡ್ ಪೇಪರ್ ನಮೂನೆಗಳನ್ನು ಕೋರಿಕೆ ಇಂಡೆಂಟ್ ಹಾಕಿ ಸ್ಟೋರ್‌ನಿಂದ ಮುಡಾ ಕಚೇರಿಯ ವಿವಿಧ ವಲಯ ಕಚೇರಿಗಳು, ನಿವೇಶನ ವಿಭಾಗ, ಆಯುಕ್ತರ ಪಿಎ ಸೆಕ್ಷನ್‌ಗಳಿಗೆ ತರಿಸಿಕೊಳ್ಳಲಾಗಿದೆ ಎಂಬುದು ರೆಕಾರ್ಡ್ ಸೆಕ್ಷನ್ ದಾಖಲಾತಿಗಳಿಂದ ತಿಳಿದು ಬಂದಿತ್ತು. 2021ರ ಏಪ್ರಿಲ್ 6ರಿಂದ 2024ರ ಜುಲೈ 3ರವರೆಗೆ ಮುಡಾ ಆಯುಕ್ತ ತಮ್ಮ ಆಪ್ತ ಸಹಾಯಕರ ಮೂಲಕ ಈ ಹೈ ಸೆಕ್ಯೂರಿಟಿ ಬಾಂಡ್ ಪೇಪರ್‌ಗಳನ್ನು ತರಿಸಿಕೊಂಡಿದ್ದರು ಎಂದು ತಿಳಿದುಬಂದಿದೆ. ಆ ಪೈಕಿ ಕೇವಲ 1,200 ಹಂಚಿಕೆ ಪತ್ರಗಳಿಗೆ ಲೆಕ್ಕ ಸಿಕ್ಕಿದ್ದು, 2021ರಿಂದ 2024ರವರೆಗೆ ಉಳಿದ 3,639 ಪತ್ರಗಳು ನಾಪತ್ತೆಯಾಗಿವೆ ಎಂದು ಹೇಳಲಾಗುತ್ತಿದೆ.

ಈ ಹಿಂದಿನ ಮುಡಾ ಆಯುಕ್ತ ದಿನೇಶ್‌ಕುಮಾರ್ ವರ್ಗಾವಣೆಯಾದ ನಂತರವೂ ಜುಲೈ 3ರಂದು ಆಪ್ತ ಸಹಾಯಕ ಪ್ರಶಾಂತ್ ಇಂಡೆಂಟ್ ನಂಬರ್ 899ರ ಮೂಲಕ 500 ಸೆಕ್ಯೂರಿಟಿ ಬಾಂಡ್ ಪೇಪರ್‌ಗಳನ್ನು (ಕ್ರಮ ಸಂಖ್ಯೆ 14342 ರಿಂದ 14,842 ರವರೆಗೆ) ರೆಕಾರ್ಡ್ ರೂಂನಿಂದ ಪಡೆದಿರುವುದು ಬೆಳಕಿಗೆ ಬಂದಿತ್ತು.


ಈ ಕುರಿತು ಯಾವ ಉದ್ದೇಶಕ್ಕೆ, ಯಾರ ನಿರ್ದೇಶನದ ಮೇರೆಗೆ ನಿವೇಶನಗಳ ಹಂಚಿಕೆ ಪತ್ರಗಳ ನಮೂನೆಯನ್ನು ರೆಕಾರ್ಡ್ ರೂಂನಿಂದ ತರಿಸಿಕೊಳ್ಳಲಾಯಿತು, ನಂತರ ಅವುಗಳನ್ನು ಬಳಸಲಾಗಿದೆಯೇ ಎಂಬುದರ ಬಗ್ಗೆ ಮಾಹಿತಿ ನೀಡುವಂತೆ ಆಯುಕ್ತ ಆಪ್ತ ಸಹಾಯಕನಿಗೆ ನೀಡಿರುವ ನೋಟಿಸ್‌ನಲ್ಲಿ ಕೇಳಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಈ ಬಾರಿ 40 ಕೋಟಿ ವೆಚ್ಚದಲ್ಲಿ ಅದ್ದೂರಿ ನಾಡಹಬ್ಬ ದಸರಾ ಆಚರಣೆ

ದಸರಾ ಕಾರ್ಯಕಾರಿ ಸಮಿತಿ ನಂತರ ಉಸ್ತುವಾರಿ ಸಚಿವ ಡಾ.ಮಹದೇವಪ್ಪ ಮಾಹಿತಿ

● ಶ್ರೀರಂಗಪಟ್ಟಣ ದಸರಾಗೆ 1.50 ಕೋಟಿ ● ಚಾಮರಾಜನಗರ ದಸರಾಗೆ 2 ಕೋಟಿ ● 19 ದಸರಾ ಉಪ ಸಮಿತಿ ರಚನೆ ● 21 ದಿನಗಳ ತನಕ ದಸರಾ ವಿದ್ಯುತ್ ದೀಪಾಲಂಕಾರ ● ಯುವ ದಸರಾ, ಯುವ ಸಂಭ್ರಮದಲ್ಲಿ ವೈಶಿಷ್ಟ್ಯತೆ





ಮೈಸೂರಿನ ಸಿದ್ಧಾರ್ಥ ನಗರದ ನೂತನ ಜಿಲ್ಲಾಧಿಕಾರಿ ಕಚೇರಿಯಲ್ಲಿ ಶುಕ್ರವಾರ ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಅಧ್ಯಕ್ಷತೆಯಲ್ಲಿ ದಸರಾ ಕಾರ್ಯಕಾರಿ ಸಮಿತಿ ಸಭೆ ನಡೆಯಿತು.

ಮೈಸೂರು, ಆ.16(ಬಿಎಲ್‌ಯು)– ಸಮೃದ್ಧ ಮಳೆಯಿಂದ ರೈತರ ಮೊಗದಲ್ಲಿ ಮಂದಹಾಸ ಮೂಡಿದೆ. ಹಾಗಾಗಿ ಈ ಬಾರಿ ವಿಶ್ವ ವಿಖ್ಯಾತ ಮೈಸೂರು ದಸರಾ ಮಹೋತ್ಸವವನ್ನು 40 ಕೋಟಿ ರೂಪಾಯಿ ವೆಚ್ಚದಲ್ಲಿ ಅದ್ದೂರಿಯಾಗಿ ಆಚರಣೆ ಮಾಡಲಾಗುವುದು ಎಂದು ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ. ಮಹದೇವಪ್ಪ ತಿಳಿಸಿದರು.

ಮೈಸೂರಿನ ಸಿದ್ಧಾರ್ಥನಗರದ ನೂತನ ಜಿಲ್ಲಾಧಿಕಾರಿ ಕಚೇರಿಯಲ್ಲಿ ಇಂದು ನಡೆದ ದಸರಾ ಕಾರ್ಯಕಾರಿ ಸಮಿತಿ ಸಭೆಯಲ್ಲಿ ತೆಗೆದುಕೊಂಡ ನಿರ್ಣಯಗಳ ಬಗ್ಗೆ ಪತ್ರಿಕಾಗೋಷ್ಠಿಯಲ್ಲಿ ವಿವರ ನೀಡಿದ ಅವರು, ದಸರಾಗೆ ದೇಶ–ವಿದೇಶದ ಲಕ್ಷಾಂತರ ಪ್ರವಾಸಿಗರು ಆಗಮಿಸುವ ಹಿನ್ನೆಲೆಯಲ್ಲಿ ಗುಂಡಿ ಬಿದ್ದಿರುವ ಮೈಸೂರಿನ ರಸ್ತೆಗಳಿಗೆ ಡಾಂಬರೀಕರಣ ಮಾಡಲಾಗುವುದು. ಈ ಕಾರ್ಯದ ಮೇಲುಸ್ತುವಾರಿಗೆ ಟಾಸ್ಕ್ ಫೋರ್ಸ್ ರಚಿಸಲಾಗುವುದು ಎಂದು ತಿಳಿಸಿದರು.

ದಸರಾ ಆಚರಣೆಗೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ 15 ಕೋಟಿ, ಮುಡಾದಿಂದ 10 ಕೋಟಿ, ಮೈಸೂರು ಅರಮನೆ ಮಂಡಳಿಯಿಂದ 5 ಕೋಟಿ ನೀಡಲಾಗುತ್ತದೆ ■6ನೇ ಪುಟಕ್ಕೆ

ಮಹಿಷಾ ದಸರಾ ಬಗ್ಗೆ ಜಿಲ್ಲಾಡಳಿತ ತೀರ್ಮಾನ



ಮಹಿಷಾ ದಸರಾಗೆ ಅನುಮತಿ ನೀಡುವ ಸಂಬಂಧ ಅಂದಿನ ಪರಿಸ್ಥಿತಿ ಯಾವ ರೀತಿ ಇರುತ್ತದೆಂಬೊ ಅದಕ್ಕೆ ಅನುಗುಣವಾಗಿ ಜಿಲ್ಲಾಡಳಿತ ತೀರ್ಮಾನ ತೆಗೆದುಕೊಳ್ಳುತ್ತದೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಸ್ಪಷ್ಟಪಡಿಸಿದರು. ಮಹಿಷಾ ದಸರಾ ಆಚರಣೆ ಮಾಡಬೇಕು ಅಥವಾ ಮಾಡಬಾರದು ಎಂಬ ನಿರ್ಧಾರ ನನ್ನದ್ದಲ್ಲ ಎಂದು ಸ್ಪಷ್ಟನೆ ನೀಡಿದ ಅವರು, ಸಂವಿಧಾನದ ಪ್ರಕಾರ ಯಾರು ಯಾವ ಕಾರ್ಯಕ್ರಮ ಮಾಡುತ್ತಾರೋ, ಬಿಡುತ್ತಾರೋ ಎಂಬುವುದು ಅವರ ಹಕ್ಕು ಎಂದು ಹೇಳಿದರು.

ಆದರೆ ಅವರ ಪಾಡಿಗೆ ಅವರು ಮಹಿಷಾ ದಸರಾವನ್ನು ಶಾಂತಿಯುತವಾಗಿ ಮಾಡಿಕೊಂಡು ಹೋದರೆ ಯಾರ ಅಭ್ಯಂತರವೂ ಇಲ್ಲ ಎಂದು ತಿಳಿಸಿದರು.

ಚಾಮುಂಡಿಬೆಟ್ಟದಲ್ಲಿ ಮಹಿಷಾಸುರನ ಪ್ರತಿಮೆ ಮುಂದೆಯೇ ಮಹಿಷಾ ದಸರಾ ಆಚರಣೆಗೆ ಅನುಮತಿ ನೀಡಬೇಕೆಂಬ ಪ್ರಗತಿಪರರ ಬೇಡಿಕೆ ಬಗ್ಗೆ ಪ್ರತಿಕ್ರಿಯೆ ನೀಡಿದ ಡಾ.ಮಹದೇವಪ್ಪ, ಅಂದಿನ ಪರಿಸ್ಥಿತಿ ನೋಡಿಕೊಂಡು ಜಿಲ್ಲಾಡಳಿತ ತೀರ್ಮಾನ ಮಾಡಲಿದೆ ಎಂದರು.

ಏರ್ ಶೋ ನಡೆಸಲು ಕೇಂದ್ರ ರಕ್ಷಣಾ ಸಚಿವರಿಗೆ ಪತ್ರ



ವಿಶ್ವ ವಿಖ್ಯಾತ ಮೈಸೂರು ದಸರಾ ಸಂದರ್ಭದಲ್ಲಿ ಅತ್ಯಾಕರ್ಷಕ ಏರ್ ಶೋ ನಡೆಸುವ ಬಗ್ಗೆ ಕೇಂದ್ರ ರಕ್ಷಣಾ ಸಚಿವ ರಾಜ್‌ನಾಥ್ ಸಿಂಗ್ ಅವರಿಗೆ ಪತ್ರ ಬರೆಯಲಾಗುವುದು ಎಂದು ಡಾ.ಮಹದೇವಪ್ಪ ತಿಳಿಸಿದರು. ಮೈಸೂರು ವಿಮಾನ ನಿಲ್ದಾಣದಿಂದ ಕೇವಲ ಎರಡು ವಿಮಾನಗಳ ಹಾರಾಟವಿದ್ದು, ಹೆಚ್ಚಿನ ವಿಮಾನ ಹಾರಾಟದ ವ್ಯವಸ್ಥೆ ಮಾಡುವಂತೆ ಕೇಂದ್ರ ವಿಮಾನಯಾನ ಸಚಿವರಿಗೆ ಕೂಡ ಪತ್ರ ಬರೆಯಲಾಗುವುದು ಎಂದು ಹೇಳಿದರು. ಆಹಾರ ಮೇಳವನ್ನು ಸ್ಕೌಟ್ಸ್ ಮತ್ತು ಗೈಡ್ಸ್ ಮೈದಾನ ಹಾಗೂ ಲಲಿತ ಮಹಲ್ ಪ್ಯಾಲೆಸ್ ಮೈದಾನದಲ್ಲಿ ಆಯೋಜಿಸಲಾಗುವುದು. ಸರ್ಕಾರದ 5 ಗ್ಯಾರಂಟಿ ಯೋಜನೆ ಹಾಗೂ ಒಂದು ವರ್ಷದ ಸಾಧನೆ ಕುರಿತ ಸ್ತಬ್ಧ ಚಿತ್ರ ಇರಬೇಕು ಎಂದು ಅಧಿಕಾರಿಗಳಿಗೆ ಸೂಚನೆ ನೀಡಲಾಗಿದೆ. ಜೊತೆಗೆ ದಸರಾದಲ್ಲಿ ಯಾವುದೇ ಗೊಂದಲಕ್ಕೆ ಅವಕಾಶ ಮಾಡಿಕೊಡದೆ ಪಾರದರ್ಶಕತೆ ಕಾಯ್ದುಕೊಳ್ಳುವಂತೆ ಕೂಡ ಸಲಹೆ ನೀಡಲಾಗಿದೆ ಎಂದು ಹೇಳಿದರು. ಚಿಣ್ಣರ ದಸರಾ, ಮಹಿಳಾ ದಸರಾ, ರೈತ ದಸರಾವನ್ನು ಅರ್ಥಪೂರ್ಣವಾಗಿ ನಡೆಸಬೇಕು. ದೇಶಾಭಿಮಾನ ಸಾರುವ ಕಾರ್ಯಕ್ರಮ ಹಾಗೂ ವೈವಿಧ್ಯತೆಯಲ್ಲಿ ಏಕತೆ ಸಾರುವ ಕಾರ್ಯಕ್ರಮ ಆಯೋಜನೆ ಮಾಡಲಾಗುವುದು ಎಂದು ಹೇಳಿದರು.



ಮೈಸೂರು ಮಿತ್ರ

78ನೇ ಸ್ವಾತಂತ್ರ್ಯ ದಿನಾಚರಣೆ



ಮೈಸೂರಿನ ನವಭಾರತ ನಿರ್ಮಾಣ ಸೇವಾ ಟ್ರಸ್ಟ್ ವತಿಯಿಂದ ಸ್ವಾತಂತ್ರ್ಯ ದಿನಾಚರಣೆ ಆಚರಿಸಲಾಯಿತು. ಧ್ವಜಾರೋಹಣವನ್ನು ಚಿಣ್ಣರು ಹಾಗೂ ಬಡಾವಣೆಯ ಹಿರಿಯ ನಾಗರಿಕರೊಂದಿಗೆ ನೆರವೇರಿಸಲಾಯಿತು. ಅಂಗನವಾಡಿ ಶಿಶುವಿಹಾರದಲ್ಲಿ ಚಿಣ್ಣರನ್ನು ಪ್ರೋತ್ಸಾಹಿಸಲು ಕಿರು ಕಾಣಿಕೆ ನೀಡಲಾಯಿತು. ಈ ವೇಳೆ ಮಾಜಿ ಕಾರ್ಪೊರೇಟರ್ ಕೆ.ವಿ.ಶ್ರೀಧರ್, ಬಡಾವಣೆಯ ಹಿರಿಯ ನಾಗರಿಕರು, ಸ್ವತಂತ್ರ ಹೋರಾಟಗಾರರು, ಮಹಿಳೆಯರು, ಚಿಣ್ಣರು, ಅಂಗನವಾಡಿ ಕಾರ್ಯಕರ್ತರು ಭಾಗವಹಿಸಿದ್ದರು.



ಮೈಸೂರಿನ ಎನ್.ಆರ್.ಮೊಹಲ್ಲಾದಲ್ಲಿರುವ ಟಿಎನ್‌ಎನ್ ಆದರ್ಶ ವಿದ್ಯಾರ್ಥಿ ನಿಲಯದಲ್ಲಿ 78ನೇ ಸ್ವಾತಂತ್ರ್ಯ ದಿನಾಚರಣೆ ಆಚರಿಸಲಾಯಿತು. ನಿಲಯದ ಅಧ್ಯಕ್ಷ ಎಂ.ಪ್ರಫುಲ್ ಕುಮಾರ್ ಧ್ವಜಾರೋಹಣ ನೆರವೇರಿಸಿದರು. ಈ ಸಂದರ್ಭದಲ್ಲಿ ಮಾಜಿ ನಗರ ಪಾಲಿಕೆ ಸದಸ್ಯ ಆರ್.ಸೋಮಸುಂದರ್, ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ಸಂಪತ್ ಕುಮಾರ್, ನಿಲಯದ ಕಾರ್ಯದರ್ಶಿ ಎಂ.ಪಾಟೀಲ್, ಹಿರಿಯ ಸದಸ್ಯ ಕೆ.ಪುಟ್ಟಯ್ಯ, ಖಜಾಂಚಿ ಪುಟ್ಟರಾಜು, ಪ್ರಸಾದ್, ಸುಭಾಷ್, ಮುರಳೀಧರ್, ಶಂಕರ್ ನಾರಾಯಣ್ ಮತ್ತಿತರರು ಉಪಸ್ಥಿತರಿದ್ದರು.



ಮೈಸೂರು ನಗರ ಬಿಜೆಪಿ ಯುವ ಮೋರ್ಚಾದಿಂದ ಮೈಸೂರಿನ ನ್ಯಾಯಾಲಯದ ಮುಂಭಾಗ ಹಾಗೂ ಸ್ವಾತಂತ್ರ್ಯ ಹೋರಾಟಗಾರರ ಉದ್ಯಾನವನದಲ್ಲಿರುವ ಮಹಾತ್ಮ ಗಾಂಧಿ ಪ್ರತಿಮೆಯನ್ನು ಸ್ವಾತಂತ್ರ್ಯೋತ್ಸವದ ಅಂಗವಾಗಿ ಸ್ವಚ್ಛಗೊಳಿಸಿ ಮಾಲಾರ್ಪಣೆ ಮಾಡಲಾಯಿತು. ಬಿಜೆಪಿ ಮೈಸೂರು ನಗರ ಅಧ್ಯಕ್ಷ ಎಲ್.ನಾಗೇಂದ್ರ, ಯುವ ಮೋರ್ಚಾ ಅಧ್ಯಕ್ಷ ರಾಕೇಶ್ ಗೌಡ, ಪ್ರಧಾನ ಕಾರ್ಯದರ್ಶಿ ಸಚಿನ್, ಲೋಹಿತ್, ಸಹ ವಕ್ತಾರ ದೇವರಾಜು, ಉಪಾಧ್ಯಕ್ಷ ಪುನೀತ್ ಕುಮಾರ್, ಕಾರ್ಯದರ್ಶಿಗಳಾದ ಕಿರಣ್ ನಾಯ್ಡು, ಮುಖಂಡರಾದ ಗಿರಿಧರ್, ಕಿಶೋರ್, ಕಾರ್ಯಕಾರಿಣಿ ಸದಸ್ಯರಾದ ಪವನ್, ಚೇತನ್, ಅರುಣ್ ರಂಗಸ್ವಾಮಿ ಶರತ್ ಇನ್ನಿತರರು ಉಪಸ್ಥಿತರಿದ್ದರು.



ಮೈಸೂರಿನ ರಾಮಾನುಜ ರಸ್ತೆಯಲ್ಲಿರುವ ನಮೋ ಯೋಗ ಭವನದಲ್ಲಿ ಸ್ವಾತಂತ್ರ ದಿನಾಚರಣೆ ಆಚರಿಸಲಾಯಿತು. ಈ ವೇಳೆ ನಗರ್ಲೆ ಶಿವಕುಮಾರ್, ನಮೋ ಯೋಗಭವನದ ಶಿಕ್ಷಕರಾದ ಮಲ್ಲಿಕಾರ್ಜುನಸ್ವಾಮಿ, ಪ್ರಧಾನ ಕಾರ್ಯದರ್ಶಿ ಸೇತುರಾಮ್ ಮತ್ತಿತರರು ಉಪಸ್ಥಿತರಿದ್ದರು.

ನಿಧನ



ಮಂಗೇರಾ ಸುನೀಲ್ ಸುಬ್ಬಯ್ಯ

ಮೈಸೂರು, ಆ. 16– ಮೈಸೂರಿನ ಟಿ.ಕೆ.ಬಡಾವಣೆ ನಿವಾಸಿ ದಿವಂಗತ ನಾಣಯ್ಯ ಅವರ ಪುತ್ರ ಮಂಗೇರಾ ಸುನೀಲ್ ಸುಬ್ಬಯ್ಯ (43) ಗುರುವಾರ ನಿಧನರಾದರು. ಮೃತರು ಸಹೋದರ ರೋಶನ್ ತಿಮ್ಮಯ್ಯ, ಅತ್ತಿಗೆ ರಾಧಿಕಾ ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಗೋಕುಲಂನ ಚಿರಶಾಂತಿಧಾಮದಲ್ಲಿ ಶುಕ್ರವಾರ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಕೆ.ಪಿ.ಚೆಲುವೇಗೌಡ



ಮೈಸೂರು: ಶ್ರೀ ಲಕ್ಷ್ಮೀದೇವಿ ಮೆಡಿಕಲ್ಸ್ ಗ್ರೂಪ್ಸ್ ಮತ್ತು ಕೆಜಿ.ಕೊಪ್ಪಲ್ ನಿವಾಸಿ ಕೆ.ಪಿ.ಚೆಲುವೇಗೌಡ (80) ಹೃದಯಾಘಾತ ದಿಂದ ಗುರುವಾರ ನಿಧನರಾದರು. ಮೃತರು ಇಬ್ಬರು ಪುತ್ರರು ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ನಾಳೆ (ಆ.17) ಬೆಳಗ್ಗೆ 10ಕ್ಕೆ ಹುಣಸೂರು ತಾಲೂಕಿನ ಗದ್ದಿಗೆ ಸಮೀಪದ ಬಸವನಹಳ್ಳಿ ಗ್ರಾಮದಲ್ಲಿ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.



ಪ್ರೊ. ಸೈಯದ್ ಅಬ್ದುಲ್ ಜಬ್ಬಾರ್

ಮೈಸೂರು, ಆ. 16– ದಾವಣಗೆರೆ ಬಿಡಿಟಿ ಇಂಜಿನಿಯರಿಂಗ್ ಕಾಲೇಜಿನ ನಿವೃತ್ತ ಪ್ರಾಧ್ಯಾಪಕರು ಮತ್ತು ಮೈಸೂರಿನ ಬನ್ನಿಮಂಟಪದ ನಿವಾಸಿ ಪ್ರೊ. ಸೈಯದ್ ಅಬ್ದುಲ್ ಜಬ್ಬಾರ್ (91) ಆ. 14 ರಂದು ನಿಧನರಾದರು. ಮೃತರು ಓರ್ವ ಪುತ್ರ, ಪುತ್ರಿ ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಟಿಪ್ಪು ಸರ್ಕಲ್‌ನಲ್ಲಿರುವ ಮುಸ್ಲಿಂ ರುದ್ರಭೂಮಿಯಲ್ಲಿ ಗುರುವಾರ (ಆ. 15) ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಕುಮಾರ



ಮೈಸೂರು, ಆ. 16– ಮೈಸೂರಿನ ಗಾಂಧಿನಗರದ ಸಿದ್ದಪ್ಪಾಜಿ ದೇವಸ್ಥಾನ ರಸ್ತೆ ನಿವಾಸಿ ಹಾಗೂ ಶ್ರೀರಾಮ ಮಂದಿರದ ಮಾಜಿ ಚಿಕ್ಕ ಯಜಮಾನರಾದ ಕುಮಾರ (58) ಅವರು ಅನಾರೋಗ್ಯ ದಿಂದ ಗುರುವಾರ ಬೆಳಗ್ಗೆ ನಿಧನರಾದರು. ಮೃತರು ಪತ್ನಿ ಪ್ರೇಮ, ಪುತ್ರ ನಿಖಿಲ್ ಹಾಗೂ ಅಪಾರ ಬಂಧುಬಳಗವನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆ ಗುರುವಾರ ಸಂಜೆ ಗಾಂಧಿನಗರದ ಆದಿಜಾಂಬವ ರುದ್ರಭೂಮಿಯಲ್ಲಿ ನೆರವೇರಿಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.



ಹೇಮಣ್ಣ

ಮೈಸೂರು, ಆ.16–ನಿವೃತ್ತ ಎಲ್‌ಐಸಿ ಅಧಿಕಾರಿ, ಮೈಸೂರಿನ ಮಂಚೇಗೌಡನಕೊಪ್ಪಲು ನಿವಾಸಿಕೆ.ಟಿ.ಹೇಮಣ್ಣ (66) ಅವರು ಇಂದು (ಆ.16) ನಿಧನರಾದರು. ಮೃತರು ಪತ್ನಿ ರತ್ನಮ್ಮ, ಪುತ್ರ, ಪುತ್ರಿ ಹಾಗೂ ಅಪಾರ ಬಂಧು ವರ್ಗವನ್ನು ಅಗಲಿದ್ದು, ಅಂತ್ಯಕ್ರಿಯೆ ಇಂದು (ಶುಕ್ರವಾರ) ಸಂಜೆ ಅವರ ಸ್ವಗ್ರಾಮ ಪಾಂಡವಪುರ ತಾಲೂಕು ಕೆನ್ನಾಳು ಗ್ರಾಮದಲ್ಲಿ ನೆರವೇರಿಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.


9 ಮಂದಿ ಮೇಲೆ ಬೀದಿ ನಾಯಿ ಹಠಾತ್ ದಾಳಿ

ಸಾರ್ವಜನಿಕರಲ್ಲಿ ಆತಂಕ

ಮೈಸೂರು, ಆ.16 (ಆರ್‌ಕೆ)– ಬೀದಿ ನಾಯಿಯೊಂದು ಗುರುವಾರ 9 ಮಂದಿ ಮೇಲೆ ಹಠಾತ್ ದಾಳಿ ನಡೆಸಿ ಕಚ್ಚಿ ಗಾಯಗೊಳಿಸಿದ ಘಟನೆ ಮೈಸೂರಿನ ವಿವಿ ಮೊಹಲ್ಲಾದ ಟೆಂಪಲ್ ರಸ್ತೆಯಲ್ಲಿ ಸಂಭವಿಸಿದೆ. ಮಧ್ಯಾಹ್ನ 1 ರಿಂದ 2 ಗಂಟೆ ವೇಳೆ ಒಂಟಿಕೊಪ್ಪಲು ದೇವಸ್ಥಾನ ಸರ್ಕಲ್‌ನಿಂದ ಮಾತೃಮಂಡಳಿ ಸರ್ಕಲ್ ವರೆಗೆ ದಾಳಿ ನಡೆಸಿದ ಬೀದಿನಾಯಿ ಯೊಂದು 9 ಮಂದಿಗೆ ಕಚ್ಚಿ ಪರಾರಿ ಯಾಗಿದೆ. ಈ ಹಠಾತ್ ದಾಳಿಯಿಂದ ಗಾಬರಿಗೊಂಡ ಸಾರ್ವಜನಿಕರು ಹೆದರಿ ಚೆಲ್ಲಾಪಿಲ್ಲಿಯಾದರು.

ನಾಯಿ ಕಚ್ಚಿದ್ದರಿಂದ ಕಾಲಿಗೆ ಗಾಯ ಗಳಾಗಿ ರಕ್ತಸ್ರಾವವಾಗಿದ್ದವರನ್ನು ಸಮೀಪದ ಖಾಸಗಿ ಆಸ್ಪತ್ರೆಗೆ ಕರೆದೊಯ್ದು ಆಂಟಿ ರೇಬಿಸ್ ಚುಚ್ಚು ಮದ್ದು ಕೊಡಿಸಲಾಯಿತು. ವಿಷಯ ತಿಳಿಯುತ್ತಿದ್ದಂತೆಯೇ ಮಾಜಿ ಕಾರ್ಪೊರೇಟರ್‌ಗಳಾದ ಎಸ್‌ಬಿಎಂ ಮಂಜು ಹಾಗೂ ಭಾಗ್ಯ ಮಾದೇಶ ಅವರು ಪಾಲಿಕೆ ಆರೋಗ್ಯಾಧಿಕಾರಿಗಳಿಗೆ ಮಾಹಿತಿ ನೀಡಿ, ದಾಳಿ ನಡೆಸಿದ ನಾಯಿಯನ್ನು ಹಿಡಿಯುವಂತೆ ತಿಳಿಸಿದರು. ಮಧ್ಯಾಹ್ನ ಸ್ಥಳಕ್ಕೆ ದಾವಿಸಿದ ಪಾಲಿಕೆ ಸಿಬ್ಬಂದಿ ಬೀದಿ ನಾಯಿಗಾಗಿ ಹುಡುಕಾಡಿದರಾದರೂ ಅದು ಪತ್ತೆಯಾಗಲಿಲ್ಲ. ಈ ನಡುವೆ ಒಂದು ದಿನ ಮುಂಚೆಯೇ ಬುಧವಾರ ಎಸ್‌ಬಿಎಂ ಮಂಜು ಅವರು ಪಾಲಿಕೆ ಆರೋಗ್ಯಾಧಿಕಾರಿ ಡಾ.ಎನ್.ಪಿ.ವೆಂಕಟೇಶ್ ಅವರನ್ನು ಭೇಟಿ ಮಾಡಿ ವಿವಿ ಮೊಹಲ್ಲಾ, ಪಡುವಾರಹಳ್ಳಿ, ಗೋಕುಲಂ ಸುತ್ತಮುತ್ತಲಿನ ಬಡಾವಣೆಗಳಲ್ಲಿ ಬೀದಿ ನಾಯಿಗಳ ಹಾವಳಿ ಜಾಸ್ತಿಯಾಗಿದ್ದು, ಜನರ ಮೇಲೆ ಏಕಾಏಕಿ ದಾಳಿ ಮಾಡುತ್ತಿವೆ. ಅವುಗಳನ್ನು ನಿಯಂತ್ರಿಸುವಂತೆ ಮನವಿ ಪತ್ರ ಸಲ್ಲಿಸಿದರು. ಈ ಕುರಿತು 'ಮೈಸೂರು ಮಿತ್ರ'ನಿಗೆ ಪ್ರತಿಕ್ರಿಯಿಸಿರುವ ಎಸ್‌ಬಿಎಂ ಮಂಜು, ಬೀದಿನಾಯಿಗಳು ಹಿಂಡು ಹಿಂಡಾಗಿ ರಸ್ತೆಯಲ್ಲಿ ಅಲೆಯುತ್ತಿರುತ್ತವೆ. ಒಮ್ಮೊಮ್ಮೆ ರಸ್ತೆಯಲ್ಲಿ ಹೋಗುತ್ತಿದ್ದವರ ಮೇಲೆ ದಾಳಿ ಮಾಡುತ್ತಿದ್ದು, ಜನರು ಆತಂಕಗೊಳ್ಳುತ್ತಿದ್ದಾರೆ. ಅವುಗಳ ಸಂತತಿ ನಿಯಂತ್ರಿಸದಿದ್ದಲ್ಲಿ ಮುಂದೆ ತೀವ್ರ ತೊಂದರೆಯಾಗುತ್ತದೆ ಎಂದರು.

ನಾಯಿಗಳನ್ನು ಹಿಡಿದು ಸಂತಾನಹರಣ ಶಸ್ತ್ರಚಿಕಿತ್ಸೆ ಮಾಡಿಸಿದ ಬಳಿಕ ಅವುಗಳನ್ನು ಮರಳಿ ಯಥಾಸ್ಥಳಕ್ಕೆ ತಂದು ಬಿಡಬೇಕೇ ಹೊರತು, ಅವುಗಳನ್ನು ಸಾಯಿಸಬಾರದೆಂದು ಸುಪ್ರೀಂಕೋರ್ಟ್ ಆದೇಶ ನೀಡಿರುವುದರಿಂದ, ಪಾಲಿಕೆ ಅಧಿಕಾರಿಗಳು ತರಾತುರಿ ಅಗತ್ಯ ಕ್ರಮವಹಿಸಬೇಕೆಂದು ಅವರು ತಿಳಿಸಿದರು.



ಬೀದಿ ನಾಯಿಗಳ ಹಾವಳಿ ನಿಯಂತ್ರಿಸುವಂತೆ ಮಾಜಿ ನಗರ ಪಾಲಿಕೆ ಸದಸ್ಯ ಎಸ್‌ಬಿಎಂ ಮಂಜು ಅವರು ಬುಧವಾರ ಪಾಲಿಕೆ ಆರೋಗ್ಯಾಧಿಕಾರಿ ಡಾ.ಎನ್.ಪಿ.ವೆಂಕಟೇಶ್ ಅವರಿಗೆ ಮನವಿ ಸಲ್ಲಿಸಿದರು.



ಪರಂಜ್ಯೋತಿ ಮಂಟೇಸ್ವಾಮಿ ಕುರಿತು ಆ.24ರಂದು ರಾಷ್ಟ್ರೀಯ ವಿಚಾರ ಸಂಕಿರಣ

ಮೈಸೂರು, ಆ.16(ಜಿಎ)–ಬೋಧಿ ವೃಕ್ಷ ಸೊಸೈಟಿ ಫಾರ್ ಡೆವಲಪ್‌ಮೆಂಟ್ ಸಂಸ್ಥೆ, ಕರ್ನಾಟಕ ಜಾನಪದ ಅಕಾಡೆಮಿ, ಮೈಸೂರು ವಿವಿ ಸಮಾಜ ಕಾರ್ಯ ವಿಭಾಗ ಹಾಗೂ ಮೈಸೂರು ಆಕಾಶವಾಣಿಗಳ ಸಂಯುಕ್ತಾಶ್ರಯದಲ್ಲಿ ಆ.24 ರಂದು ಬೆಳಗ್ಗೆ 11ಗಂಟೆಗೆ ಮೈಸೂರು ವಿವಿಯ ವಿಜ್ಞಾನ ಭವನದಲ್ಲಿ 'ಪರಂಜ್ಯೋತಿ ಮಂಟೇಸ್ವಾಮಿ; ಒಂದು ಮರು ದರ್ಶನ' ರಾಷ್ಟ್ರೀಯ ವಿಚಾರ ಸಂಕಿರಣ ಆಯೋಜಿಸಲಾಗಿದೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಆಕಾಶವಾಣಿಯ ಹಿರಿಯ ಉದ್ಘೋಷಕರಾದ ಡಾ.ಉಮೇಶ್ ಮೈಸೂರು ಈ ವಿಷಯ ತಿಳಿಸಿ, ಪ್ರೊ.ಎಚ್.ಎಸ್.ಶಿವಪ್ರಕಾಶ್, ಪ್ರೊ.ವೆಂಕಟೇಶ್ ಇಂದ್ವಾಡಿ, ಡಾ. ಬಂಜಗೆರೆ ಜಯಪ್ರಕಾಶ್, ಡಾ. ಶಂಕನಪುರ ಮಹದೇವ ವಿಚಾರ ಸಂಕಿರಣದಲ್ಲಿ ಪಾಲ್ಗೊಳ್ಳಲಿದ್ದಾರೆ ಎಂದರು.

ಜಾನಪದ ಅನುಭಾವಿಗಳಾದ ನೀಲಗಾರ ಪರಂಪರೆಯವರಿಗೆ ಧರೆಗೆ ದೊಡ್ಡವರಾದ ಪರಂಜ್ಯೋತಿ ಮಂಟೇಸ್ವಾಮಿಯವರ ಮಹಾ ಕಥನ ತಮ್ಮ ವೃತ್ತಿ ಗಾಯನದ ಭಾಗವೇ ಆಗಿದೆ. ಜೊತೆಗೆ ಬದುಕಿನ ಆಚರಣೆಯೂ ಆಗಿದೆ. ಹೀಗಾಗಿ ನಾಡಿನಾದ್ಯಂತ ಕನ್ನಡ ಜನಸಂಸ್ಕೃತಿಯ ಘನತೆಯನ್ನು ಪಸರಿಸುತ್ತಿರುವ ಮಂಟೇಸ್ವಾಮಿ ಪರಂಪರೆಯನ್ನು ಹೊಸ ಕಾಲದಲ್ಲಿ ಪುನರ್ ಅವಲೋಕಿಸುವ ಆಶಯದಿಂದ ಈ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮೈಸೂರು ನಾಗರಾಜ್, ಅಹಿಂದ ಜವರಪ್ಪ, ಎಂ.ಎಸ್.ಚಂದ್ರ ಉಪಸ್ಥಿತರಿದ್ದರು.

ವಿಶ್ವಕರ್ಮ ಯುವ ವೇದಿಕೆಯಿಂದ ನಾಳೆ ಪ್ರತಿಭಾ ಪುರಸ್ಕಾರ

ಮೈಸೂರು, ಆ.16(ಜಿಎ)–ಮೈಸೂರು ಜಿಲ್ಲಾ ವಿಶ್ವಕರ್ಮ ಯುವ ಜಾಗೃತಿ ವೇದಿಕೆ ವತಿಯಿಂದ ಆ.18 ರಂದು ಬೆಳಗ್ಗೆ 10.30ಕ್ಕೆ ನಗರದ ಜಗನ್ಮೋಹನ ಅರಮನೆ ಸಭಾಂಗಣದಲ್ಲಿ ಸಮುದಾಯದ ವಿದ್ಯಾರ್ಥಿಗಳಿಗಾಗಿ ಪ್ರತಿಭಾ ಪುರಸ್ಕಾರ ಮತ್ತು ಸಾಧಕರನ್ನು ಸನ್ಮಾನಿಸುವ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ವೇದಿಕೆ ಅಧ್ಯಕ್ಷ ಕೆ. ಕೆಂಡಗಣ್ಣ ವಿಶ್ವಕರ್ಮ ತಿಳಿಸಿದರು. ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಡಾ.ನೀಲಕಂಠಾಚಾರ್ಯ ಸ್ವಾಮೀಜಿ ಸಾನ್ನಿಧ್ಯ ವಹಿಸುವರು, ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ. ಮಹದೇವಪ್ಪ ಉದ್ಘಾಟಿಸುವರು, ಎಂಎಲ್‌ಸಿ ಡಾ.ಯತೀಂದ್ರ ಸಿದ್ದರಾಮಯ್ಯ ಮುಖ್ಯ ಅತಿಥಿಗಳಾಗಿ ಆಗಮಿಸಲಿದ್ದಾರೆ. ಎನ್. ನಂದಕುಮಾರ್ ಅಧ್ಯಕ್ಷತೆ ವಹಿಸುವರು ಎಂದರು. ಕಾರ್ಯಕ್ರಮದಲ್ಲಿ ಖ್ಯಾತ ಶಿಲ್ಪಿ ಅರುಣ್ ಯೋಗಿರಾಜ್, ಹುಬ್ಬಳ್ಳಿ–ಧಾರವಾಡ ಮಹಾನಗರ ಪಾಲಿಕೆ ಮೇಯರ್ ರಾಮಣ್ಣ ಬಡಿಗೇರ, ಬಿಗ್ ಬಾಸ್ ವಿಜೇತರಾದ ಕಾರ್ತಿಕ್ ಮಹೇಶ್, ಮಹಾನಟಿ ವಿಜೇತರಾದ ಪ್ರಿಯಾಂಕ ಅವರಿಗೆ 'ವಿಶ್ವಕರ್ಮ ರತ್ನ' ಪ್ರಶಸ್ತಿ ಪ್ರದಾನ ಮಾಡಿ, ಅಭಿನಂದಿಸಲಾಗುವುದು ಎಂದು ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ಉಪಾಧ್ಯಕ್ಷ ಸತೀಶ್, ಕಾರ್ಯದರ್ಶಿ ಸಿದ್ದರಾಜು, ಸಂಚಾಲಕರಾದ ಲಕ್ಷ್ಮಿ, ಲೋಕೇಶ್, ರಾಜು, ಉಪಸ್ಥಿತರಿದ್ದರು.




ಮೈಸೂರು ನಗರದ ಬೋಗಾದಿ ಮುಖ್ಯ ರಸ್ತೆಯಲ್ಲಿರುವ ಗಂಗೋತ್ರಿ ಪಬ್ಲಿಕ್ ಶಾಲೆಯಲ್ಲಿ 78ನೇ ಸ್ವಾತಂತ್ರ್ಯೋತ್ಸವ ದಿನಾಚರಣೆಯನ್ನು ಸಂಭ್ರಮದಿಂದ ಆಚರಿಸಲಾಯಿತು. ಸಂಸ್ಥೆ ಅಧ್ಯಕ್ಷ ಟಿ.ರಂಗಪ್ಪನವರು ಧ್ವಜಾರೋಹಣ ನೆರವೇರಿಸಿದರು. ಅಖಿಲ ಭಾರತ ವಾಕ್ ಮತ್ತು ಶ್ರವಣ ಶೈಕ್ಷಣಿಕ ಸಂಸ್ಥೆಯ ಸಹಾಯಕ ಪ್ರಾಧ್ಯಾಪಕರಾದ ಡಾ.ಪ್ರೀತಿ ವೆಂಕಟೇಶ್ ಹಾಗೂ ಮಾಜಿ ಯೋಧರಾದ ಟಿ.ಹೆಚ್.ರವಿಶಂಕರ್, ಆಡಳಿತಾಧಿಕಾರಿ ಕಾಂತಿನಾಯಕ್, ಮುಖ್ಯೋಪಾಧ್ಯಾಯ ಮೊಹಮ್ಮದ್ ಫಾರೂಕ್, ಶಿಕ್ಷಕ ವೃಂದ ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.



ಮೈಸೂರಿನ ಕೆಆರ್‌ಎಸ್ ಮುಖ್ಯ ರಸ್ತೆಯ ಜಿಎಸ್‌ಎಸ್‌ಎಸ್ ಸಿಂಹ ಸುಬ್ಬಲಕ್ಷ್ಮಿ ಪ್ರಥಮ ದರ್ಜೆ ಕಾಲೇಜಿನಲ್ಲಿ 78ನೇ ಸ್ವಾತಂತ್ರ್ಯೋತ್ಸವವನ್ನು ಆಚರಿಸಲಾಯಿತು. ಕಾಲೇಜಿನ ಪ್ರಾಂಶುಪಾಲರಾದ ಡಾ.ರಾಕೇಶ್ ಟಿ.ಎಸ್. ಧ್ವಜಾರೋಹಣ ನೆರವೇರಿಸಿದರು. ವಾಣಿಜ್ಯ ವಿಭಾಗದ ಮುಖ್ಯಸ್ಥರಾದ ಡಾ.ಕೃಷ್ಣ ಕೆ.ಎಸ್., ಬಿಸಿಎ ವಿಭಾಗದ ಮುಖ್ಯಸ್ಥ ದಯಾನಂದ ಕನ್ನಡ ವಿಭಾಗದ ಉಪನ್ಯಾಸಕರಾದ ಪುನೀತ್ ಕುಮಾರ್, ಬೆಳ್ಳೂರಿನ ಆನಂದ್ ಹಾಗೂ ಕಾಲೇಜಿನ ಉಪನ್ಯಾಸಕರು ಮತ್ತು ಸಿಬ್ಬಂದಿ ವರ್ಗ, ವಿದ್ಯಾರ್ಥಿ ಸಮೂಹವನ್ನು ಕಾಣಬಹುದು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

17.08.2024 ಶನಿವಾರ, ಮಳೆ ನಕ್ಷತ್ರ: ಮಖ 17.08.2024 ರಿಂದ 30.08.2024
ಕ್ರೋಧಿನಾಮ ಸಂವತ್ಸರ, ದಕ್ಷಿಣಾಯನ, ವರ್ಷ ಋತು, ಶ್ರಾವಣ ಮಾಸ, ಶುಕ್ಲ ಪಕ್ಷ,
ತಿಥಿ: ತ್ರಯೋದಶಿ, ನಕ್ಷತ್ರ: ಪೂಷಾ, ರಾಹುಕಾಲ: ಬೆಳಗ್ಗೆ 9 ರಿಂದ 10.30ರವರೆಗೆ

■ **ಶ್ರೀ ಅವಧೂತ ದತ್ತ ಪೀಠ ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮ:** 21ನೇ ಚಾತುರ್ಮಾಸ್ಯ ವ್ರತ, ಕಿರಿಯ ಸ್ವಾಮೀಜಿ ಶ್ರೀ ದತ್ತ ವಿಜಯಾನಂದ ತೀರ್ಥ ಸ್ವಾಮೀಜಿ ಅವರಿಂದ ದತ್ತಯಾಗ, ಶ್ರಾವಣ ಶನಿವಾರದ ಪ್ರಯುಕ್ತ ಶ್ರೀ ದತ್ತ ವೆಂಕಟೇಶ್ವರ ಸ್ವಾಮಿಗೆ ವಿಶೇಷ ದರ್ಶನ, ಸ್ಥಳ: ಆಶ್ರಮದ ಆವರಣ, ನಂಜನಗೂಡು ರಸ್ತೆ

■ **ಬಸವ ಭಾರತ ಪ್ರತಿಷ್ಠಾನ, ಸಮಸ್ತ ಬಸವಪರ ಸಂಘಟನೆಗಳ ಸಹಭಾಗಿತ್ವ :** ಬಸವ ಧರ್ಮ ಜಾಗೃತಿ, ಅಭಿಯಾನ, ಇಷ್ಟಲಿಂಗ ಧಾರಣೆ ಶಿವಯೋಗ, ವಚನ ಪಠಣ, ಶ್ರಾವಣ ಮಾಸದ ಪ್ರವಚನ, ಶಿವಬುದ್ಧಿ ಹಲ್ಲರೆ ಅವರಿಂದ ಕರ್ನಾಟಕ ಸಾಂಸ್ಕೃತಿಕ ನಾಯಕ ಬಸವಣ್ಣ ಕುರಿತು ಉಪನ್ಯಾಸ, ಸ್ಥಳ: ಸೋಮಶೇಖರ್‌ರವರ ಅನುರಾಗ ಮಕ್ಕಳ ಮನೆ, ದೇವಿರಮ್ಮನಹಳ್ಳಿ, ನಂಜನಗೂಡು ತಾ., ಬೆಳಗ್ಗೆ 9 ರಿಂದ.

■ **ಕಾವೇರಿ ಆಯುರ್ವೇದ ಆಸ್ಪತ್ರೆ :** ಆಮವಾತ (ರುಮಟೈಡ್ ಅರ್ಥೈಟೀಸ್) ಉಚಿತ ಚಿಕಿತ್ಸಾ ಶಿಬಿರ, ಸ್ಥಳ: ಕಾವೇರಿ ಆಯುರ್ವೇದ ಆಸ್ಪತ್ರೆ, ದೇವೇಗೌಡ ಸರ್ಕಲ್, ಬೆಳಗ್ಗೆ 9ಕ್ಕೆ.

■ **ಮೈಸೂರು ಜಿಲ್ಲಾ ಪತ್ರಕರ್ತರ ಸಂಘ :** ವೈನಾಡು ಪ್ರಕೃತಿ ವಿಕೋಪ ಮಾಧ್ಯಮ ಸವಾಲು–ಸಂವಾದ, ಉದ್ಘಾಟನೆ : ಜಿಪಂ ಮುಖ್ಯ ಕಾರ್ಯನಿರ್ವಾಹಕರಾದ ಶ್ರೀಮತಿ ಕೆ.ಎಂ. ಗಾಯತ್ರಿ, ಅಧ್ಯಕ್ಷತೆ : ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಕೆ. ದೀಪಕ್, ವಿಷಯ ಮಂಡನೆ : ಪ್ರಕೃತಿ ವಿಕೋಪ ನಿರ್ವಹಣಾ ಕೇಂದ್ರದ ಮುಖ್ಯಸ್ಥ ಡಾ. ಅಶೋಕ್ ಎಸ್. ಸಂಗನಾಳ, ಮುಖ್ಯ ಅತಿಥಿಗಳು : ಅನ್ವೇಷಣಾ ಸೇವಾ ಟ್ರಸ್ಟ್ ಸಂಸ್ಥಾಪಕ ಅಮರನಾಥ ರಾಜೇ ಅರಸ್, ಪ್ರಾಸ್ತಾವಿಕ ನುಡಿ : ಹಿರಿಯ ಪತ್ರಕರ್ತ ಕೆ. ನರಸಿಂಹಮೂರ್ತಿ, ಸ್ಥಳ: ಪತ್ರಕರ್ತರ ಭವನ, ಬೆಳಗ್ಗೆ 10ಕ್ಕೆ.

* **ಶ್ರೀನಿವಾಸ ಭಕ್ತ ಮಂಡಳಿ :** ಶ್ರಾವಣ ಶನಿವಾರ ಅಂಗವಾಗಿ ಭಕ್ತಾದಿಗಳಿಗೆ ಲಡ್ಡು ವಿತರಣೆ, ಸ್ಥಳ: ಶ್ರೀ ಲಕ್ಷ್ಮೀವೆಂಕಟರಮಣಸ್ವಾಮಿ ದೇವಸ್ಥಾನ, ಕೆ.ಆರ್.ಎಸ್. ರಸ್ತೆ, ಬೆಳಗ್ಗೆ 10 ರಿಂದ.

■ **ಮೈಸೂರು ಆರ್ಟ್ ಗ್ಯಾಲರಿ :** ಕಲಾವಿದೆ ಡಾ. ಜಮುನಾರಾಣಿ ವಿ. ಮಿರ್ಲೆ ಅವರು ರಚಿಸಿರುವ ಕಲಾಕೃತಿಗಳ ಪ್ರದರ್ಶನ ಹಾಗೂ ಸಾಧ್ಯಸಿದ್ಧಿ ಮತ್ತು ಜೀವನಯಾನ ಕೃತಿಗಳ ಲೋಕಾರ್ಪಣೆ, ಉದ್ಘಾಟನೆ : ರಾಮ್‌ಸನ್ಸ್ ಕಲಾ ಪ್ರತಿಷ್ಠಾನದ ಆರ್.ಜಿ. ಸಿಂಗ್, ಸಾಧ್ಯಸಿದ್ಧಿ ಕೃತಿ ಲೋಕಾರ್ಪಣೆ : ಸಂಸ್ಕೃತ ವಿದ್ವಾನ್ ಡಾ. ಹೆಚ್.ವಿ. ನಾಗರಾಜರಾವ್, ಜೀವನಯಾನ ಕೃತಿ ಬಿಡುಗಡೆ : ಲೇಖಕ ಡಾ. ಸಿ. ನಾಗಣ್ಣ, ಅಧ್ಯಕ್ಷತೆ : ಸಾಹಿತಿ ಎಲ್. ಶಿವಲಿಂಗಪ್ಪ, ಉಪಸ್ಥಿತರು : ಬಿ.ಆರ್. ನಾಗರತ್ನ, ಡಾ. ಜಮುನಾರಾಣಿ ವಿ. ಮರ್ಲೆ, ಸಾಹಿತಿ ಪ್ರೊ. ಸಿ.ಪಿ. ಕೃಷ್ಣಕುಮಾರ್, ಪ್ರೊ. ಸೂರ್ಯನಾರಾಯಣಸ್ವಾಮಿ, ಮೋಹನ್ ವರ್ಣೇಕರ್, ಬಿ.ಎನ್. ಶ್ರೀನಿವಾಸ್, ಅರಸಿ ಕುಮಾರ್, ರಂಗನಾಥ್, ಕಾರ್ತಿಕ್, ಸ್ಥಳ: ಸುಚಿತ್ರಾ ಆರ್ಟ್ ಗ್ಯಾಲರಿ, ಕಲಾಮಂದಿರ, ಬೆಳಗ್ಗೆ 10.30ಕ್ಕೆ

■ **ಸೃಷ್ಟಿ ಪಬ್ಲಿಕೇಷನ್ಸ್ :** ಹಳ್ಳಿ ಹಕ್ಕಿ ಅಡಗೂರು ಹೆಚ್. ವಿಶ್ವನಾಥ್ ಅವರ 'ಪ್ರಾಚೀನ ಪಾರ್ಲಿಮೆಂಟ್‌ಗಳ ಪ್ರದಕ್ಷಿಣೆಗಳು' ಪುಸ್ತಕ ಬಿಡುಗಡೆ ಸಮಾರಂಭ, ಪುಸ್ತಕ ಲೋಕಾರ್ಪಣೆ : ಸಂಸದ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್, ಅಧ್ಯಕ್ಷತೆ : ಹಿರಿಯ ವಿಮರ್ಶಕ ಡಾ. ನರಹಳ್ಳಿ ಬಾಲಸುಬ್ರಹ್ಮಣ್ಯ, ಮುಖ್ಯ ಅತಿಥಿಗಳು : ಮೈಸೂರು ವಿವಿ ಕುಲಪತಿ ಪ್ರೊ. ಎನ್.ಕೆ. ಲೋಕನಾಥ್, ಪುಸ್ತಕ ಪರಿಚಯ : ವಿಶ್ರಾಂತ ಪ್ರಾಧ್ಯಾಪಕ ರಾಜಪ್ಪ ದಳವಾಯಿ, ಉಪಸ್ಥಿತರು : ವಿಧಾನ ಪರಿಷತ್ ಸದಸ್ಯ ಹೆಚ್. ವಿಶ್ವನಾಥ್, ಸೃಷ್ಟಿ ನಾಗೇಶ್, ಸ್ಥಳ: ರಾಣಿ ಬಹದ್ದೂರ್ ಸಭಾಂಗಣ, ಬೆಳಗ್ಗೆ 11ಕ್ಕೆ.

■ **ಕರ್ನಾಟಕ ಜಾನಪದ ಅಕಾಡೆಮಿ, ಬೆಂಗಳೂರು, ಪ್ರಾದೇಶಿಕ ಜಾನಪದ ಅಧ್ಯಯನ ಮತ್ತು ಜನಪದ ಕಲಿಕಾ ಕೇಂದ್ರ, ಕರ್ನಾಟಕ ಜಾನಪದ ವಿಶ್ವವಿದ್ಯಾನಿಲಯ, ಏಕತಾರಿ ಸಾಂಸ್ಕೃತಿಕ ಸಂಘಟನೆ :** ಶಾಲಾ ಮತ್ತು ಕಾಲೇಜು ವಿದ್ಯಾರ್ಥಿಗಳಿಗೆ ಜನಪದ ನೃತ್ಯಗಳು ಮತ್ತು ಜನಪದ ಗೀತೆಗಳ ಕಲಿಕಾ ತರಬೇತಿ ಶಿಬಿರ, ಸ್ಥಳ: ಕಿರು ರಂಗಮಂದಿರ ಆವರಣ, ಕಲಾಮಂದಿರ, ಸಂಜೆ 4 ರಿಂದ.

■ **ಜಗದ್ಗುರು ಶ್ರೀ ಮನ್ಮಧ್ವಾಚಾರ್ಯರ ಮೂಲ ಸಂಸ್ಥಾನ, ಶ್ರೀ ರಾಜೇಂದ್ರ ತೀರ್ಥರ ಪೂರ್ವಾದಿ ಮಠ, ಶ್ರೀ ಮುನಿತ್ರಯ ಪೀಠ, ಶ್ರೀ ವ್ಯಾಸರಾಜ ಮಠ (ಸೋಸಲೆ):** ಶ್ರೀ ವಿದ್ಯಾ ಕರ್ಣಾಟಕ ಸಿಂಹಾಸನಾಧೀಶ್ವರರಾದ ಶ್ರೀ ಶ್ರೀ 1008 ಶ್ರೀ ವಿದ್ಯಾಶ್ರೀಶ ತೀರ್ಥ ಶ್ರೀಪಾದಂಗಳವರ 8ನೇ ಚಾತುರ್ಮಾಸ್ಯ, ಸ್ಥಳ: ಶ್ರೀ ವ್ಯಾಸರಾಜ ಮಠ, ಸೋಸಲೆ ಕ್ಷೇತ್ರ, ಸಂಜೆ 4.30 ಗಂಟೆಯಿಂದ.

■ **ಶರಣ ಸಾಹಿತ್ಯ ಪರಿಷತ್ತು, ಮೈಸೂರು ನಗರ ಘಟಕ, ಕದಳಿ ಮಹಿಳಾ ವೇದಿಕೆ :** ವಚನ–ಶ್ರಾವಣ, ಮನೆ ಮನೆಗೆ ಶ್ರಾವಣ ಮಾಸದ ಶರಣ ಸಂದೇಶ, ಮಹಾರಾಣಿ ಪದವಿ ಕಾಲೇಜು ಪ್ರಾಧ್ಯಾಪಕ ಡಾ. ಕೆ.ಇ. ಗೋವಿಂದೇಗೌಡ ಅವರಿಂದ ಕಳೆ ಮೆಳೆ ಕಿತ್ತಲ್ಲದೆ ಹೊಲ ಶುದ್ಧವಲ್ಲ–ಮೋಳಿಗೆ ಮಾರಯ್ಯ ಕುರಿತು ಉಪನ್ಯಾಸ, ಸ್ಥಳ: ಎಂ. ಸಿದ್ದಮಲ್ಲಪ್ಪ, 264, ನಿಸರ್ಗ ನಿಲಯ, ತ್ಯಾಗಮಾರ್ಗ, ಸಿದ್ಧಾರ್ಥ ಬಡಾವಣೆ, ಸಂಜೆ 5.30ಕ್ಕೆ.

■ **ಶ್ರೀರಾಮಕೃಷ್ಣ ಆಶ್ರಮ :** ಸ್ವಾಮಿ ಮುಕ್ತಿದಾನಂದ ಅವರಿಂದ ಎಸ್ಸೆನ್ಷಿಯಲ್ಸ್ ಆಫ್ ಸ್ಪಿರಿಚ್ಯುಯಲ್ ಲೈಫ್ ಕುರಿತು ಉಪನ್ಯಾಸ, ಸ್ಥಳ: ಸ್ವಾಮಿ ಶಾಂಭವಾನಂದಜೀ ಸ್ಮಾರಕ ಸಭಾಂಗಣ, ಯಾದವಗಿರಿ, ಸಂಜೆ 6 ರಿಂದ.

■ **ಗಾನಭಾರತೀ, ರಾಸವೃಂದ :** ರಾಸವೃಂದ ನೃತ್ಯ ಕಲಾಶಾಲೆ ವಿದ್ಯಾರ್ಥಿಗಳಿಂದ ನರ್ತನ ನಮನ ಭರತನಾಟ್ಯ ಕಾರ್ಯಕ್ರಮ, ವಿದುಷಿ ನಂದಿನಿ ಈಶ್ವರ್ ಬರೆದಿರುವ ನರ್ತನದ ಮಧುರ ಭಕ್ತಿಯ ಮಾರ್ಗದಲ್ಲಿ ಗೀತಗೋವಿಂದ ಪುಸ್ತಕ ಬಿಡುಗಡೆ, ಪುಸ್ತಕ ಬಿಡುಗಡೆ : ಬೆಳಗೊಳದ ಶ್ರೀ ವಿಶ್ವಮಂಗಳ ಲಕ್ಷ್ಮೀನರಸಿಂಹಸ್ವಾಮಿ ದೇವಸ್ಥಾನದ ಅಧ್ಯಕ್ಷ ವಿದ್ವಾನ್ ವೀರರಾಘವಚಾರ್ಯಸ್ವಾಮಿ, ಗೌರವ ಅತಿಥಿಗಳು : ವಿದುಷಿ ಡಾ. ಕೃಪಾ ಫಡ್ಕೆ, ರಾಸವೃಂದದ ಕಲಾವಿದರಾದ ರೋಹಿತ್ ಈಶ್ವರ್, ನಿತ್ಯಶ್ರೀ ಎಂ.ಎಸ್., ಚಿನ್ಮಯೀ ಭಾರದ್ವಾಜ್, ಅನಿಷ ಎಂ.ಎ. ಕುಂದನಿಕ ಎಲ್. ಪ್ರತೀಕ್ಷ ಜಿ. ಹಾಗೂ ಎಸ್. ಕೀರ್ತನ ಅವರಿಂದ ಜಯದೇವನ ಗೀತಗೋವಿಂದನ ಅಷ್ಟಪದಿಗಳ ನೃತ್ಯ ಕಾರ್ಯಕ್ರಮ, ಸ್ಥಳ: ಗಾನಭಾರತೀ ಸಭಾಂಗಣ, ಆದಿಚುಂಚನಗಿರಿ ರಸ್ತೆ, ಕುವೆಂಪುನಗರ, ಸಂಜೆ 6ಕ್ಕೆ

■ **ನಾದಬ್ರಹ್ಮ ಸಂಗೀತ ಸಭಾ :** ವಿ. ರಾಮನ್ ಸಂಸ್ಮರಣ ಕಾರ್ಯಕ್ರಮ, ವಿದ್ವಾನ್ ವಿಕ್ರಮ್ ಪಿ. ರಾಮ್ ಅವರಿಂದ ಕರ್ನಾಟಕ ಶಾಸ್ತ್ರೀಯ ಸಂಗೀತ, ವಿದ್ವಾನ್ ಬಿ.ಕೆ. ರಘು–ಪಿಟೀಲು, ವಿದ್ವಾನ್ ಹೆಚ್.ಎಲ್. ಶಿವಶಂಕರಸ್ವಾಮಿ–ಮೃದಂಗ, ವಿದ್ವಾನ್ ಎಸ್. ರಮೇಶ್–ಘಟಂ, ಸ್ಥಳ: ನಾದಬ್ರಹ್ಮ ಸಂಗೀತ ಸಭಾ, ಜೆಎಲ್‌ಬಿ ರಸ್ತೆ, ಸಂಜೆ 6ಕ್ಕೆ.

■ **ಇನ್ಫೋಸಿಸ್ ಪ್ರತಿಷ್ಠಾನ, ಭಾರತೀಯ ವಿದ್ಯಾಭವನ, ಬೆಂಗಳೂರು–ಮೈಸೂರು :** 133ನೇ ಸಾಂಸ್ಕೃತಿಕ ಕಾರ್ಯಕ್ರಮ ಅಮೃತಧಾರೆ, ರಮೇಶ್ ಚಂದ್ರ ಅವರಿಂದ ಗಾಯನ, ಶ್ರೀಮತಿ ರಶ್ಮಿ ಚಿಕ್ಕಮಗಳೂರು–ಗಾಯನ, ರಘುನಾಥ–ತಬಲ, ನಾಗಲಿಂಗು–ಕೀಬೋರ್ಡ್, ಗುರುದತ್ತ ಹುಣಸೂರು–ರಿದಂ ಪ್ಯಾಡ್, ಸ್ಥಳ: ಭಾರತೀಯ ವಿದ್ಯಾಭವನ, ವಿಜಯನಗರ 1ನೇ ಹಂತ, ಸಂಜೆ 6ಕ್ಕೆ.

■ **ಶ್ರೀ ಸುತ್ತೂರು ಮಠ, ಮೈಸೂರು ಶಾಖೆ :** ಶ್ರಾವಣಮಾಸ ಪೂಜಾನುಷ್ಠಾನ ಮತ್ತು ಪ್ರವಚನ, ಮಹಾರಾಣಿ ಕಲಾ ಕಾಲೇಜು ಪ್ರಾಂಶುಪಾಲ ಡಾ.ಬಿ.ವಿ. ವಸಂತಕುಮಾರ್ ಅವರಿಂದ 'ಲಕ್ಕಣ್ಣ ದಂಡೇಶ ವಿರಚಿತ ಶಿವತತ್ತ್ವ ಚಿಂತಾಮಣಿ' ಕುರಿತು ಪ್ರವಚನ, ವಿದುಷಿ ವಸಂತ ವೆಂಕಟೇಶ್ ಅವರಿಂದ ವಾಚನ, ಸ್ಥಳ: ಶ್ರೀ ಸುತ್ತೂರು ಮಠ, ಚಾಮುಂಡಿಬೆಟ್ಟದ ತಪ್ಪಲು, ಸಂಜೆ 6.30 ರಿಂದ.

■ **ವೀರಭದ್ರಸ್ವಾಮಿ ಹಾಗೂ ಚಾಮರಾಜೇಶ್ವರ ಸ್ವಾಮಿ ದೇವಸ್ಥಾನ:** ಶ್ರಾವಣ ಮಾಸದ ಪೂಜೆ, ಸ್ಥಳ: ದೇವಸ್ಥಾನದ ಆವರಣ, ಕೆ.ಆರ್.ಮೊಹಲ್ಲಾ, ಸಂಜೆ 7ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 CFTRI 'ಶೋಧ – ಅನುಶೋಧ ಪ್ರಾಯೋಜಿತ ಬಾನುಲಿ ಸರಣಿ, ಪ್ರಾಯೋಜಕರು : CSIR, CFTRI, Mysuru, ಪ್ರಸ್ತುತಿ : ಸಿ.ಎಫ್.ಟಿ.ಆರ್.ಐ ನಿವೃತ್ತ ನಿರ್ದೇಶಕರಾದ ಪದ್ಮಶ್ರೀ ಡಾ. ವಿ. ಪ್ರಕಾಶ್, 6.40 ಅರಿವಿನ ಶಿಖರ : ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ ಗಾಯನ–ಅಮೃತಾ ನಿತಿನ್ ಶಾಸ್ತ್ರಿ, ಎಂ. ಆರ್. ಸುಧಾ, ವ್ಯಾಖ್ಯಾನ : ಡಾ. ಲತಾ , ಮೈಸೂರು, 6.50 ರೈತರಿಗೆ ಸಲಹೆ, 7.15 ಭಾವಗೀತೆಗಳು, 8.30 'ಹಾದಿಯಲ್ಲಿ ಕಂಡ ಮುಖ' ಬಾನುಲಿ ಸರಣಿ, ಪ್ರಸ್ತುತಿ : ಅಬ್ದುಲ್ ರಶೀದ್, 10.00 ಕರ್ನಾಟಕ ಶಾಸ್ತ್ರೀಯ ಸಂಗೀತ : ಎಂ. ಎಸ್. ಗೋಪಾಲಕೃಷ್ಣನ್–ವೈಯೋಲಿನ್ ಸೋಲೊ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ 'ನಮ್ಮೂರ್ ಹೆಸರು', ಪ್ರಸ್ತುತಿ : ಡಾ. ಮೈಸೂರು ಉಮೇಶ್

ಮಧ್ಯಾಹ್ನ: 12.30 ದೇವರನಾಮ, 12.45 ಜನಪದ ಸಂಗೀತ, 1.20 ಭಾವಗೀತೆಗಳು, 3.00 ಹಳ್ಳಿ ಹಾಡು, 3.30 ಮಕ್ಕಳ ಮಂಟಪ–ಅರಿವು ಶಾಲೆಯ ಮಕ್ಕಳಿಂದ ಕಾರ್ಯಕ್ರಮ ವೈವಿಧ್ಯದ ಎರಡನೇ ಭಾಗ, 4.00 ನಾಟಕ 'ವಾರ್ಮಿಳೆ', ರಚನೆ:ಗೀತಾ ಸೀತಾರಾಂ, ನಿರ್ದೇಶನ :ಹೆಚ್. ಎಸ್. ಸರಸ್ವತಿ, 4.30 ನೆನಪಿನಂಗಳ (ಧ್ವನಿ ಭಂಡಾರದಿಂದ) ಹಿರಿಯ ಸ್ವಾತಂತ್ರ್ಯ ಹೋರಾಟಗಾರ ಬಿ. ಆರ್. ಪ್ರಾಣೇಶ್ ರಾವ್ ಅವರೊಂದಿಗೆ ಜಿ. ಸತ್ಯನಾರಾಯಣ ಅವರು ನಡೆಸಿದ್ದ ಸಂವಾದ, 6.50 ಕೃಷಿರಂಗ : ಕಿಸಾನ್‌ವಾಣಿ–ಭಾರತ ಸರ್ಕಾರದ ಕೃಷಿ ಹಾಗೂ ರೈತ ಕಲ್ಯಾಣ ಸಚಿವಾಲಯ ಪ್ರಾಯೋಜಿತ ಕಾರ್ಯಕ್ರಮ, ಕೃಷಿ ದೀವಿಗೆ : ಸಂಶೋಧನಾ ಸಂಸ್ಥೆಯೊಂದಿಗೆ ಕೃಷಿ ಕಲಿಕೆ ಕುರಿತ ಬಾನುಲಿ ಸರಣಿ ಕಬ್ಬಿನಲ್ಲಿ ಅಂಗಾಂಶ ಕೃಷಿ ಹಾಗೂ ಪೀಡೆ ನಿರ್ವಹಣೆ ಈ ಕುರಿತು ಸಂವಾದ. ಭಾಗವಹಿಸುತ್ತಾರೆ: ಮಂಡ್ಯದ ವಿ. ಸಿ. ಫಾರಂ ವಲಯ ಕೃಷಿ ಸಂಶೋಧನಾ ಕೇಂದ್ರದ ಸಹಾಯಕ ಪ್ರಾಧ್ಯಾಪಕರಾದ ಯೂಸುಫ್ ಅಬ್ಬಾಸ್ ಮತ್ತು ನಂದೀಶ್. ಜೆ.ಎಸ್, ಪ್ರಸ್ತುತಿ :ಎನ್. ಕೇಶವಮೂರ್ತಿ, 8.00 ಯುವವಾಣಿ – ರಾಷ್ಟ್ರೀಯ ಬಾಹ್ಯಾಕಾಶ ದಿನ ಅಂದರೆ ನ್ಯಾಷನಲ್ ಸ್ಪೇಸ್ ಡೇ ಸಂಬಂಧವಾಗಿ 'ಬಾಹ್ಯಾಕಾಶದಲ್ಲಿ ಭಾರತದ ಸಾಧನೆ' ಕುರಿತು ಮಾತುಕತೆ. ಭಾಗವಹಿಸುತ್ತಾರೆ : ಕಾವ್ಯಶ್ರೀ. ಆರ್. ರಾವ್, ಎ. ಆರ್. ಕೌಸಲ್ಯಾ ರಘುರಾಂ ಮತ್ತು ಚರಣ್. ಎಚ್.ಎನ್, ನಡೆಸಿಕೊಡುತ್ತಾರೆ: ಅಮೋಘವರ್ಷ. ಎನ್ ರಾಜ್ಯವ್ಯಾಪಿ ಪ್ರಸಾರವಾಗುವ ಈ ಕಾರ್ಯಕ್ರಮ ಆಕಾಶವಾಣಿ ಮೈಸೂರು ಕೇಂದ್ರದ ಕೊಡುಗೆ, 9.30 ಸವಿನೆನಪು–ಹಳೆಯ ಕನ್ನಡ ಚಿತಗೀತೆಗಳು, 10.00 ರಾಷ್ಟ್ರೀಯ ಸಂಗೀತ ಕಾರ್ಯಕ್ರಮ, ಪಿ. ಪದ್ಮೇಶ್ – ಗಾಯನ

ಶೀಘ್ರದಲ್ಲೇ ಸಿದ್ದರಾಮಯ್ಯ ಸಂಪುಟಕ್ಕೆ ಸರ್ಜರಿ ಸಾಧ್ಯತೆ

7 ರಿಂದ 8 ಮಂದಿ ಹೊಸಬರಿಗೆ ಅವಕಾಶ?

ಬೆಂಗಳೂರು, ಆ.16–ಸಿದ್ದರಾಮಯ್ಯ ಸರ್ಕಾರದ ಸಂಪುಟಕ್ಕೆ ಸರ್ಜರಿ ನಡೆಯಲಿದ್ದು, 7 ರಿಂದ 8 ಸಚಿವರನ್ನು ಕೈಬಿಟ್ಟು ಹೊಸಬರಿಗೆ ಅವಕಾಶ ಕಲ್ಪಿಸಲಾಗುವುದು ಎಂದು ಕಾಂಗ್ರೆಸ್ ಮೂಲಗಳು ತಿಳಿಸಿವೆ.



ಕರ್ನಾಟಕದ ಕೆಲ ಸಚಿವರು ಸಮರ್ಪಕವಾಗಿ ಕೆಲಸ ಮಾಡದೇ ಇರುವುದರಿಂದ ಸರ್ಕಾರಕ್ಕೆ ಕೆಟ್ಟ ಹೆಸರು ಬರುವ ಸಾಧ್ಯತೆ ಇದೆ. ಹೀಗಾಗಿ ಮುಂದಿನ ಚಳಿಗಾಲ ಅಧಿವೇಶನದ ಒಳಗೆ ಅಥವಾ ನಂತರ ಸಂಪುಟ ಪುನರ್ ರಚನೆ ಮಾಡಬೇಕೆಂದು ಎಐಸಿಸಿ ವರಿಷ್ಠರು ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರಿಗೆ ಖಡಕ್ ಸೂಚನೆ ನೀಡಿದ್ದಾರೆ ಎನ್ನಲಾಗಿದೆ.

ಇತ್ತೀಚೆಗಷ್ಟೇ ಕರ್ನಾಟಕ ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ ಮತ್ತು ಎಐಸಿಸಿ ಪ್ರಧಾನ ಕಾರ್ಯದರ್ಶಿ ಕೆ.ಸಿ.ವೇಣುಗೋಪಾಲ್ ಅವರು ಎಐಸಿಸಿ ಪ್ರತಿನಿಧಿಗಳಾಗಿ ದಿಢೀರನೆ ಬೆಂಗಳೂರಿಗೆ ಭೇಟಿ ನೀಡಿ ಸಂಪುಟ ಸದಸ್ಯರ ಸಭೆ ನಡೆಸಿದ್ದರು. ಈ ಸಭೆಯಲ್ಲಿ ಕೆಲ ಸಚಿವರ ಕಾರ್ಯವೈಖರಿ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿದ್ದ ಅವರು, ತಮ್ಮ ವರ್ತನೆ ಬದಲಿಸಿಕೊಂಡು ಸಮರ್ಪಕವಾಗಿ ಕೆಲಸ ಮಾಡದಿದ್ದಲ್ಲಿ ಸಚಿವ ಸ್ಥಾನ ಕಳೆದುಕೊಳ್ಳಬೇಕಾಗುತ್ತದೆ ಎಂಬ ಎಚ್ಚರಿಕೆ ನೀಡಿದ್ದರು ಎಂದು ಹೇಳಲಾಗಿದೆ.

ದಿಢೀರನೆ ಎಐಸಿಸಿ ಪ್ರತಿನಿಧಿಗಳು ಬೆಂಗಳೂರಿಗೆ ಆಗಮಿಸಿದಾಗ ಅವರನ್ನು ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಸ್ವಾಗತಿಸಿದ್ದ ಗೃಹ ಸಚಿವ ಡಾ. ಜಿ.ಪರಮೇಶ್ವರ್ ಅವರು, ದೆಹಲಿ ವರಿಷ್ಠರು ಯಾವ ಅಜೆಂಡಾ ಇಟ್ಟುಕೊಂಡು ಬೆಂಗಳೂರಿಗೆ ಬಂದಿದ್ದಾರೋ ಗೊತ್ತಿಲ್ಲ ಎಂದು ಮಾಧ್ಯಮಗಳಿಗೆ ಪ್ರತಿಕ್ರಿಯಿಸಿದ್ದರು.

ಅಂದು ನಡೆದ ಸಭೆಯಲ್ಲಿ ಕೆಲ ಸಚಿವರಿಗೆ ದೆಹಲಿ ಪ್ರತಿನಿಧಿಗಳು ಎಚ್ಚರಿಕೆ ನೀಡಿದ್ದಾರೆ ಎಂದು ಹೇಳಲಾಗುತ್ತಿತ್ತು. ಆದರೆ ಸಭೆ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ್ದ ಕೆ.ಸಿ.ವೇಣುಗೋಪಾಲ್, ರಾಜ್ಯಪಾಲರು, ಮುಖ್ಯಮಂತ್ರಿಗಳಿಗೆ ನೋಟಿಸ್ ನೀಡಿದ್ದ ಬಗ್ಗೆ ಹರಿಹಾಯ್ದಿದ್ದರು. ಅಲ್ಲದೇ ಮುಖ್ಯಮಂತ್ರಿಗಳ ಬೆಂಬಲಕ್ಕೆ ಎಐಸಿಸಿ ನಿಲ್ಲುವುದಾಗಿ ಹೇಳಿದ್ದರು. ಆದರೆ ಸಂಪುಟ ಸರ್ಜರಿ ಬಗ್ಗೆ ಅಂದು ಮಾಧ್ಯಮ ಪ್ರತಿನಿಧಿಗಳು ಕೇಳಿದ ಪ್ರಶ್ನೆಗೆ ಪ್ರತಿಕ್ರಿಯೆ ನೀಡಿರಲಿಲ್ಲ ಎಂಬುದನ್ನು ಸ್ಮರಿಸಬಹುದು.

ಹೊಸದಾಗಿ ಸಂಪುಟಕ್ಕೆ ಸೇರ್ಪಡೆಯಾಗಲಿರುವವರ ಪಟ್ಟಿಯಲ್ಲಿ ವಿಧಾನ ಪರಿಷತ್ ಸದಸ್ಯ ಬಿ.ಕೆ.ಹರಿಪ್ರಸಾದ್ ಅವರ ಹೆಸರು ಇದೆ ಎಂದು ಹೇಳಲಾಗಿದ್ದು, ಈ ಹಿನ್ನೆಲೆಯಲ್ಲೇ ಸಿದ್ದರಾಮಯ್ಯ ಆಹ್ವಾನದ ಮೇರೆಗೆ ಅವರ ನಿವಾಸಕ್ಕೆ ತೆರಳಿದ್ದ ಹರಿಪ್ರಸಾದ್, ಸುಮಾರು 30 ನಿಮಿಷ ಕಾಲ ಚರ್ಚೆ ನಡೆಸಿದ್ದರು. ಪದೇ ಪದೆ ಸಿದ್ದರಾಮಯ್ಯ ವಿರುದ್ಧ ಸಾರ್ವಜನಿಕವಾಗಿ ಕಿಡಿಕಾರುತ್ತಿದ್ದ ಹರಿಪ್ರಸಾದ್ ಅವರು, ಈ ಭೇಟಿಯ ನಂತರ ಮೌನ ವಹಿಸಿರುವುದು ಗಮನಾರ್ಹ.











ಸಾರ್ವಜನಿಕ ತಿಳುವಳಿಕೆ ನೋಟೀಸು

ಈ ಕೆಳಗೆ ಅನುಸೂಚಿಯಲ್ಲಿ ವಿವರಿಸಿರುವ ಸ್ವತ್ತನ್ನು, ನಮ್ಮ ಕಕ್ಷಿದಾರರು ಅನೂಸೂಚಿ ಸ್ವತ್ತಿನ ಮಾಲೀಕರಾದ ಶ್ರೀಮತಿ, ಪ್ರತಿಭಾ ಸುರೇಶ್, ಕೋಂ. ಶ್ರೀ ಸೋಮಸುಂದರ ಸುರೇಶ್, ವಾಸ: ನಂ. 102, ಏವಾ ರೆಸಿಡೆನ್ಸಿ, ವೆಂಕಟಾದ್ರಿ ಬಡಾವಣೆ, 6ನೇ ಅಡ್ಡ ರಸ್ತೆ, ಪಾಂಡುರಂಗ ನಗರ, ಜೆ.ಪಿ ನಗರ, 7ನೇ ಫೇಸ್, ಬೆಂಗಳೂರು–560076 ರವರ ಸ್ವಾಧೀನಾನುಭವ, ಹಕ್ಕು ಮತ್ತು ಮಾಲೀಕತ್ವ ಕ್ಕೊಳಪಟ್ಟ ಹಾಗೂ ಯಾವುದೇ ಋಣಭಾರಗಳಿಲ್ಲದ ಷೆಡ್ಯೂಲ್ ಸ್ವತ್ತನ್ನು ಸದರಿ ಶ್ರೀಮತಿ. ಪ್ರತಿಭಾ ಸುರೇಶ್ ರವರಿಂದ ಕ್ರಯಕ್ಕೆಪಡೆಯಲು ಹೊರಟಿರುತ್ತಾರೆ. ಸದರಿ ಸ್ವತ್ತಿನ ಮೇಲೆ ಯಾರಿಗಾದರೂ ಯಾವುದೇ ವಿಧವಾದ ಹಕ್ಕು, ಬಾಧ್ಯತೆ, ಆಕ್ಷೇಪಣೆ ಗಳೇನಾದರೂ ಇದ್ದ ಪಕ್ಷದಲ್ಲಿ ಸದರಿ ಹಕ್ಕು, ಬಾಧ್ಯತೆ, ಆಕ್ಷೇಪಣೆಗಳನ್ನು ಪುಷ್ಟೀಕರಿಸುವಂತಹ ಸೂಕ್ತ ದಾಖಲಾತಿ ಗಳೊಂದಿಗೆ ಈ ನೋಟೀಸು ಪ್ರಕಟವಾದ 10 (ಹತ್ತು) ದಿನಗಳ ಒಳಗೆ ಕೆಳಕಂಡ ವಕೀಲರ ಕಛೇರಿಗೆ ಸಲ್ಲಿಸತಕ್ಕದ್ದು ನಂತರ ಬರುವ ಆಕ್ಷೇಪಣೆಗಳು ನಮ್ಮ ಕಕ್ಷಿದಾರರರನ್ನು ಬದ್ಧಪಡಿಸುವುದಿಲ್ಲವೆಂದು ಈ ಮೂಲಕ ಕೃತಪಡಿಸಿರುತ್ತದೆ.

ಅನುಸೂಚಿ

ಮೈಸೂರು ತಾಲ್ಲೂಕು, ಬೋಗಾದಿ ಗ್ರಾಮದಲ್ಲಿ ಯಶೋಧರ ಹಿಂದಿ ಗೃಹ ನಿರ್ಮಾಣ ಸಹಕಾರ ಸಂಘ ಸೋಂ. ಮೈಸೂರು–04 ರವರು ರಚಿಸಿ ನಿರ್ಮಿಸಿರುವ ಸಿದ್ಧಲಿಂಗೇಶ್ವರ ನಗರ ಎಕ್ಸ್‌ಟೆನ್ಸನ್ ಬಡಾವಣೆಯಲ್ಲಿರುವ ನಿವೇಶನ ಸಂಖ್ಯೆ: 193 ಕ್ಕೆ ಚಕ್ಕುಬಂದಿ: ಪೂರ್ವಕ್ಕೆ : ಸ್ವತ್ತಿನ ಸಂಖ್ಯೆ: 194, ಪಶ್ಚಿಮಕ್ಕೆ : ಸ್ವತ್ತಿನ ಸಂಖ್ಯೆ: 192, ಉತ್ತರಕ್ಕೆ : ರಸ್ತೆ, ದಕ್ಷಿಣಕ್ಕೆ : ಸ್ವತ್ತಿನ ಸಂಖ್ಯೆ: 188. ಈ ಮಧ್ಯೆಯಿರುವ ವಿಸ್ತೀರ್ಣ ಪೂರ್ವ ಪಶ್ಚಿಮ 30 ಅಡಿ ದಕ್ಷಿಣೋತ್ತರ 40 ಅಡಿಗಳುಳ್ಳ ಪೂರ್ತಾ ಖಾಲಿ ನಿವೇಶನ.

Sd/- **A.C. Nataraj**, B.Sc, M.L, Advocate, No. 33/1, 2 & 3, J.L.B Road, Tagaduru Ramachandra Rao Circle, Vidyaranyapuram, Mysuru-57008, Mobile: 9448439192, Email: acnataraj@gmail.com.

ದಿನಾಂಕ: 15.08.2024

ಸಾರ್ವಜನಿಕ ಪ್ರಕಟಣೆ

ಸಾರ್ವಜನಿಕರ ಅವಗಾಹನೆಗೆ ತಿಳಿಯಪಡಿಸುವುದೇನೆಂದರೆ ನನ್ನ ಕಕ್ಷಿದಾರರಾದ–ಬೆಂಗಳೂರು–10, ಚಿಕ್ಕ ಬಸ್ತಿ ಹತ್ತಿರ, ವಿಶ್ವೇಶ್ವರಯ್ಯ ಬಡಾವಣೆ, ಶಿವಳ್ಳಿ ಸ್ಮಾರ್ಥ ಭವನಕ್ಕೆ ಎದುರು, 4ನೇ ಬ್ಲಾಕ್, ಮನೆ ನಂ. 1077ರಲ್ಲಿ ವಾಸಿಸುವ ದಿವಂಗತ ಎಂ. ಚಂದ್ರಶೇಖರ್ ರವರ ಪುತ್ರ ಸಿ. ರಾಕೇಶ್ ಹಾಗೂ ಶ್ರೀ. ಸಿ. ರಾಕೇಶ್ ರವರ ಪುತ್ರಿ ಕುಮಾರಿ. ಧೃತಿರವರು ಕೆಳಕಂಡ ಅನುಸೂಚಿಯಲ್ಲಿ ವಿವರಿಸಿರುವ ಸ್ಥಿರಾಸ್ತಿಯನ್ನು ಅದರ ಪ್ರಸ್ತುತ ಮಾಲೀಕರಾದ–ಮೈಸೂರು, ಹೆಗ್ಗಡದೇವನ ಕೋಟೆ (ಗ್ರಾಮಾಂತರ), ಆಸ್ಪತ್ರೆ ಲೇಔಟ್ ನಂ.11/2241, ನಲ್ಲಿ ವಾಸವಾಗಿರುವ ಶ್ರೀ. ಚಂದ್ರಶೇಖರ್ ಭಟ್ ಅವರ ಸ್ಥಿರಾಸ್ತಿ ಸೈಟ್ ಸಂಖ್ಯೆ: 4738, 3ನೇ ಹಂತ, ದಟ್ಟಗಹಳ್ಳಿ, ಚಾಮರಾಜ ಮೊಹಲ್ಲಾ, ಮೈಸೂರು ಇಲ್ಲಿ ನಿರ್ಮಿಸಿರುವ ಡೂಪ್ಲೆಕ್ಸ್ ಮನೆಯನ್ನು ಖರೀದಿಸಲು ನಿರ್ಧರಿಸಿರುತ್ತಾರೆ. ಸಾರ್ವಜನಿಕರಲ್ಲಿ ವಿನಂತಿಸಿಕೊಳ್ಳುವುದೇನೆಂದರೆ ಕೆಳಕಾಣಿಸಿದ ಸ್ಥಿರಾಸ್ತಿಯ ಮೇಲೆ ಯಾರಿಗಾದರೂ ಯಾವುದೇ ರೀತಿಯ ಹಕ್ಕು, ಮಾಲೀಕತ್ವ ಹಾಗೂ ಹಿತಾಸಕ್ತಿ ಇದ್ದಲ್ಲಿ, ಈ ಪ್ರಕಟಣೆ ಪ್ರಕಟಿಸಿದ 07 ದಿನಗಳ ಒಳಗಾಗಿ ಲಿಖಿತವಾಗಿ ತಮ್ಮ ತಕರಾರು ಅಥವಾ ಅಹವಾಲನ್ನು ಸಂಬಂಧಿತ ಸೂಕ್ತ ದಾಖಲೆಗಳೊಂದಿಗೆ ಕೆಳಕಂಡ ವಿಳಾಸಕ್ಕೆ ತಲುಪಿಸುವುದು. ಒಂದು ವೇಳೆ ನಿಗದಿತ ಸಮಯದೊಳಗೆ ಮೇಲೆ ಸೂಚಿಸಿದ ರೀತಿಯಲ್ಲಿ ಯಾವುದೇ ತಕರಾರನ್ನು ಸಲ್ಲಿಸದಿದ್ದಲ್ಲಿ, ಈ ಸಂಬಂಧ ಯಾವುದೇ ತಕರಾರು ಇಲ್ಲವೆಂದು ಹಾಗೂ ಅನು ಸೂಚಿ ಸ್ವತ್ತನ್ನು ವಿವಾದರಹಿತ ಹಾಗೂ ಋಣಮುಕ್ತವೆಂದು ಪರಿಗಣಿಸಿ ನನ್ನ ಕಕ್ಷಿದಾರರು ಅನುಸೂಚಿತ ಸ್ವತ್ತಿನ ಕ್ರಯ ಸಂಬಂಧ ವ್ಯವಹಾರವನ್ನು ಮುಂದುವರೆಸುವರು. ತದನಂತರ ಸಲ್ಲಿಸುವ ಯಾವುದೇ ತಕರಾರನ್ನು ಅಮಾನ್ಯವೆಂದು ಪರಿಗಣಿಸಲಾಗುವುದು. ಆ ಕಾರಣ ಮುಂಬರಬಹುದಾದ ಕಾನೂನು ರೀತಿಯ ವ್ಯಾಜ್ಯಗಳಿಗೆ ನನ್ನ ಕಕ್ಷಿದಾರರು ಯಾವುದೇ ರೀತಿಯಲ್ಲಿ ಬಾಧ್ಯರಾಗಿರುವುದಿಲ್ಲ.

ಅನುಸೂಚಿ

ಮೈಸೂರು ಚಾಮರಾಜ ಮೊಹಲ್ಲಾ ಮನೆ ನಂ: 4738, ದಟ್ಟಗಳ್ಳಿ 3ನೇ ಹಂತ ಪೂರ್ವ ದಿಂದ ಪಶ್ಚಿಮ 30 ಅಡಿಗಳು ಹಾಗೂ ಉತ್ತರ ದಕ್ಷಿಣ 40 ಅಡಿಗಳು ಇರುವ ಡೂಪ್ಲೆಕ್ಸ್ ಮನೆ ಕಟ್ಟಡ ಈ ಕೆಳಕಂಡಂತೆ ಗಡಿಉಳ್ಳದಾಗಿರುತ್ತದೆ. ಪೂರ್ವ : ಮನೆ ನಂ 4739, ಪಶ್ಚಿಮ : ಮನೆ ನಂ 4737, ಉತ್ತರ : 9.0 ಮೀ ರಸ್ತೆ, ದಕ್ಷಿಣ : ಮನೆ ನಂ 4759.

ಸಹಿ/– ಇ.ಆರ್. ಪಂಕಜಮಣಿ, ವಕೀಲರು ನಂ 129 (ಕೆ), 19ನೇ 'ಎ' ಮುಖ್ಯ ರಸ್ತೆ, 1ನೇ ಬ್ಲಾಕ್, ರಾಜಾಜಿನಗರ ಬೆಂಗಳೂರು–560010. ದೂರವಾಣಿ ಸಂಖ್ಯೆ: 9844368187.

ಕಕ್ಷಿದಾರರಾದ ಶ್ರೀ. ಸಿ. ರಾಕೇಶ್ ರವರ ದೂರವಾಣಿ ಸಂಖ್ಯೆ: 9448412143, 9663577988.

ಸಪ್ತರ್ಷಿ ಸೌಹಾರ್ದ ಪತ್ತಿನ ಸಹಕಾರಿ ಸಂಘ ನಿಯಮಿತ.

#48, 2ನೇ ಮುಖ್ಯರಸ್ತೆ, 18ನೇ ಅಡ್ಡರಸ್ತೆ, ಜಯನಗರ, ಮೈಸೂರು–570014 ದೂರವಾಣಿ–2567755
Email ID :saptharshimys@gmail.com

27ನೇ ವಾರ್ಷಿಕ ಸರ್ವ ಸದಸ್ಯರ ಮಹಾ ಸಭೆಯ ಸೂಚನಾ ಪತ್ರ

ಸನ್ಮಾನ್ಯ ಸದಸ್ಯರೇ,

ನಮ್ಮ ಸಹಕಾರಿಯ 2023–24ನೇ ಸಾಲಿನ ಮಹಾಸಭೆಯನ್ನು ದಿನಾಂಕ 18.08.2024ನೇ ಭಾನುವಾರ ಬೆಳಗ್ಗೆ 10.30ಗಂಟೆಗೆ ಸರಿಯಾಗಿ ಶಾರದಾ ವಿಲಾಸ ಕಾಲೇಜು ಶತಮಾನೋತ್ಸವ ಭವನದಲ್ಲಿ ಸಹಕಾರಿಯ ಅಧ್ಯಕ್ಷರಾದ ಶ್ರೀ ಎಂ.ಎಸ್.ಚಂದ್ರಶೇಖರ್ ಇವರ ಘನ ಅಧ್ಯಕ್ಷತೆಯಲ್ಲಿ ವಾರ್ಷಿಕ ಮಹಾಸಭೆ ನಡೆಸಲು ತೀರ್ಮಾನಿಸಿರುತ್ತದೆ. ಈಗಾಗಲೇ ಪ್ರತಿಯೊಬ್ಬ ಸದಸ್ಯರಿಗೂ ವರದಿ ಪುಸ್ತಕವನ್ನು ಅಂಚೆ ಮುಖಾಂತರ ಕಳುಹಿಸಲಾಗಿದ್ದು, ಒಂದು ವೇಳೆ ಆಹ್ವಾನ ಪತ್ರಿಕೆ ತಲುಪದೇ ಇದ್ದಲ್ಲಿ ಇದನ್ನೇ ಆಹ್ವಾನವೆಂದು ಪರಿಗಣಿಸಿ ಮಹಾಸಭೆಗೆ ಭಾಗವಹಿಸಲು ಕೋರಲಾಗಿದೆ.

ವಿಶೇಷ ಸೂಚನೆ:

1. ವಾರ್ಷಿಕ ಮಹಾಸಭೆಯಲ್ಲಿ ಭಾಗವಹಿಸಲು ಸದಸ್ಯರುಗಳು ಷೇರು ಪಾಸು ಪುಸ್ತಕವನ್ನು ಕಡ್ಡಾಯವಾಗಿ ಹಾಜರುಪಡಿಸಬೇಕಾಗಿ ಈ ಮೂಲಕ ಕೋರಲಾಗಿದೆ.
2. ದಿನಾಂಕ: 19.08.2024ನೇ ಸೋಮವಾರದಂದು ಸಹಕಾರಿಗೆ ರಜೆ ಘೋಷಿಸಲಾಗಿದೆ.

ದಿನಾಂಕ : 17.08.2024
ಸ್ಥಳ: ಮೈಸೂರು

ಆಡಳಿತ ಮಂಡಳಿಯ ಅಪ್ಪಣೆ ಮೇರೆಗೆ
ಸಹಿ/– ಹೆಚ್.ಎ.ಪುರುಷೋತ್ತಮ

ಸಾರ್ವಜನಿಕ ಪ್ರಕಟಣೆ

ನಮ್ಮ ಕಕ್ಷಿದಾರರಾದಂತಹ ಶ್ರೀ. ಗೌರಿಶಂಕರ್ ಹೊಸಕೆರೆ ಬಿನ್.ಶ್ರೀ.ಹೆಚ್.ಕೆ ನಂಜುಂಡಸ್ವಾಮಿ, ವಾಸ: ಅಜ್ಜನಮನೆ, ತಲವಾಟ, ಶಿವಮೊಗ್ಗ ರವರು ಕೆಳಕಂಡ ಷೆಡ್ಯೂಲ್ ಸ್ವತ್ತನ್ನು ಅದರ ಮಾಲಿಕರಾದ ಶ್ರೀಮತಿ ಮಾಸುಮಾ ಎಂ ಮಿಲ್‌ವಾಲ ಕೋಂ. ಅಲೀ ಎ ವಾಗ್, ವಿಳಾಸ ನಂ. 8/ಎ, ಮಹಾಜನ ಪ್ರೌಢಶಾಲಾ ರಸ್ತೆ, ಜಯಲಕ್ಷ್ಮಿಪುರಂ, ಮೈಸೂರು ರವರಿಂದ ಖರೀದಿಸಲು ತೀರ್ಮಾನಿಸಿ ಮುಂಗಡ ಹಣ ಪಾವತಿಸಿ ಕ್ರಯದ ಕರಾರನ್ನು ಮಾಡಿಕೊಳ್ಳಲು ತೀರ್ಮಾನಿಸಿರುತ್ತಾರೆ. ಆ ಕಾರಣ ಷೆಡ್ಯೂಲ್ ಸ್ವತ್ತಿನ ಸಂಬಂಧ ಯಾವುದೇ ರೀತಿಯ ತಂಟೆ ತಕರಾರು, ಹಕ್ಕು, ಸ್ವಾಧೀನ ಇತರೆ ವ್ಯಾಜ್ಯಗಳು ಯಾರಿಂದದಾದರೂ ಇದ್ದಲ್ಲಿ ಅಂತಹ ವ್ಯಕ್ತಿಗಳು ಈ ಕೂಡಲೇ ನಮ್ಮ ಕಛೇರಿಯನ್ನು 7 ದಿನಗಳೊಳಗಾಗಿ ಸೂಕ್ತ ದಾಖಲಾತಿಗಳೊಂದಿಗೆ ಸಂಪರ್ಕಿಸತಕ್ಕದ್ದು, ತಪ್ಪಿದ್ದಲ್ಲಿ ಮುಂದಿನ ಯಾವುದೇ ಆ ರೀತಿಯ ತಕರಾರು ನಮ್ಮ ಕಕ್ಷಿದಾರರನ್ನು ಬದ್ಧಪಡಿಸುವುದಿಲ್ಲ.

ಷೆಡ್ಯೂಲ್ ಸ್ವತ್ತಿನ ವಿವರ :–

ಮೈಸೂರು ತಾಲ್ಲೂಕು, ಇಲವಾಲ ಹೋಬಳಿ, ಮಾದಗಳ್ಳಿ ಸರ್ವೆ ನಂ. 1/2, 3/1, 3/2, 3/3, 3/4, 6, 7, 8, 9, 20/1, 21 ಮತ್ತು 23 ರಲ್ಲಿ ಎಂ. ಎಸ್ ರಾಮಯ್ಯ ರಾಯಲ್ ಸಿಟಿ ಎಂಬ ನಾಮಾಂಕಿತದಲ್ಲಿ ಅಭಿವೃದ್ಧಿಪಡಿಸಿರುವ ನಿವೇಶನದ ಸಂಖ್ಯೆ. 114, ಪೂರ್ವ ಪಶ್ಚಿಮ: 24.20 ಮೀಟರ್‌ಗಳು, ಉತ್ತರ ದಕ್ಷಿಣ: 23.10 + 22.10/2 ಹಾಗು ಒಟ್ಟು ವಿಸ್ತೀರ್ಣ 546.92 ಚದರ ಮೀಟರ್/5885 ಚದರ ಅಡಿಗಳು ಇದಕ್ಕೆ ಚಕ್ಕುಬಂದಿ : ಪೂರ್ವಕ್ಕೆ : ರಸ್ತೆ, ಪಶ್ಚಿಮಕ್ಕೆ : ಖಾಸಗಿ ಸ್ವತ್ತು, ಉತ್ತರಕ್ಕೆ : ರಸ್ತೆ, ದಕ್ಷಿಣಕ್ಕೆ : ನಿವೇಶನ ಸಂಖ್ಯೆ.115.

ದಿನಾಂಕ : 14/08/2024 ಸ್ಥಳ : ಮೈಸೂರು

C.N. Mahesh, B.A, LL.B
Advocate
'A' Law Associates
KAR-1508/2005
Mob : 99004 81244
No 1, Bajjana Lane, Behind Marrama Temple, Chamarajpura, Mysore

ಸ್ಥಾಪನೆ : 1983 ದೂರವಾಣಿ ಸಂಖ್ಯೆ : 0821-2422127

ದಿ ಸಿಟಿಜನ್ಸ್ ಹೌಸ್ ಮಾರ್ಟ್‌ಗೇಜ್ ಮತ್ತು ಹೌಸಿಂಗ್ ಕೋ–ಆಪರೇಟಿವ್ ಸೊಸೈಟಿ ಲಿ.,

ನಂ. 361/1, ಸಿ.ಹೆಚ್–15, ಡಿ. ಸುಬ್ಬಯ್ಯ ರಸ್ತೆ, ಚಾಮರಾಜ ಮೊಹಲ್ಲಾ, ಮೈಸೂರು–24

ಈ ಸೊಸೈಟಿಯ 2023-2024ನೇ ಸಾಲಿನ 42ನೇ ವಾರ್ಷಿಕ ಮಹಾಸಭೆಯನ್ನು ಆಗಸ್ಟ್ ಮಾಹೆ ದಿನಾಂಕ : 18-08-2024ರ ಭಾನುವಾರ ಬೆಳಗ್ಗೆ 10.00 ಘಂಟೆಗೆ

ಶ್ರೀ ಶ್ರೀ ಪಂಡಿತ ನಾರಾಯಣಚಾರ್ಯ ಕಲ್ಯಾಣ ಮಂಟಪ

ಚಾಮರಾಜ ಜೋಡಿರಸ್ತೆ, (ಸುಬ್ಬರಾಯನ ಕೆರೆ) ಮೈಸೂರಿನಲ್ಲಿ

ಸಂಘದ ಅಧ್ಯಕ್ಷರಾದ **ಶ್ರೀ ಎನ್. ಶಿವಕುಮಾರ್ ರವರ** ಅಧ್ಯಕ್ಷತೆಯಲ್ಲಿ ನಡೆಯಲಿದೆ.

ವಾರ್ಷಿಕ ಮಹಾಸಭೆಯ ಆಹ್ವಾನ ಪತ್ರಿಕೆಯನ್ನು ಅಂಚೆ ಮೂಲಕ ಮಾನ್ಯ ಸದಸ್ಯರುಗಳಿಗೆ ಕಳುಹಿಸಲಾಗಿದೆ. ಮಾನ್ಯ ಸದಸ್ಯರುಗಳೆಲ್ಲರೂ ಸಕಾಲಕ್ಕೆ ಸಭೆಗೆ ಹಾಜರಾಗಬೇಕಾಗಿ ಕೋರಲಾಗಿದೆ.

ಆಡಳಿತ ಮಂಡಳಿ ಅಪ್ಪಣೆ ಮೇರೆಗೆ
ಸಹಿ/– ಎಂ.ವಿ.ರವಿ, ಕಾರ್ಯದರ್ಶಿ.
ಮೊಬೈಲ್ : 97412 02595

ಪುರಸಭಾ ಕಾರ್ಯಾಲಯ, ಬೇಲೂರು

E-mail: itstaff_ulb_belur@yahoo.co.in, townmunicipal.belur@gmail.com ದೂರವಾಣಿ: 08177–222221
ನಂ:ಪುಬೇ/ಫ.ವ.ನಿ/15ನೇಹ.ಕಾ.ಯೋ/02/2024–25
ದಿನಾಂಕ: 14–08–2024.

–: ಟೆಂಡರ್ ಪ್ರಕಟಣೆ:–

(ಕರ್ನಾಟಕ ಸರ್ಕಾರದ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮುಖಾಂತರ) ಬೇಲೂರು ಪುರಸಭೆ ವ್ಯಾಪ್ತಿಯಲ್ಲಿ 15ನೇ ಹ.ಕಾ.ಯೋ ಅಡಿಯಲ್ಲಿ, ಈ ಕೆಳಕಂಡ ಸೇವೆಗಳು/ಸರಬರಾಜು ಮಾಡಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಆದ್ಯಾದ್ದೇಶ 1999–2000 ಪ್ರಕಾರ Karnataka Standard Tender Document – KG1&KG2ರ ಪ್ರಕಾರ ದ್ವಿ ಲೋಕೋಟೆ ಪದ್ಧತಿಯಲ್ಲಿ ಟೆಂಡರ್‌ನ್ನು ಕರ್ನಾಟಕ ಸಕಾರದ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮುಖಾಂತರ ಆಹ್ವಾನಿಸಲಾಗಿದೆ. ಅರ್ಹ ಟೆಂಡರ್‌ದಾರರು ಪೋರ್ಟಲ್:– http://kppp.karnataka.gov.in ಮುಖಾಂತರ ಟೆಂಡರ್‌ನಲ್ಲಿ ಭಾಗವಹಿಸಬಹುದಾಗಿದೆ. ಕ್ರ.ಸಂ..1)ವಿವರ: DMA/2024-25/IND2958 ಅಂದಾಜು ಮೊತ್ತ (ರೂ ಲಕ್ಷಗಳಲ್ಲಿ): 21.32 2)ವಿವರ:DMA/2024-25/IND2961 ಅಂದಾಜು ಮೊತ್ತ (ರೂ ಲಕ್ಷಗಳಲ್ಲಿ): 1.18 3)ವಿವರ:DMA/2024-25/IND2962 ಅಂದಾಜು ಮೊತ್ತ (ರೂ ಲಕ್ಷಗಳಲ್ಲಿ): 7.31 4)ವಿವರ:DMA/2024-25/SE3470 ಅಂದಾಜು ಮೊತ್ತ (ರೂ ಲಕ್ಷಗಳಲ್ಲಿ): 7.58 ಹೆಚ್ಚಿನ ವಿವರಗಳನ್ನು www.kppp.karnataka.gov.in ವೆಬ್‌ಸೈಟ್‌ನಲ್ಲಿ ಮತ್ತು ಮುಖ್ಯಾಧಿಕಾರಿ/ಪರಿಸರ ಅಭಿಯಂತರರು, ಪುರಸಭೆ ಬೇಲೂರು ರವರುಗಳಿಂದ ಈ ಕಛೇರಿಯಲ್ಲಿ ಪಡೆಯಬಹುದು.

ಸಹಿ/–ಮುಖ್ಯಾಧಿಕಾರಿ, ಪುರಸಭೆ, ಬೇಲೂರು

ವಾಸಾಸಂಇ/ಹಿಸನಿ/ಹಾಸನ/311/ಕೆಎಸ್‌ಎಂಸಿಎ/2024–25



ನಕ್ಕರೆ ಅದೇ ಸ್ವರ್ಗ

ಮೇಷ್ಟ್ರು : ಮಕ್ಕಳೇ, ಸಾವಿತ್ರಿ ತನ್ನ ಪತಿಗಾಗಿ ಯಮನ ಬಳಿ ಹೋರಾಡಿ ಪತಿಯನ್ನು ಉಳಿಸಿಕೊಂಡಳು. ಈ ಕಥೆಯ ನೀತಿ ಪಾಠವೇನು?
ಗುಂಡ : ಹೆಂಡತಿಯಿಂದ ಪತಿಯನ್ನು ಬಚಾವ್ ಮಾಡಲು ಯಾವ ಯಮನಿಂದಲೂ ಸಾಧ್ಯವಿಲ್ಲ!

ಮೈಸೂರು ಮಿತ್ರ
ಶನಿವಾರ, 17 ಆಗಸ್ಟ್ 2024
ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)
ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತವಾಹಿನಿ..........

ಕೆಸರಿನಲ್ಲಿ ಹುಟ್ಟಿದೆಂಬ ಕಾರಣಕ್ಕೆ ಕಮಲಕ್ಕೇನೂ ಕುಂದಿಲ್ಲ. ಜಾತಿ ಮತ ಪಂಥಗಳನ್ನು ಮೀರಿದ ಬದುಕಿನ ರೀತಿ ನೀತಿಗಳೇ ಮುಖ್ಯವಾಗಬೇಕು.

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಉದ್ದುದ್ದ ಮಾತಿನವರ ಮೊಳಕೈ ಮೊಂಡ.

ನಿಮ್ಮ ಪತ್ರಗಳು

■ ರಾಜಕೀಯ ಪಕ್ಷಗಳ ಸಮಾವೇಶಗಳು ಹೊರ ಭಾಗದಲ್ಲಿ ನಡೆದರೆ ಸೂಕ್ತ



ಮಾನ್ಯರೆ,

ಮೊನ್ನೆ, ಶುಕ್ರವಾರ ಮತ್ತು ಶನಿವಾರ ಮೈಸೂರಿನಲ್ಲಿ ನಡೆದ ಎರಡು ರಾಷ್ಟ್ರೀಯ ಪಕ್ಷಗಳ ರಾಜಕೀಯ ಸಮಾವೇಶಗಳು, ತಾವು ಜನರನ್ನು ಸೇರಿಸುವ ಸಮಾವೇಶಗಳಾದವೇ ವಿನಃ ಇದರಿಂದ ಸಾರ್ವಜನಿಕರಿಗೆ ಆದ ಲಾಭವೇನು ಎಂಬುದು ಯಕ್ಷ ಪ್ರಶ್ನೆ.

ಈ ಎರಡೂ ರಾಜಕೀಯ ಪಕ್ಷಗಳ ಸಮಾರಂಭ ನಡೆದಿದ್ದು, ಮೈಸೂರಿನ ಹೃದಯ ಭಾಗದಲ್ಲಿರುವ ಮಹಾರಾಜ ಕಾಲೇಜಿನ ಮೈದಾನದಲ್ಲಿ, ಲಕ್ಷಾಂತರ ಜನ ಸೇರುವ ಈ ಸಮಾವೇಶಗಳಿಂದ ಆ ಎರಡು ದಿನಗಳು ಸಹ ಮೈಸೂರಿನ ಸಾರ್ವಜನಿಕರಿಗೆ, ಶಾಲಾ ಕಾಲೇಜುಗಳಿಗೆ ಹೋಗುವ ವಿದ್ಯಾರ್ಥಿಗಳಿಗೆ ಮತ್ತು ಸರ್ಕಾರಿ ನೌಕರರಿಗೆ ತೊಂದರೆ ಆದದ್ದೇ ಹೆಚ್ಚು. ಸಮಾವೇಶಗಳು ನಡೆದ ಸುಮಾರು ಮೂರು ಕಿಮೀ ಸುತ್ತ ಮುತ್ತ ದೂರದ ಊರುಗಳಿಂದ ಬಂದ ಜನರನ್ನು ಕರೆತಂದ ಬಸ್‌ಗಳು ನಿಲುಗಡೆ ಮಾಡಿದ್ದರಿಂದ ಸಾರ್ವಜನಿಕರ ಕೆಲಸ ಕಾರ್ಯಗಳಿಗೆ ತೊಂದರೆಯಾಯಿತು. ರಾಜಕೀಯ ಪಕ್ಷಗಳು, ತಾವೆಷ್ಟು ಪ್ರಮಾಣದಲ್ಲಿ ಜನ ಸೇರಿಸುತ್ತೇವೆ ಎಂಬುದೇ ಒಂದು ರೀತಿಯಲ್ಲಿ ಪ್ರತಿಷ್ಠೆಯ ಪ್ರಶ್ನೆ. ಇನ್ನು ಮುಂದಾದರೂ ಇಂತಹ ರಾಜಕೀಯ ಪಕ್ಷಗಳ ಬೃಹತ್ ಸಮಾವೇಶಗಳು ಮೈಸೂರಿನ ಹೊರ ಭಾಗದಲ್ಲಿ ನಡೆದರೆ ಅದು ಸಾರ್ವಜನಿಕ ಹಿತದೃಷ್ಟಿಯಿಂದ ಒಳ್ಳೆಯದು.

–ಬೂಕನಕೆರೆ ವಿಜೇಂದ್ರ, ಕುವೆಂಪು ನಗರ, ಮೈಸೂರು.

■ ಒಲಂಪಿಕ್ಸ್‌ನಲ್ಲಿ ಭಾರತ ತಂಡದ ನಿರಾಶದಾಯಕ ಪ್ರದರ್ಶನ

ಮಾನ್ಯರೆ,

ಪ್ಯಾರಿಸ್‌ನಲ್ಲಿ ನಡೆದ ಒಲಂಪಿಕ್ಸ್ ಪಂದ್ಯಾವಳಿಯಲ್ಲಿ ಭಾರತ ತಂಡದ ಪ್ರದರ್ಶನ ತೀರಾ ನಿರಾಶದಾಯಕವಾಗಿದ್ದು, ಒಂದು ಬೆಳ್ಳಿ ಹಾಗೂ 5 ಕಂಚಿನ ಪದಕಕ್ಕೆ ತೃಪ್ತಿ ಪಟ್ಟುಕೊಳ್ಳುವಂತಾಯಿತು. ಪದಕಗಳ ಪಟ್ಟಿಯಲ್ಲಿ ಭಾರತ ಕೊನೆಯ ಸ್ಥಾನದಲ್ಲಿ ಅಲಂಕೃತವಾಗಿರುವುದು ಬೇಸರದ ಸಂಗತಿ. 117 ಸ್ಪರ್ಧಿಗಳು ಒಲಂಪಿಕ್ಸ್ ಕ್ರೀಡೆಯಲ್ಲಿ ಭಾಗವಹಿಸಿ ಶೂಟಿಂಗ್ ನಲ್ಲಿ 3 ಹಾಗೂ ಹಾಕಿ, ಅಥ್ಲೆಟಿಕ್ಸ್, ಕುಸ್ತಿಯಲ್ಲಿ 3 ಪದಕ ಗೆಲ್ಲುವ ಮೂಲಕ ಭಾರತದ ಮಾನ ಕಾಪಾಡಿದರೆಂಬುದೇ ಸಮಾಧಾನಕಾರ ವಿಷಯ.

140 ಕೋಟಿ ಜನಸಂಖ್ಯೆ ಹೊಂದಿರುವ ಪ್ರಪಂಚದ ದೊಡ್ಡ ರಾಷ್ಟ್ರವಾಗಿರುವ ಭಾರತದಲ್ಲಿ ಕ್ರೀಡಾ ಕ್ಷೇತ್ರಕ್ಕೆ ತೋರುತ್ತಿರುವ ಅನಾಧರಣೆಯೇ ಇದಕ್ಕೆ ಪ್ರಮುಖ ಕಾರಣವೆನ್ನಬಹುದು. ನಮ್ಮಲ್ಲಿ ಕ್ರಿಕೆಟ್ ರಂಗಕ್ಕೆ ನೀಡುತ್ತಿರುವ ಪ್ರಾಮುಖ್ಯತೆಯನ್ನು ಇತರೇ ಕ್ರೀಡೆಗಳಿಗೆ ನೀಡದಿರುವುದೇ ಸಾಧನೆಯ ವೈಫಲ್ಯಕ್ಕೆ ಪ್ರಮುಖ ಕಾರಣವೆನ್ನಬಹುದು.

ಭಾರತದ ಕ್ರೀಡಾ ರಂಗದಲ್ಲಿ ಅಪ್ರತಿಮ ಪ್ರತಿಭೆಗಳಿದ್ದು ಅವರಿಗೆ ಸೂಕ್ತ ನೆರವು – ತರಬೇತಿಗಳು ಸಿಕ್ಕಿದಲ್ಲಿ ಭಾರತದ ಕೀರ್ತಿ ಪತಾಕೆಯನ್ನು ಉತ್ತುಂಗಕ್ಕೆ ಕೊಂಡೊಯ್ಯುವ ಸಾಮರ್ಥ್ಯವಿದೆ. ಆದರೆ ಕ್ರೀಡಾ ಕ್ಷೇತ್ರವಿಂದು ವಿಪರೀತ ರಾಜಕೀಯ ಹಸ್ತಕ್ಷೇಪ, ಸ್ವಜನ ಪಕ್ಷಪಾತಗಳಿಂದ ಕಲುಷಿತಗೊಂಡಿರುವುದು ದುರಂತವೇ ಸರಿ. ಕ್ರೀಡಾ ಕ್ಷೇತ್ರಕ್ಕೆಂದೇ ಇರುವ ಸಚಿವಾಲಯ, ಪ್ರಾಧಿಕಾರ, ತರಬೇತಿ ಸಂಸ್ಥೆಗಳು ಒಲಂಪಿಕ್ಸ್‌ನಲ್ಲಿ ಭಾರತ ತೋರಿರುವ ನಿರಾಶದಾಯಕ ಸಾಧನೆಗಳ ಬಗ್ಗೆ ಒಮ್ಮೆ ವಿಮರ್ಶೆ ಮಾಡಿಕೊಳ್ಳುವುದು ಸೂಕ್ತ.

– ಹೆಚ್. ಆರ್. ಪ್ರಸಾದ್, ವಿವೇಕಾನಂದ ನಗರ, ಮೈಸೂರು.

■ ಅರೇನಹಳ್ಳಿ ಗ್ರಾಮದಲ್ಲಿ ಬೀದಿನಾಯಿಗಳ ಕಾಟ

ಮಾನ್ಯರೆ,



ಪಿರಿಯಾಪಟ್ಟಣ ಮತ್ತು ಕೃಷ್ಣರಾಜ ನಗರ ತಾಲೂಕುಗಳಿಗೆ ಸಂಪರ್ಕ ಕಲ್ಪಿಸುವ ಮುಖ್ಯರಸ್ತೆಯಾಗಿರುವ ರಾಮಂದೂರು ಹೋಬಳಿಯ ಅರೇನಹಳ್ಳಿ ಗ್ರಾಮದಲ್ಲಿ ಬೀದಿನಾಯಿಗಳ ಕಾಟ ಹೆಚ್ಚಾಗಿದೆ. ಹಿಂಡುಹಿಂಡಾಗಿ ಓಡಾಡುವ ನಾಯಿಗಳ ಹಾವಳಿಯಿಂದ ಮಕ್ಕಳು ಮಹಿಳೆಯರು ಹಾಗೂ ವೃದ್ಧರು ಓಡಾಡುವುದೇ ದುಸ್ತರವಾಗಿದೆ. ಬೆಳಗ್ಗೆಯಾದರೆ ಸಾಕು ಗುಂಪಾಗಿ ನಾಯಿಗಳು ಕಾಣಿಸಿಕೊಂಡು ಭಯ ತರುತ್ತವೆ. ಇಲ್ಲಿ ಮಟನ್ ಹಾಗೂ ಚಿಕನ್ ಅಂಗಡಿಗಳಿದ್ದು ಮಾಂಸದ ತ್ಯಾಜ್ಯ ವಿಲೇವಾರಿ ಸರಿಯಾಗಿ ನಿರ್ವಹಣೆ ಮಾಡದೇ ಎಲ್ಲೆಂದರಲ್ಲಿ ಬಿಸಾಡುವುದರಿಂದ ಇವುಗಳು ಅಧಿಕ ಸಂಖ್ಯೆಯಲ್ಲಿ ಇವೆ. ಮಟನ್ ಮತ್ತು ಚಿಕ್ಕನ್ ಮಾರಾಟಗಾರರಿಗೆ ತಿಳುವಳಿಕೆ ನೀಡಬೇಕು ಇಲ್ಲವಾದಲ್ಲಿ ಅಧಿಕ ಪ್ರಮಾಣದಲ್ಲಿ ದಂಡ ವಿಧಿಸಿ ಸೂಕ್ತ ಕ್ರಮ ಕೈಗೊಳ್ಳಬೇಕು. ಜೊತೆಗೆ ಇವುಗಳ ನಿಯಂತ್ರಣಕ್ಕೆ ಗ್ರಾಮಾಡಳಿತ ಇನ್ನೂ ಮುಂದಾಗಿಲ್ಲ. ಇಲ್ಲೇ ಓಡಾಡುವ ಗ್ರಾಮ ಪಂಚಾಯತ್ ಸದಸ್ಯರು ನಿರ್ಲಕ್ಷ್ಯ ಧೋರಣೆ ಅನುಸರಿಸುತ್ತಿದ್ದಾರೆ. ಯಾರಿಗಾದರೂ ಈ ಬೀದಿ ನಾಯಿಗಳಿಂದ ಹಾನಿಯಾದರೆ ಮಾತ್ರ ಕ್ರಮ ಕೈಗೊಳ್ಳುವರೇನೋ ಗೊತ್ತಿಲ್ಲ.

–ಎ.ಎಸ್.ಗೋವಿಂದೇಗೌಡ, ಅರೇನಹಳ್ಳಿ ಗ್ರಾಮ, ಪಿ.ಪಟ್ಟಣ ತಾ.



ಡಾ. ಹೆಚ್.ವಿ. ನಾಗರಾಜ ರಾವ್
ಮೈಸೂರು.

ಸಂಸ್ಕೃತಿ ಚಿಂತನಾ

ಅಚ್ಚರಿ ಮೂಡಿಸುವ 'ಸಾಧ್ಯ–ಸಿದ್ಧಿ'

> "ಡಾ. ಜಮುನಾರಾಣಿ ಮಿರ್ಲೆಯವರ ಚಿತ್ರಕಲಾಕೃತಿಗಳ ಪ್ರದರ್ಶನವನ್ನು ಆ.17 ಮತ್ತು 18ರಂದು ಮೈಸೂರಿನ ಕಲಾ ಮಂದಿರದ ಸುಚಿತ್ರಾ ಆರ್ಟ್ ಗ್ಯಾಲರಿಯಲ್ಲಿ ಏರ್ಪಡಿಸಲಾಗಿದೆ. ಆ.17 ರಂದು ಬೆಳಗ್ಗೆ 10.30ಕ್ಕೆ 'ಸಾಧ್ಯ–ಸಿದ್ಧಿ' ಮತ್ತು 'ಜೀವನಯಾನ' ಕೃತಿಗಳು ಬಿಡುಗಡೆಯಾಗಲಿದೆ. ಈ ಸಂಬಂಧ ಡಾ.ಜಮುನಾ ರಾಣಿ ಅವರ ಕಿರುಪರಿಚಯವನ್ನು ಈ ಲೇಖನವು ನೀಡುತ್ತದೆ.

ಮೈಸೂರಿನ ಸಂಸ್ಕೃತಿ ವಲಯದಲ್ಲಿ ತಮ್ಮ ವಿವಿಧ ಕಲಾ ನೈಪುಣ್ಯದಿಂದ ವಿಶಿಷ್ಟ ಸ್ಥಾನವನ್ನು ಗಳಿಸಿಕೊಂಡಿರುವ ಡಾ. ಜಮುನಾರಾಣಿ ವಿ.ಮಿರ್ಲೆ ಅವರ ಜೀವನ–ಸಾಧನೆಗಳ ಯಶೋಗಾಥೆಯನ್ನು ಹೃದಯಂಗಮವಾಗಿ ಚಿತ್ರಿಸಿರುವ ಪುಸ್ತಕ 'ಸಾಧ್ಯ–ಸಿದ್ಧಿ'. ಅನೇಕ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ನಾನು ಡಾ. ಜಮುನಾರಾಣಿಯವರನ್ನು ವೇದಿಕೆಗಳ ಮೇಲೆ ನೋಡಿದ್ದೆ. ಆದರೆ ಅವರ ವ್ಯಕ್ತಿತ್ವದ ಹಲವು ಆಯಾಮಗಳ ಪರಿಚಯ ನನಗಿರಲಿಲ್ಲ. ಅವರು ಜೀವನ ಪಥದಲ್ಲಿ ಸಾಗಿ ಬಂದು ಸಿದ್ಧಿಗಳನ್ನು ಸಾಧಿಸಿರುವ ಬಗೆಗೆ ಉತ್ತಮ ಮಾಹಿತಿಯನ್ನು ಕೊಡುವ ಸಾಧ್ಯ–ಸಿದ್ಧಿಯನ್ನು ಅಮೂಲಾಗ್ರವಾಗಿ ಓದಿ ನೋಡಿದಾಗ ಜಮುನ ರಾಣಿ ಅವರು ಸಾಮಾನ್ಯರಲ್ಲಿ ಅಸಾಮಾನ್ಯರು ಎಂಬ ಅರಿವು ನನಗೆ ಉಂಟಾಯಿತು.

ಜೀವನಚರಿತ್ರೆ(Biography)ಯ ರೂಪದಲ್ಲಿರುವ ಈ ಪುಸ್ತಕವನ್ನು ರಚಿಸಿರುವವರು ಶ್ರೀಮತಿ ಬಿ.ಆರ್. ನಾಗರತ್ನ. ಅವರು ಅನೇಕ ಸ್ವತಂತ್ರ ಗ್ರಂಥಗಳನ್ನು ಬರೆದು ಪ್ರಕಾಶಕ್ಕೆ ಬಂದಿರುವ ಬರಹಗಾತಿ. ರಮಣೀಯ ಶೈಲಿಯಲ್ಲಿ ಕನ್ನಡವನ್ನು ಬರೆಯುವುದರಲ್ಲಿ ನುರಿತವರು. ಏನನ್ನೂ ಬರೆದರೂ ಆತ್ಮೀಯತೆಯಿಂದ ಬರೆಯುತ್ತಾರೆ. ಅದನ್ನು ಓದುವುದರಲ್ಲಿ ಖುಷಿ ಇದೆ, ಆನಂದವಿದೆ.

ಸಾಧ್ಯ–ಸಿದ್ಧಿಯ ಮೊದಲನೆಯ ಅಧ್ಯಾಯವಾದ 'ಬಾಲ್ಯ' ಎಂಬ ಭಾಗದಲ್ಲಿ ಜಮುನಾರಾಣಿಯವರ ಪೂರ್ವಜರಿಂದ ಆರಂಭಿಸಿ ಲೇಖಕರು ಇವರ ತಾಯಿಗೆ ಬಂದಿದ್ದ ಖಾಯಿಲೆ ಗುಣವಾದ ರೀತಿಯನ್ನು ತಿಳಿಸಿದ್ದಾರೆ. ಕಥಾನಾಯಕಿಯ ಅಕ್ಕ ಹೇಳುತ್ತಿದ್ದ 'ಪ್ರಾಪ್ತಿ ಇರುವುದು ಬಂದೇ ಬರುವುದು, ದೈವವಾದರೂ ಕೆಡಿಸಲಾಗದು' ಎಂಬ ಮಾತನ್ನೂ ಇಲ್ಲಿ ಉದಾಹರಿಸಿದ್ದಾರೆ. ಇದು ಪಂಚತಂತ್ರದಲ್ಲಿ ಬರುವ ಮಾತು.

ಪ್ರಾಪ್ತ ವ್ಯಮರ್ಥಂ ಲಭತೇ ಮನುಷ್ಯೋ
ದೇವ್ರೋಪಿ ತಂ ಲಂಘಯಿತುಂ ನ ಶಕ್ತಃ
ತಸ್ಮಾನ್ನ ಶೋಚಾಮಿ ನ ವಿಸ್ಮಯೋ ಮೇ
ಯದಸ್ಮದೀಯಂ ನ ಹಿ ತತ್ ಪರೇಷಾಮ್ ॥

ಎಂಬುದು ಮೂಲ ಶ್ಲೋಕ. ಈಗಲೂ ಜಮುನಾರಾಣಿಯವರು ಅದನ್ನು ಹೆಜ್ಜೆ ಹೆಜ್ಜೆಗೂ ನೆನಪಿಸಿಕೊಳ್ಳುತ್ತಾರೆ– ಎಂದೂ ಲೇಖಕರು ತಿಳಿಸಿದ್ದಾರೆ. ಆ ಕಾಲದ ಅಭ್ಯಂಜನೆಯ ಬಣ್ಣನೆಯನ್ನು ರಸವತ್ತಾಗಿ ಮಾಡಿದ್ದಾರೆ. 'ಬದುಕಿನ ಮೌಲ್ಯಗಳನ್ನು ಬಾಲ್ಯದಲ್ಲಿಯೇ ಮೊಗೆ ಮೊಗೆದು ಕುಡಿದು ಬಾಳಿಗೆ ಭದ್ರ ಬುನಾದಿಯಾದ ಗುಣಗಳನ್ನು ಮೈಗೂಡಿಸಿಕೊಂಡರು' ಎಂಬ ನುಡಿ ಎಷ್ಟು ಚೆನ್ನಾಗಿದೆ ಅಲ್ಲವೇ?

ವಿದ್ಯಾಭ್ಯಾಸದ ವೇಳೆಯಲ್ಲಿ ಜಮುನಾರಾಣಿ ಎಷ್ಟು ಕಷ್ಟಪಟ್ಟಿದ್ದರು! ಹೆಸರು ರಾಣಿ ಎಂದಿದ್ದರೂ ಶಾಲೆಯವರು ನಿಯತಗೊಳಿಸಿದ್ದ ಸಮವಸ್ತ್ರ ಇಲ್ಲದ ಕಾರಣ ಇವರನ್ನು ಸರತಿಯ ಸಾಲಿನ ಕೊನೆಯಲ್ಲಿ ನಿಲ್ಲಿಸುತ್ತಿದ್ದರಂತೆ. ಮೈಸೂರಿನ ನಿರ್ಮಲಾ ಕಾನ್ವೆಂಟಿಗೆ ಸೇರಿದಾಗ ಅಲ್ಲಿ ಇಂಗ್ಲೀಷ್‌ಮಯವಾದ ವಾತಾವರಣದಲ್ಲಿ ಅವರು ಪಟ್ಟ ಕಷ್ಟವನ್ನು ಲೇಖಕರು ಕಣ್ಣಿಗೆ ಕಟ್ಟುವಂತೆ ಬಣ್ಣಿಸಿದ್ದಾರೆ.

ಜಮುನಾರಾಣಿ ಮೈಸೂರಿನ ಶಾರದಾ ವಿಲಾಸ ಕಾಲೇಜಿನಲ್ಲಿ ಓದುತ್ತಿದ್ದಾಗ ವೇಷಭೂಷಣ ಸ್ಪರ್ಧೆಯಲ್ಲಿ ಲೇಡಿ ಮ್ಯಾಕ್‌ಬೆತ್ ಪತ್ರವನ್ನು ವಹಿಸಿದ್ದ ಪ್ರಸಂಗ ರೋಚಕ ರೀತಿಯಲ್ಲಿ ಪುಸ್ತಕದಲ್ಲಿ ನಿರೂಪಿತವಾಗಿದೆ. ಅದರ ಒಂದು ತುಣುಕು ಇಂತಿದೆ–

"ಗ್ರೀನ್ ರೂಮಿನಲ್ಲಿ ಗೆಳತಿಯರ ಸಹಾಯದಿಂದ ಸಿದ್ಧವಾಗಿ ನಿಂತರು. ಅವರ ಹೆಸರನ್ನು ಕರೆದ ಕೂಡಲೇ ಹಿರಿಯ ವಿದ್ಯಾರ್ಥಿಯ ಹಿನ್ನೆಲೆ ನಿರೂಪಣೆಯೊಂದಿಗೆ ವೇದಿಕೆ ಪ್ರವೇಶಿಸಿದರು. ಎರಡು ಪದರಗಳಲ್ಲಿ ಮೇಲ್ಭಾಗಕ್ಕೆ ಉಡಿಸಿದ ಒಂದು ಸೀರೆ, ತುಂಬು ನೆರಿಗೆಯನ್ನು ಹಾಕಿ ಸೊಂಟದಿಂದ ಉಡಿಸಿದ್ದ ಮತ್ತೊಂದು ಸೀರೆ ನೆಲಮುಟ್ಟಿ ಸಾಗುತ್ತಿತ್ತು. ತಲೆಯ ಮೇಲೆ ಕಿರೀಟಧಾರಣೆ, ಕೈ ಮತ್ತು ಸೊಂಟಕ್ಕೆ ಗುಲಾಬಿ ಬಣ್ಣದ ಟೇಪುಗಳನ್ನು ಕಲಾತ್ಮಕವಾಗಿ ಕಟ್ಟಲಾಗಿತ್ತು. ಹಾಗೆ ಕಟ್ಟಿದ್ದ ಒಂದು ಕೈಯಲ್ಲಿ ಉರಿಯುತ್ತಿರುವ ಮೇಣದ ಬತ್ತಿ ಹಿಡಿದು ನಿದ್ರೆಯಲ್ಲಿ ತೇಲಿಬಂದಂತೆ ನಿಧಾನವಾಗಿ ಯಾವುದೋ ಭ್ರಮಾಲೋಕದಲ್ಲಿ ಮುಖದ ಮೇಲೆ ಭಯ ತುಂಬಿಕೊಂಡಂತೆ ನಡೆದು ಹೋದರು. ಪ್ರೇಕ್ಷಕರ ಮೆಚ್ಚುಗೆಯ ಚಪ್ಪಾಳೆಗಳು ವಿಜೃಂಭಿಸಿದುವು. ತೀರ್ಪುಗಾರರಿಂದ ಲೇಡಿ ಮ್ಯಾಕ್‌ಬೆತ್ ವೇಷಧಾರಿ ಪಾತ್ರಕ್ಕೆ ಪ್ರಥಮ ಬಹುಮಾನ ಲಭಿಸಿತು" ಜಮುನಾರಾಣಿ ಎಷ್ಟು ಚೆನ್ನಾಗಿ ಅಭಿನಯಿಸಿದ್ದರೋ ಅಷ್ಟೆ ಚೆನ್ನಾಗಿ ನಾಗರತ್ನ ಅವರು ಇಲ್ಲಿ ಪದ್ಯಗಂಧಿ ಗದ್ಯವನ್ನು ರಚಿಸಿದ್ದಾರೆ. ಅಲ್ಲವೇ? 1981ರಲ್ಲಿ ಜಮುನಾರಾಣಿ ಪದವೀಧರರಾದರು. ಆಗಲೇ ನೃತ್ಯದಲ್ಲಿ, ನಟನೆ, ಕೇಶಾಲಂಕಾರ, ಚಿತ್ರಕಲೆ, ರಂಗೋಲಿ, ಸ್ಪೋಕನ್ ಇಂಗ್ಲೀಷ್ ಮುಂತಾದ ಅನೇಕ ಕ್ಷೇತ್ರಗಳಲ್ಲಿ ನಿಪುಣತೆಯನ್ನು ಪಡೆದರು. ಭರತನಾಟ್ಯದಲ್ಲಿ ಸೀನಿಯರ್ ಪರೀಕ್ಷೆಯಲ್ಲಿ ಉತ್ತೀರ್ಣರಾದರು. ಖಾಸಗಿ ಕಂಪನಿಯೊಂದರಲ್ಲಿ ಉದ್ಯೋಗಕ್ಕೆ ಸೇರಿದರು. ಶ್ರೀಯುತ ಎಲ್.ಕೆ. ನಾಗರಾಜ ಅವರೊಡನೆ ವಿವಾಹವೂ ನಡೆಯಿತು. ವರ್ಷಿಣಿ ಎಂಬ ಮಗಳು, ವಿಷ್ಣುಶರ್ಮನೆಂಬ ಮಗ. ಉದ್ಯೋಗಕ್ಕಾಗಿ ಸೌದಿ ಅರೇಬಿಯಾ ದೇಶಕ್ಕೆ ಪತಿಯ ಪಯಣ ಇತ್ಯಾದಿ ವಿಷಯಗಳು ಕಾದಂಬರಿಯೋ ಎಂಬಂತೆ ಓದಿಸಿಕೊಂಡು ಹೋಗುತ್ತವೆ. ಇವೆಲ್ಲ ವಾಸ್ತವ ಎಂಬುದೇ ಇಲ್ಲಿ ವೈಶಿಷ್ಟ್ಯ.

ಜಮುನಾರಾಣಿಯವರ ಜ್ಞಾನಪಿಪಾಸೆ ದೊಡ್ಡದು. ಅವರು ಸಂಸ್ಕೃತ ಭಾಷೆಯಲ್ಲಿ ಸ್ನಾತಕೋತ್ತರ ಪದವಿಯನ್ನು ಗಳಿಸಿದ್ದಲ್ಲದೆ ಎಂ.ಫಿಲ್., ಪಿಹೆಚ್.ಡಿ ಪದವಿಗಳನ್ನೂ ಗಳಿಸಿ ಅಪೂರ್ವ ಸಿದ್ಧಿಯನ್ನು ಸಾಧಿಸಿದ್ದಾರೆ ಎಂದು ಹೇಳಲೇ ಬೇಕು. ಸಂಸಾರ ನಿರ್ವಹಣೆ, ಇಬ್ಬರು ಮಕ್ಕಳ ಪಾಲನೆ ಇತ್ಯಾದಿ ಕರ್ತವ್ಯಗಳ ಜೊತೆಗೆ ಇವರು ಮಾಡಿದ ಸರಸ್ವತ್ಯಾರಾಧನೆ ಸ್ತುತ್ಯರ್ಹ.

ಸಂಸಾರ, ವಿದ್ಯೆ, ಕಲೆ, ಇವಿಷ್ಟು ಸಾಲದೆಂಬಂತೆ ಜಮುನಾರಾಣಿಯವರಿಗೆ ಜ್ಯೋತಿಷ್ಯಶಾಸ್ತ್ರದಲ್ಲಿ ಆಸಕ್ತಿ ಹುಟ್ಟಿದುದೂ ಒಂದು ವಿಶೇಷ. ಮನೆಯಲ್ಲಿ ತಾಯಿಯ ಕರಿಮಣಿಸರ ಕಳೆದು ಹೋಗಿದ್ದಾಗ ಜ್ಯೋತಿಷಿಗಳನ್ನು ಕೇಳಿದರಂತೆ. ಅವರು 'ಅದು ಮನೆಯಲ್ಲೇ ಇದೆ. ನೀವು ಮನೆಗೆ ಹೋಗುವಷ್ಟು ಕಾಲದಲ್ಲಿ ನಿಮ್ಮ ತಾಯಿಯವರಿಗೆ ಸಿಕ್ಕಿರುತ್ತದೆ' ಎಂದು ಕರಾರುವಾಕ್ಕಾಗಿ ಹೇಳಿದರು. ಹಾಗೇ ಅದು ದೊರಕಿತು. ಜ್ಯೋತಿಶ್ಶಾಸ್ತ್ರ ವೈಜ್ಞಾನಿಕ ಎಂದು ತೀರ್ಮಾನಿಸಿ ಜಮುನಾರಾಣಿ ಅವರ ಅಧ್ಯಯನವನ್ನು ಆರಂಭಿಸಿ ಅದರಲ್ಲೂ ಪರಿಣತಿಯನ್ನು ಸಾಧಿಸಿದ್ದಾರೆ.

ನೃತ್ಯತ್, ಸಂಗೀತ, ಯೋಗ ಇವೆಲ್ಲ ಸುಲಭ ಸಾಧ್ಯವಲ್ಲ. ಒಂದೊಂದೂ ಕಾಲವನ್ನೂ ಶ್ರಮವನ್ನೂ ಅಪೇಕ್ಷಿಸುತ್ತವೆ. ನೃತ್ಯ ಎಂಬುದು ದೇವರಿಗೆ ಅರ್ಪಿತವಾಗುವ ಚಾಕ್ಷುಷ ಯಜ್ಞ ಎಂದು ಕಾಳಿದಾಸನು ಹೇಳಿದ್ದಾನೆ.

'ದೇವಾನಾಮಿ ದಮಾಮನಂತಿ ಮನಯಃ
ಶಾಂತಂ ಕ್ರತುಂ ಚಾಕ್ಷುಷಮ್'

ಸಂಗೀತವಂತೂ ಮೋಕ್ಷಕ್ಕೆ ಸಾಧನವಾಗುವ ನಾದಾನುಸಂಧಾನರೂಪವಾದ ಸಾರಸ್ವತ ತಪಸ್ಸು.

ಯಥಾ ನಯತಿ ಕೈಲಾಸಂ ನಗಂ ಗಾನ ಸರಸ್ವತಿ
ತಥಾ ನಯತಿ ಕೈಲಾಸಂ ನ ಗಂಗಾ ನ ಸರಸ್ವತೀ ॥

ಎಂದು ಅದನ್ನು ಹೊಗಳಿದ್ದಾರೆ. ಯೋಗ ಪ್ರಪಂಚಕ್ಕೆ ಭಾರತ ದೇಶವು ನೀಡಿರುವ ಅತ್ಯಂತ ದೊಡ್ಡ ಕೊಡುಗೆ. ಇವೆಲ್ಲವನ್ನೂ ಮೈಗೂಡಿಸಿಕೊಂಡಿರುವ ಜಮುನಾರಾಣಿಯವರನ್ನು ಪ್ರಶಂಸಿಸಲು ಶಬ್ದಗಳು ಸಾಲವು. ಇವುಗಳನ್ನು ಕಲಿಯಲು ಅಭ್ಯಾಸ ತಪಸ್ವಿನಿಯಾದ ಅವರು ಮಾಡಿದ ಸಾಧನೆಯನ್ನೂ, ಎದುರಿಗೆ ಬಂದ ಎಡರು ತೊಡರುಗಳನ್ನು ಅವರು ಹೇಗೆ ದಾಟಿದರೆಂಬುದನ್ನು ಪ್ರಸ್ತುತ ಪುಸ್ತಕವು ತೆರೆದಿಟ್ಟಿದೆ.

ಇನ್ನು ಚಿತ್ರಕಲೆಯ ವಿಷಯವನ್ನು ಹೇಳಬೇಕಾದರೆ ಅದರಲ್ಲಿ ಜಮುರಾಣಿಯವರ ಗುರುಗಳು ಪ್ರಖ್ಯಾತ ಕಲಾವಿದರಾದ ಮೈಸೂರು ಆರ್ಟ್ ಗ್ಯಾಲರಿಯ ಅಧ್ಯಕ್ಷರಾದ ಮಾನ್ಯ ಶ್ರೀ ಎಲ್. ಶಿವಲಿಂಗಪ್ಪನವರು. ಈ ಪುಸ್ತಕದ ಮುನ್ನುಡಿಯಲ್ಲಿ ಅವರು ತಮ್ಮ ಶಿಷ್ಯೆಯ ಅಭ್ಯಾಸಪಾಠವಾದ ಬಗೆಗೆ ಹೀಗೆ ಬರೆದಿದ್ದಾರೆ– "ಆರಂಭದಲ್ಲಿ ವಾರಕ್ಕೆ ಎರಡು ಬಾರಿ ಬರುತ್ತಿದ್ದರು. ಕಲಿಕೆಯ ತೀವ್ರತೆ ಹೆಚ್ಚಾದಂತೆ ವಾರಪೂರ್ತಿ ಬಂದು ಪ್ರತಿ ದಿನ ಐದಾರು ಗಂಟೆಗಳ ಕಾಲ ಅಭ್ಯಾಸ ಮಾಡತೊಡಗಿದರು. ಚಿತ್ರರಚನೆಯಲ್ಲಿ ಬಹುಮುಖ್ಯ ಗಮನಿಸಬೇಕಾದ, ಅನ್ನುವುದಕ್ಕಿಂತ ಕಲಿಯಬೇಕಾದ ಮಾನವನ ಅಂಗಾಂಗ ರಚನಾ ವಿಧಾನ (ಅನಾಟಮಿ), ನೆಳಲು ಬೆಳಕಿನ ಸಂಯೋಜನೆ, ದೂರ ಹತ್ತಿರಗಳ ಸಮೀಕರಣ, ವಿಮರ್ಶಾತ್ಮಕವಾಗಿ ನೋಡುವ ರೀತಿ, ಇವೆಲ್ಲವನ್ನೂ ಹಂತ ಹಂತವಾಗಿ ಕಲಿಯುತ್ತಾ ಬಂದರು. ನಮ್ಮ ಗ್ಯಾಲರಿಯಲ್ಲಿ ಚಿತ್ರ ಮತ್ತು ಶಿಲ್ಪಕಲೆಗೆ ಸಂಬಂಧಿಸಿದಂತೆ ಇದ್ದ ಪುಸ್ತಕಗಳನ್ನು ಓದುವ ಮೂಲಕ ಅದನ್ನು ಸಂದರ್ಭಾನುಸಾರ ಅನುಕರಣೆ ಮಾಡುವ ಕಾರ್ಯವನ್ನು ಮಾಡಿ ಜ್ಞಾನದ ಬುತ್ತಿಯನ್ನು ತುಂಬಿಕೊಳ್ಳುತ್ತಿದ್ದ ರೀತಿ ಅಚ್ಚರಿ ತರುತ್ತಿತ್ತು. ಒಮ್ಮೆ ಹೇಳಿದರೆ ಅಥವಾ ಮಾಡಿ ತೋರಿಸಿದರೆ ಸಾಕು, ಗಮನವಿಟ್ಟು ಕೇಳುತ್ತಾ ಹಾಗೆಯೇ ನೋಡುತ್ತಾ ಆ ದಿನವೇ ತಮ್ಮ ಮನೆಯಲ್ಲಿ ಸಮಯದ ಪ್ರಜ್ಞೆಯಿಲ್ಲದೆ ರಚಿಸಿ ಮರುದಿನ ತಂದು ತೋರಿಸಿದಾಗಲೇ ಅವರಿಗೆ ತೃಪ್ತಿಯಾಗುತ್ತಿತ್ತು. ಅಂದು ಮಾತ್ರವಲ್ಲ. ಇಂದಿಗೂ ಆ ಉತ್ಸಾಹ ಬತ್ತಿಲ್ಲ. ತತ್ಫಲವಾಗಿಯೇ ಇಂದು ಸ್ವತಂತ್ರವಾಗಿ ಏಕವ್ಯಕ್ತಿ ಚಿತ್ರಕಲಾ ಪ್ರದರ್ಶನ ಮಾಡುವ ಹಾಗೂ ಮತ್ತಿತರರಿಗೆ ಮಾರ್ಗದರ್ಶನ ಮಾಡುವ ಮಟ್ಟಕ್ಕೇರಿದ್ದಾರೆ– ಎಂಬುದು ಸಂತೋಷದ ಸಂಗತಿ".

ಇದಕ್ಕಿಂತ ದೊಡ್ಡ ಸರ್ಟಿಫಿಕೇಟು ಏನಿರಲು ಸಾಧ್ಯ? ಈ ಪುಸ್ತಕದಲ್ಲಿ ಸಮಾಜಮುಖಿ ಕಾರ್ಯಗಳು ಎಂಬ ಅಧ್ಯಾಯವಿದೆ. ತಾವಿರುವ ಬಡಾವಣೆಯಲ್ಲಿ ವಾಚನಾಲಯದ ನಿರ್ಮಾಣ ಮುಂತಾದ ಸಮಾಜ ಸೇವಾ ಕಾರ್ಯಗಳ ಬಗೆಗೆ ಅಲ್ಲಿ ವಿವರಣೆ ಇದೆ. ಇದಕ್ಕೆಲ್ಲ ಜಮುನಾರಾಣಿಯವರಿಗೆ ಸಮಯ ಎಲ್ಲಿ ದೊರಕುತ್ತದೆ ಎಂಬುದೇ ಒಂದು ಆಶ್ಚರ್ಯ. ಪರಿಸರ, ಪಕ್ಷಿಗಳು, ಪ್ರಾಣಿಗಳು ಇತ್ಯಾದಿಗಳ ಬಗೆಗೂ ಅವರ ಕಳಕಳಿ ಇನ್ನೊಂದು ಮುಖ್ಯ ಅಂಶ.

ಪುಸ್ತಕದ ಕೊನೆಯಲ್ಲಿ ಚಿತ್ರ ಸಂಪುಟವಿದೆ. ಎಷ್ಟೊಂದು ಸಮಾರಂಭಗಳಲ್ಲಿ ಜಮುನಾರಾಣಿ ಭಾಗವಹಿಸಿದ್ದಾರೆ! ಎಷ್ಟು ಸಮ್ಮಾನಗಳಿಗೆ ಭಾಜನರಾಗಿದ್ದಾರೆ ಎಷ್ಟು ಪುಸ್ತಕಗಳನ್ನು ಬರೆದು ಬೆಳಕಿಗೆ ತಂದಿದ್ದಾರೆ, ಟಿ.ಎನ್. ಸೀತಾರಾಮ್, ಹಂಸಲೇಖ, ಮಂಡ್ಯ ರಮೇಶ್ ಮುಂತಾದ ದಿಗ್ಗಜರ ಪ್ರಶಂಸೆಗೆ ಪಾತ್ರರಾಗಿ ಶೋಭಿಸಿದ್ದಾರೆ!

ಮೈಸೂರು ಕಲಾವಿದರ ಖಜಾನೆ. ಅದರಲ್ಲಿ ಅಸಂಖ್ಯ ಅಮೂಲ್ಯ ರತ್ನಗಳಿವೆ. ಅವುಗಳಲ್ಲೊಂದು ಅನರ್ಘ್ಯ ರತ್ನ ಡಾ. ಜಮುನಾರಾಣಿ ಮಿರ್ಲೆ ಅವರು. ಅವರ ಜೀವನದ ಸಾಧನೆ ಸಿದ್ಧಿಗಳನ್ನು ಹೃದ್ಯವಾಗಿ ದಾಖಲಿಸಿರುವ ಬಿ.ಆರ್. ನಾಗರತ್ನ ಅವರಿಗೆ ಎಲ್ಲಾ ಸಂಸ್ಕೃತಿಪ್ರಿಯರೂ ಕೃತಜ್ಞರು.

ಮೈಸೂರಿನ ಕೆ.ಜಿ.ಕೊಪ್ಪಲಲ್ಲಿ ಸಾಂಪ್ರದಾಯಕ ಕುಸ್ತಿ ಮಟ್ಟಿ; ಅಂಬಾತಾಯಿ ಪೂಜೆ



ಕೆ.ಜಿ.ಕೊಪ್ಪಲಿನ ಶ್ರೀ ಆದಿಶಕ್ತಿ ಬಂದಂತಮ್ಮ ದೇವಸ್ಥಾನದ ಆವರಣದಲ್ಲಿ ಆರು ಗರಡಿಯ ಸದಸ್ಯರು, ಗ್ರಾಮದ ಪ್ರಮುಖ ಯಜಮಾನರ ಸಮ್ಮುಖದಲ್ಲಿ ಕುಸ್ತಿ ಮಟ್ಟಿ ಮತ್ತು ಅಂಬಾತಾಯಿ ಪೂಜೆ ಶುಕ್ರವಾರ ನೆರವೇರಿತು.

ಮೈಸೂರು, ಆ.16(ಎಸ್‌ಪಿಎನ್)– ಮೈಸೂರು ವರಲಕ್ಷ್ಮಿ ಹಬ್ಬದ ಪ್ರಯುಕ್ತ ಕೆ.ಜಿ.ಕೊಪ್ಪಲಿನ ಶ್ರೀ ಆದಿಶಕ್ತಿ ಬಂದಂತಮ್ಮ ದೇವಸ್ಥಾನದ ಆವರಣದಲ್ಲಿ ಆರು ಗರಡಿಯ ಸದಸ್ಯರು, ಗ್ರಾಮದ ಪ್ರಮುಖ ಯಜಮಾನರ ಸಮ್ಮುಖದಲ್ಲಿ ಕುಸ್ತಿ ಮಟ್ಟಿ ಮತ್ತು ಅಂಬಾತಾಯಿ ಪೂಜೆ ಶುಕ್ರವಾರ ನೆರವೇರಿತು.

ಈ ಮೆರವಣಿಗೆಯಲ್ಲಿ ಗ್ರಾಮದ ಪ್ರಮುಖ ಯಜಮಾನವರು, ಮುಖಂಡರು, ವಿವಿಧ ಗರಡಿಯ ಸದಸ್ಯರು ಜಾನಪದ ಕಲಾತಂಡ ನೇತೃತ್ವದಲ್ಲಿ ಕುಸ್ತಿ ಮಟ್ಟಿ, ಅಂಬಾತಾಯಿ ಮೂರ್ತಿಯನ್ನು ಕೆ.ಜಿ. ಕೊಪ್ಪಲಿನ 2ನೇ ಕ್ರಾಸ್‌ನಲ್ಲಿರುವ ಶ್ರೀ ರಾಮ ಸೇವಾ ಟ್ರಸ್ಟ್ ಹೊಸಬೀದಿ ಹತ್ತು ಜನಗಳ ಗರಡಿಗೆ ತಂದು ಪೂಜೆ ನೆರವೇರಿಸಿದರು.

ನಂತರ ಪೈಲ್ವಾನ್ ಬಸವಯ್ಯ ಹತ್ತು ಜನಗಳ ಗರಡಿ, ಪೈಲ್ವಾನ್ ಹುಚ್ಚಯ್ಯನವರ ಹತ್ತು ಜನಗಳ ಗರಡಿ, ಪೈಲ್ವಾನ್ ವಸ್ತಾದ್ ಲಿಂಗೇಗೌಡನವರ ಹತ್ತು ಜನಗಳ ಗರಡಿ (ಬೇವಿನ ಗರಡಿ), ಪೈಲ್ವಾನ್ ಬಸವಯ್ಯ, ಬೋರಯ್ಯ ಹತ್ತು ಜನಗಳ ಗರಡಿ (ಮೊಟ್ಟೆ ಗರಡಿ), ಜಯನಗರದ ಪೈಲ್ವಾನ್ ಬಸವಯ್ಯನವರ ಹತ್ತು ಜನರ ಚಿಕ್ಕಗರಡಿ ಸೇರಿದಂತೆ ಆರು ಗರಡಿಯ ಸದಸ್ಯರು, ಕುಸ್ತಿ ಮಟ್ಟಿನ ಮಣ್ಣು ತಂದು ಪೂಜೆ ಸಲ್ಲಿಸಿದರು. ಈ ವೇಳೆ ಜಾನಪದ ಕಲಾ ತಂಡದ ಪ್ರದರ್ಶನ ಜನರ ಕಣ್ಮನ ಸೆಳೆಯಿತು.

ಈ ವೇಳೆ ಗ್ರಾಮದ ಮುಖಂಡರೊಬ್ಬರು 'ಮೈಸೂರು ಮಿತ್ರ'ನಿಗೆ ಮಾಹಿತಿ ನೀಡಿ, ತಲ ತಲಾಂತರದಿಂದ ಈ ಕಾರ್ಯ ನೆರವೇರಿಸಿಕೊಂಡು ಬಂದಿದ್ದು, ಈ ವರ್ಷವೂ ವರಲಕ್ಷ್ಮಿ ಹಬ್ಬದ ಪ್ರಯುಕ್ತ ಅದ್ದೂರಿಯಾಗಿ ವಿವಿಧ ಪೂಜಾ ಕೈಕರ್ಯ ನೆರವೇರಿಸಿ, ಆರು ಗರಡಿಯಲ್ಲಿ ಕುಸ್ತಿ ಮಟ್ಟಿನ ಮಣ್ಣು ಬದಲಾವಣೆ ಮಾಡಲಾಗುತ್ತದೆ. ಈ ಸಾಲಿನ ಕುಸ್ತಿಪಟುಗಳು ಅಭ್ಯಾಸ ಮಾಡಲು ಅನುವು ಮಾಡಿಕೊಡಲಾಗುತ್ತದೆ ಎಂದು ತಿಳಿಸಿದರು.

ಮೈಸೂರು ಪಾಲಿಕೆ ಚುನಾವಣೆ ಹಿನ್ನೆಲೆ

ವಾರ್ಡ್‌ವಾರು ಮತದಾರರ ಪಟ್ಟಿ ಸಿದ್ಧಪಡಿಸಲು ಸೂಚನೆ

ಮೈಸೂರು, ಆ.16(ಎಸ್‌ಬಿಡಿ)– ಮೈಸೂರು ಮಹಾನಗರ ಪಾಲಿಕೆ ಸಾರ್ವತ್ರಿಕ ಚುನಾವಣೆ ಹಿನ್ನೆಲೆಯಲ್ಲಿ ವಾರ್ಡ್‌ವಾರು ಮತದಾರರ ಪಟ್ಟಿಯನ್ನು ತಯಾರಿಸಲು ಜಿಲ್ಲಾಧಿಕಾರಿಗಳಿಗೆ ರಾಜ್ಯ ಚುನಾವಣಾ ಆಯೋಗ ಸೂಚನೆ ನೀಡಿದೆ.

ವಾರ್ಡ್‌ಗಳ ವಿಂಗಡಣೆ ಅಧಿಸೂಚನೆಯಂತೆ ಆ.19ರಿಂದ 24ರೊಳಗೆ ವಾರ್ಡ್ ವ್ಯಾಪ್ತಿಯ ಮತದಾರರನ್ನು ಗುರುತಿಸಬೇಕು. ಆ.25ರಿಂದ 31ರೊಳಗೆ ಫ್ರಮ್ ಟು ಮ್ಯಾಟ್ರಿಕ್ಸ್ ತಯಾರಿಸಿ ಮುದ್ರಕರಿಗೆ ನೀಡಬೇಕು. ಸೆ.1ರಿಂದ 4ರೊಳಗೆ ಪ್ರಥಮ ಚೆಕ್‌ಲಿಸ್ಟ್ ಸಿದ್ಧಪಡಿಸಿ ಸೆ.5ರಿಂದ 10ರೊಳಗೆ ವಾರ್ಡ್‌ವಾರು ಮತ್ತೊಮ್ಮೆ ಪರಿಶೀಲಿಸಿ ಬದಲಾವಣೆಗಳಿದ್ದರೆ ಪಟ್ಟಿಯಲ್ಲಿ ಅಳವಡಿಸಬೇಕು. ಸೆ.17ಕ್ಕೆ ಕರಡು ಮತದಾರರ ಪಟ್ಟಿಯನ್ನು ಪ್ರಕಟಿಸಬೇಕು. ಸೆ.24ರವರೆಗೆ ಆಕ್ಷೇಪಣೆಗಳನ್ನು ಸ್ವೀಕರಿಸಿ, ಸೆ.30ರೊಳಗೆ ಅವುಗಳನ್ನು ಅತ್ಯರ್ಥಪಡಿಸಬೇಕು. ಅಕ್ಟೋಬರ್ 6ರೊಳಗೆ ಅಂತಿಮ ಚೆಕ್‌ಲಿಸ್ಟ್ ಪಡೆದುಕೊಂಡು ವಾರ್ಡ್ ವ್ಯಾಪ್ತಿಯಲ್ಲಿ ಮತ್ತೊಮ್ಮೆ ಪರಿಶೀಲಿಸಿ, ಅಕ್ಟೋಬರ್ 9ಕ್ಕೆ ಅಂತಿಮ ಮತದಾರರ ಪಟ್ಟಿ ಪ್ರಕಟಿಸಬೇಕು. ಜೊತೆಗೆ ಸೇವಾ ಮತದಾರರ ಪಟ್ಟಿಯನ್ನೂ ತಯಾರಿಸಬೇಕು.


ಭಾವಚಿತ್ರವಿರುವ ಮತದಾರರ ಪಟ್ಟಿಯನ್ನು ತಯಾರಿಸಬೇಕು. ವಿಧಾನ ಸಭಾ ಮತದಾರರ ಪಟ್ಟಿಯಲ್ಲಿರುವ ಮತದಾರರನ್ನು ಗುರುತಿಸಿ ಕರಾರುವಕ್ಕಾಗಿ ಆಯಾ ವಾರ್ಡ್‌ನ ಮತದಾರರ ಪಟ್ಟಿಗೆ ಸೇರಿಸಬೇಕು. ಯಾವುದೇ ಕಾರಣಕ್ಕೂ ಒಂದಕ್ಕಿಂತ ಹೆಚ್ಚು ವಾರ್ಡ್‌ಗಳಲ್ಲಿ ಪುನರಾವರ್ತನೆಯಾಗದಂತೆ ಎಚ್ಚರ ವಹಿಸಬೇಕು. ಅಗತ್ಯವಿರುವ ಮತಗಟ್ಟೆಗಳನ್ನು ಗುರುತಿಸಿ, ಪ್ರತ್ಯೇಕ ಮತದಾರರ ಪಟ್ಟಿ ತಯಾರಿಸಬೇಕು. ಅಂತಿಮ ಮತದಾರರ ಪಟ್ಟಿಯನ್ನು ಪ್ರಕಟಿಸಿದ ನಂತರ ಚುನಾವಣೆ ಸಂದರ್ಭದಲ್ಲಿ ಎಲ್ಲಾ ಪೂರಕ ಪಟ್ಟಿಗಳನ್ನು ಸೇರಿಸಿದ ನಂತರದ 1400ಕ್ಕೂ ಹೆಚ್ಚು ಮತದಾರರು ಕಂಡುಬಂದಲ್ಲಿ ಅಂತಹ ಮತದಾರರ ಪಟ್ಟಿಯನ್ನು ವಿಭಜಿಸಿ ಆಕ್ಸಿಲರಿ ಮತಗಟ್ಟೆಗಳನ್ನು ರಚಿಸುವ ಬಗ್ಗೆ ಜಿಲ್ಲಾಧಿಕಾರಿಗಳು ತೀರ್ಮಾನಿಸಿ ಅವರ ಸಮರ್ಥನೆಯೊಂದಿಗೆ ಆಯೋಗದ ಅನುಮೋದನೆ ಪಡೆದು ಅದೇ ಮತಗಟ್ಟೆಯ ಪಕ್ಕದ ಕೊಠಡಿಯಲ್ಲಿ ಆಕ್ಸಿಲರಿ ಮತಗಟ್ಟೆಯನ್ನು ಸ್ಥಾಪಿಸಬಹುದು. ಪಾಲಿಕೆ ಆಯುಕ್ತರು ಮತದಾರರ ಪಟ್ಟಿಯನ್ನು ಸಿದ್ಧಪಡಿಸಿ, ದೃಢೀಕರಿಸಬೇಕು ಎಂದು ಚುನಾವಣಾ ಆಯೋಗ ಸೂಚಿಸಿದೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com

ಮೈಸೂರಿನಲ್ಲಿ ಸಂಭ್ರಮದ 78ನೇ ಸ್ವಾತಂತ್ರ್ಯೋತ್ಸವ ಆಚರಣೆ

ದೇಶ ಪ್ರೇಮ ಸ್ವಾತಂತ್ರ್ಯೋತ್ಸವಕ್ಕೆ ಸೀಮಿತವಾಗದೆ ರಕ್ತಗತವಾಗಿರಬೇಕು: ಜಿಲ್ಲಾ ಉಸ್ತುವಾರಿ ಸಚಿವ ಡಾ.ಮಹದೇವಪ್ಪ ಸಲಹೆ

● ಶಕ್ತಿ ಯೋಜನೆಯಲ್ಲಿ 10 ಕೋಟಿ ಮಹಿಳೆಯರ ಪ್ರಯಾಣ ● ಅನ್ನಭಾಗ್ಯ ಯೋಜನೆಯಲ್ಲಿ 408 ಕೋಟಿ ಪಾವತಿ ● ಏತ ನೀರಾವರಿ ಯೋಜನೆಗೆ ತಾಂತ್ರಿಕ ಮಂಜೂರಾತಿ ● ದೇಶ ಪ್ರೇಮ ಸಾರುವ ಚಿಣ್ಣರ ಸಾಂಸ್ಕೃತಿಕ ಕಾರ್ಯಕ್ರಮ





ಮೈಸೂರಿನ ಬನ್ನಿಮಂಟಪ ಪಂಜಿನ ಕವಾಯತು ಮೈದಾನದಲ್ಲಿ ಗುರುವಾರ ನಡೆದ 78ನೇ ಸ್ವಾತಂತ್ರ್ಯ ದಿನಾಚರಣೆ ಸಮಾರಂಭದಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಪಥ ಸಂಚಲನದ ಪರಿವೀಕ್ಷಣೆ ನಡೆಸಿದರು. (ಎಡಚಿತ್ರ) ಈ ವೇಳೆ ಶಾಲಾ ವಿದ್ಯಾರ್ಥಿಗಳು ದೇಶ ಭಕ್ತಿ ಸಾರುವ ಸಾಂಸ್ಕೃತಿಕ ಕಾರ್ಯಕ್ರಮ ಪ್ರದರ್ಶಿಸಿದರು.

ಮೈಸೂರು, ಆ.16(ಬಿಎಲ್‌ಯು)– ನಮ್ಮ ದೇಶ ಪ್ರೇಮ ಸ್ವಾತಂತ್ರ್ಯ ದಿನಾಚರಣೆಯಂದು ಸಂಭ್ರಮಕ್ಕಷ್ಟೇ ಸೀಮಿತಗೊಳ್ಳದೆ, ಪ್ರತಿ ದಿನ, ಪ್ರತಿ ಕ್ಷಣ ರಕ್ತಗತವಾಗಿರಬೇಕು ಎಂದು ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ. ಮಹದೇವಪ್ಪ ಸಲಹೆ ನೀಡಿದರು.

ಮೈಸೂರಿನ ಬನ್ನಿಮಂಟಪ ಪಂಜಿನ ಕವಾಯತು ಮೈದಾನದಲ್ಲಿ ಜಿಲ್ಲಾಡಳಿತ ಆಯೋಜಿಸಿದ್ದ 78ನೇ ಸ್ವಾತಂತ್ರ್ಯ ದಿನಾಚರಣೆ ಸಮಾರಂಭದಲ್ಲಿ ಧ್ವಜಾರೋಹಣ ನೆರವೇರಿಸಿ ಮಾತನಾಡಿದ ಅವರು, ಸ್ವಾತಂತ್ರ್ಯಕ್ಕಾಗಿ ಹೋರಾಟ, ತ್ಯಾಗ, ಬಲಿದಾನ ಮಾಡಿದ ಹಿರಿಯರನ್ನು ಕೃತಜ್ಞತೆಯಿಂದ ನೆನೆಯಬೇಕು ಎಂದು ಹೇಳಿದರು.

ನಾವಿಂದು ಮನೆಯಲ್ಲಿ ಸುರಕ್ಷಿತ, ನಿಶ್ಚಿಂತೆಯಿಂದ ಇರಲು ಗಡಿಯಲ್ಲಿ ತಮ್ಮ ಪ್ರಾಣವನ್ನು ಒತ್ತೆ ಇಟ್ಟು ಕಾಯುತ್ತಿರುವ ನಮ್ಮ ಹೆಮ್ಮೆಯ ವೀರ ಯೋಧರು ಕಾರಣರಾಗಿದ್ದು, ಅವರಿಗೆ ಇಂದು ತಲೆಬಾಗಿ ನಮಿಸಬೇಕು ಎಂದು ಡಾ.ಮಹದೇವಪ್ಪ ಹೇಳಿದರು.

ಅನ್ನಭಾಗ್ಯದ ಪೂರ್ಣ ಪ್ರಯೋಜನ: ಮೈಸೂರು ಜಿಲ್ಲೆಯಲ್ಲಿ ಕಳೆದ ಒಂದು ವರ್ಷದ ಅವಧಿಯಲ್ಲಿ ರಾಜ್ಯ ಸರ್ಕಾರ ಜಾರಿಗೊಳಿಸಿರುವ ಹಾಗೂ ಅನುಷ್ಠಾನ ಮಾಡುತ್ತಿರುವ ಯೋಜನೆಗಳ ಬಗ್ಗೆ ಸಮಗ್ರ ಮಾಹಿತಿ ನೀಡಿದ ಡಾ.ಮಹದೇವಪ್ಪ ಬಿಪಿಎಲ್ ಹಾಗೂ ಅಂತ್ಯೋದಯ ಕಾರ್ಡ್ ಹೊಂದಿರುವ ಪ್ರತಿ ಸದಸ್ಯರಿಗೆ 5 ಕೆ.ಜಿ. ಅಕ್ಕಿ ಹಾಗೂ ಉಳಿದ 5 ಕೆ.ಜಿ.ಗೆ 170 ರೂಪಾಯನ್ನು ಡಿಬಿಟಿ ಮೂಲಕ ನೇರವಾಗಿ ಪಾವತಿ ಮಾಡಲಾಗುತ್ತಿದೆ. ಮೈಸೂರು ಜಿಲ್ಲೆಯ 6,60,818 ಕುಟುಂಬಗಳಿಗೆ ಇದರಿಂದ ಅನುಕೂಲವಾಗುತ್ತಿದ್ದು, 408.16 ಕೋಟಿ ರೂಪಾಯಿಯನ್ನು ಈ ತನಕ ಸಂದಾಯ ಮಾಡಲಾಗಿದೆ ಎಂದು ತಿಳಿಸಿದರು.

ಮೈಸೂರು ಜಿಲ್ಲೆಯಲ್ಲಿ ಶಕ್ತಿ ಯೋಜನೆಯಲ್ಲಿ ಪ್ರತಿ ದಿನ 3.50 ಲಕ್ಷ ಮಹಿಳೆಯರು ಪ್ರಯಾಣ ಮಾಡುತ್ತಿದ್ದು, ಈ ತನಕ 10.20 ಕೋಟಿ ಮಹಿಳೆಯರು ಉಚಿತವಾಗಿ ಪ್ರಯಾಣ ಮಾಡಿದ್ದಾರೆ. 6,66,264 ಫಲಾನುಭವಿಗಳು ಗೃಹ ಲಕ್ಷ್ಮಿ ಯೋಜನೆಯ ಅನುಕೂಲ ಪಡೆದಿದ್ದಾರೆ. ಯುವ ನಿಧಿ ಯೋಜನೆಯಲ್ಲಿ 6450 ಅರ್ಜಿಗಳು ನೋಂದಣಿಯಾಗಿದ್ದು, 4279 ಫಲಾನುಭವಿಗಳಿಗೆ ಹಣ ಪಾವತಿ ಮಾಡಲಾಗಿದೆ ಎಂದು ಅಂಕಿ–ಅಂಶಗಳ ಸಹಿತ ಮಾಹಿತಿ ನೀಡಿದರು.

ಮೈಸೂರು ಪ್ರಗತಿದಾಯಕ: ಮೈಸೂರಿನ ಭೌಗೋಳಿಕ ಗುರುತು ಬೆಳೆಗಳಾದ ಮೈಸೂರು ಮಲ್ಲಿಗೆ, ನಂಜನಗೂಡು ರಸಬಾಳೆ ಹಾಗೂ ಮೈಸೂರು ವೀಳ್ಯದೆಲೆಯ ವಿಸ್ತೀರ್ಣ ಹೆಚ್ಚಿಸಿ, ಉತ್ಪಾದನೆ ಉತ್ತೇಜಿಸಲಾಗಿದೆ. ಈ ಮೂಲಕ ಮಾರುಕಟ್ಟೆಯ ವ್ಯವಸ್ಥೆ ಬಲಪಡಿಸಿ, ಈ ಬೆಳೆಗಳ ಸಂರಕ್ಷಣೆಗೆ ಕಾರ್ಯಕ್ರಮ ರೂಪಿಸಲಾಗಿದೆ.

2023–24ನೇ ಸಾಲಿನ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಮೈಸೂರು ಜಿಲ್ಲೆಯು 19ನೇ ಸ್ಥಾನದಿಂದ 7ನೇ ಸ್ಥಾನ ಪಡೆದಿರುವುದು ಹೆಮ್ಮೆಯ ವಿಚಾರ ಎಂದು ಡಾ.ಮಹದೇವಪ್ಪ ಹೇಳಿದರು.

ನಂಜನಗೂಡು ತಾಲೂಕಿನ ದೇವನೂರು ಗ್ರಾಮದ ಬಳಿ ಏತ ನೀರಾವರಿ ಯೋಜನೆಯಲ್ಲಿ 17 ಕೆರೆಗಳಿಗೆ 90 ಕೋಟಿ ವೆಚ್ಚದಲ್ಲಿ ನೀರು ತುಂಬಿಸಲಾಗುತ್ತಿದೆ. ಜೊತೆಗೆ ಕೆ.ಆರ್.ನಗರ ತಾಲೂಕಿನ ಕೆಸ್ತೂರು ಏತ ನೀರಾವರಿ ಯೋಜನೆಯಲ್ಲಿ 50 ಕೋಟಿ ವೆಚ್ಚದಲ್ಲಿ 29 ಕೆರೆಗಳಿಗೆ ನೀರು ತುಂಬಿಸಲಾಗುತ್ತಿದೆ. ಈ ಎರಡು ಯೋಜನೆಗಳಿಗೆ ತಾಂತ್ರಿಕ ಮಂಜೂರಾತಿಯಾಗಿದೆ ಎಂದು ಮಾಹಿತಿ ನೀಡಿದರು.

2024–25 ನೇ ಸಾಲಿನ ಪರಿಶಿಷ್ಟ ಜಾತಿಯ ಯೋಜನೆಯಲ್ಲಿ 59.60 ಕೋಟಿ ವೆಚ್ಚದಲ್ಲಿ ಹುಣಸೂರು ತಾಲೂಕಿನಲ್ಲಿ 1 ಮೆಟ್ರಿಕ್ ಪೂರ್ವ ಹಾಗೂ ಮೈಸೂರು ನಗರದಲ್ಲಿ 8 ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯಗಳ ಕಟ್ಟಡ ನಿರ್ಮಾಣ ಕೈಗೊಳ್ಳಲಾಗಿದ್ದು, ವರ್ಷಾಂತ್ಯದಲ್ಲಿ ಇದು ಪೂರ್ಣಗೊಳ್ಳಲಿದೆ ಎಂದು ಹೇಳಿದರು.

ಮೈಸೂರಿನ ಚಾಮುಂಡಿ ಗೆಸ್ಟ್ ಹಿಂಭಾಗದ ಡಾ.ಬಿ.ಆರ್.ಅಂಬೇಡ್ಕರ್ ಭವನದ ಬಾಕಿ ಕಾಮಗಾರಿಯನ್ನು 19.10 ಕೋಟಿ ವೆಚ್ಚದಲ್ಲಿ ಪೂರ್ಣಗೊಳಿಸಲಾಗುವುದು. ಇದಲ್ಲದೆ ಮೈಸೂರು ಜಿಲ್ಲೆಯಲ್ಲಿ 120.36 ಕೋಟಿ ವೆಚ್ಚದಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ಭವನ ಹಾಗೂ ಡಾ.ಬಾಬು ಜಗಜೀವನರಾಂ ಭವನಗಳ ನಿರ್ಮಾಣ, ಪ್ರಗತಿ ಕಾಲೋನಿ, ಸ್ಮಶಾನಗಳ ಅಭಿವೃದ್ಧಿ ಮಾಡಲಾಗುವುದು ಎಂದು ತಿಳಿಸಿದರು.

ಒಟ್ಟಾರೆ ಭವ್ಯ ಭಾರತದ ಭವಿಷ್ಯವನ್ನು ಇನ್ನೂ ಎತ್ತರಕ್ಕೆ ಕೊಂಡೊಯ್ಯುವ ಸವಾಲುಗಳು ನಮ್ಮ ಮುಂದಿದೆ ಈ ಕಾರ್ಯದ ಯಶಸ್ವಿಗೆ ಎಲ್ಲರೂ ಒಟ್ಟಾಗಿ ದುಡಿಯೋಣ ಎಂದು ಡಾ.ಮಹದೇವಪ್ಪ ಕರೆ ನೀಡಿದರು.

ಧ್ವಜಾರೋಹಣಕ್ಕೂ ಮುನ್ನ ಡಾ. ಮಹದೇವಪ್ಪ, ಅಶ್ವಾರೋಹಿ ದಳ, ಪೊಲೀಸ್ ಹಾಗೂ ಎನ್‌ಸಿಸಿ ತುಕಡಿಗಳ ಪಥ ಸಂಚಲನ ಪರವೀಕ್ಷಣೆ ನಡೆಸಿ, ವಂದನೆ ಸ್ವೀಕರಿಸಿದರು. ಈ ವೇಳೆ ತ್ರಿವರ್ಣ ಧ್ವಜದ ಅತ್ಯಾಕರ್ಷಕ ಬಲೂನುಗಳನ್ನು ಹಾರಿಬಿಟ್ಟರು.

ಇದೇ ಸಂದರ್ಭದಲ್ಲಿ ಲಷ್ಕರ್ ಮೊಹಲ್ಲಾದ ಗುಡ್ ಶೆಪರ್ಡ್ ಕಾನ್ವೆಂಟ್ ಹಿರಿಯ ಪ್ರಾಥಮಿಕ ಶಾಲೆಯ ವಿದ್ಯಾರ್ಥಿಗಳು ವಿವಿಧತೆಯಲ್ಲಿ ಏಕತೆ ಸಾರುವ ದೇಶ ಭಕ್ತಿಯ ಸಮೂಹ ನೃತ್ಯ, ವಿ.ವಿ.ಮೊಹಲ್ಲಾದ ನಿರ್ಮಲಾ ಹಿರಿಯ ಪ್ರಾಥಮಿಕ ಶಾಲೆಯ ವಿದ್ಯಾರ್ಥಿಗಳು ದೇಶ ಗೀತೆಯ ಸಮೂಹ ನೃತ್ಯ ಹಾಗೂ ಎನ್.ಆರ್.ಮೊಹಲ್ಲಾದ ಸಂತ ಫಿಲೋಮಿನಾ ಪ್ರೌಢಶಾಲೆಯ ವಿದ್ಯಾರ್ಥಿಗಳು ದೇಶ ಪ್ರೇಮಿ ಭಗತ್ ಸಿಂಗ್‌ರವರ ಮರಣ ದಂಡನೆಯ ನೃತ್ಯರೂಪಕ ಪ್ರದರ್ಶಿಸಿದರು.

ಶಾಸಕ ತನ್ವೀರ್ ಸೇಠ್, ಮುಡಾ ಅಧ್ಯಕ್ಷ ಕೆ.ಮರಿಗೌಡ, ಕರ್ನಾಟಕ ವಸ್ತು ಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಅಯೂಬ್ ಖಾನ್, ಜಿಲ್ಲಾಧಿಕಾರಿ ಜಿ.ಲಕ್ಷ್ಮಿಕಾಂತ ರೆಡ್ಡಿ, ಅಪರ ಜಿಲ್ಲಾಧಿಕಾರಿ ಡಾ.ಶಿವ ರಾಜ್, ದಕ್ಷಿಣ ವಲಯ ಐಜಿಪಿ ಡಾ.ಬೋರಲಿಂಗಯ್ಯ, ನಗರ ಪೊಲೀಸ್ ಆಯುಕ್ತೆ ಸೀಮಾ ಲಾಟ್ಕರ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ವಿಷ್ಣುವರ್ಧನ್, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಕೆ.ಎಂ. ಗಾಯತ್ರಿ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಆಟೋ ಚಾಲಕರು, ಬೀದಿ ಬದಿ ವ್ಯಾಪಾರಸ್ಥರ ಸ್ವಾತಂತ್ರ್ಯ ಸಂಭ್ರಮ



ಮೈಸೂರಿನ ರಾಮಾನುಜ ರಸ್ತೆಯಲ್ಲಿ ಆಟೋ ಚಾಲಕರು ಬೃಹತ್ ತ್ರಿವರ್ಣ ಧ್ವಜವನ್ನು ರಸ್ತೆಯ ಇಕ್ಕೆಲಗಳಲ್ಲಿ ಪ್ರದರ್ಶಿಸಿ ದೇಶ ಪ್ರೇಮ ಮೆರೆದರು.

ಮೈಸೂರು ನಗರದ ವಿವಿಧೆಡೆ ಆಟೋ ಚಾಲಕರು, ಬೀದಿ ಬದಿ ವ್ಯಾಪಾರಿಗಳು 78 ನೇ ಸ್ವಾತಂತ್ರ್ಯೋತ್ಸವವನ್ನು ಸಂಭ್ರಮದಿಂದ ಆಚರಿಸಿದರು.

ನಗರದ ರಾಮಾನುಜ ರಸ್ತೆಯ ಇಕ್ಕೆಲೆಯಲ್ಲಿ ಬೃಹತ್ ತ್ರಿವರ್ಣ ಧ್ವಜವನ್ನು ಪ್ರದರ್ಶಿಸಿದ್ದರು. ಸಯ್ಯಾಜಿರಾವ್ ರಸ್ತೆಯಲ್ಲಿ ರಾಜಮಾರ್ಗದಲ್ಲಿ ಬೀದಿ ಬದಿ ವ್ಯಾಪಾರಿಗಳು ತ್ರಿವರ್ಣ ಧ್ವಜವನ್ನು ಹಾರಿಸಿ ರಾಷ್ಟ್ರಪ್ರೇಮ ಮೆರೆದರು.

ಇದಲ್ಲದೆ ದೇವರಾಜ ಅರಸ್ ರಸ್ತೆ ಅಗ್ರಹಾರ, ನಂಜುಮಳಿಗೆ ಸೇರಿದಂತೆ ಬಹಳಷ್ಟು ಕಡೆ ಮಹಾತ್ಮಾ ಗಾಂಧೀಜಿ ಸೇರಿದಂತೆ ಸ್ವಾತಂತ್ರ್ಯ ಹೋರಾಟಗಾರರ ಭಾವಚಿತ್ರಗಳ ಫ್ಲೆಕ್ಸ್‌ಗಳನ್ನು ಹಾಕಿ ಸ್ವಾತಂತ್ರ್ಯ ದಿನಾಚರಣೆಯ ಸಂಭ್ರಮದಲ್ಲಿ ಭಾಗಿಯಾಗಿದ್ದರು.


ಒಲಂಪಿಕ್ಸ್ ವಿಜೇತರಿಗೆ ಪರಿಪೂರ್ಣ ಗೌರವ



ಮೈಸೂರಿನ ಬನ್ನಿಮಂಟಪ ಮೈದಾನದಲ್ಲಿ ಗುರುವಾರ ನಡೆದ ಸ್ವಾತಂತ್ರ್ಯೋತ್ಸವ ಸಮಾರಂಭದಲ್ಲಿ ಒಲಂಪಿಕ್ಸ್ ಕ್ರೀಡಾಕೂಟದಲ್ಲಿ ವಿಜೇತರಾದ ಕ್ರೀಡಾಪಟುಗಳ ಭಾವಚಿತ್ರಗಳಿರುವ ಫ್ಲೆಕ್ಸ್ ಪ್ರದರ್ಶಿಸಿ ಅಭಿನಂದಿಸಲಾಯಿತು.

ಪ್ಯಾರಿಸ್‌ನ ಒಲಂಪಿಕ್ಸ್ ಕ್ರೀಡಾಕೂಟದಲ್ಲಿ ಪದಕ ವಿಜೇತ ದೇಶದ ಕ್ರೀಡಾಪಟುಗಳನ್ನು ಮೈಸೂರಿನಲ್ಲಿ ನಡೆದ 78 ನೇ ಸ್ವಾತಂತ್ರ್ಯೋತ್ಸವ ಸಮಾರಂಭದಲ್ಲಿ ಅಭಿನಂದಿಸಲಾಯಿತು. ಬನ್ನಿಮಂಟಪ ಮೈದಾನದ ಒಳಗೆ ಹಾಗೂ ಹೊರಗೆ ಒಲಂಪಿಕ್ಸ್ ವಿಜೇತರ ಭಾವಚಿತ್ರ ಪ್ರದರ್ಶಿಸಲಾಗಿತ್ತು. ಈ ಮೂಲಕ ಭಾರತೀಯ ಕ್ರೀಡಾಪಟುಗಳಿಗೆ ಗೌರವ ನೀಡಲಾಯಿತು. ಹಾಕಿ ತಂಡದ ಆಟಗಾರರು ಮಾತ್ರವಲ್ಲದೆ ನೀರ್ ಚೋಪ್ರಾ, ಮನು ಭಾಕರ್, ಸರ್ಬಜೋತ್ ಸಿಂಗ್ ಮತ್ತು ಸ್ವಪ್ನಿಲ್ ಕುಸಾಲೆ ಅವರ ಭಾವಚಿತ್ರಗಳನ್ನು ಫ್ಲೆಕ್ಸ್‌ಗಳಲ್ಲಿ ಹಾಕಿ ಅಭಿನಂದಿಸಲಾಗಿತ್ತು.

ವಿದೇಶಿಯರ ಆಸಕ್ತಿ ಸ್ಥಳೀಯರಲ್ಲಿ ಇಲ್ಲ!



ಸ್ವಾತಂತ್ರ್ಯ ದಿನಾಚರಣೆ ಕಾರ್ಯಕ್ರಮವನ್ನು ಆಸಕ್ತಿಯಿಂದ ವೀಕ್ಷಿಸುತ್ತಿರುವ ವಿದೇಶಿ ಪ್ರವಾಸಿ

ಮೈಸೂರಿನ ಬನ್ನಿಮಂಟಪದ ಪಂಜಿನ ಕವಾಯತು ಮೈದಾನದಲ್ಲಿ ನಡೆದ 78ನೇ ಸ್ವಾತಂತ್ರ್ಯೋತ್ಸವ ಸಮಾರಂಭದಲ್ಲಿ ವಿದೇಶಿಯರು ಅತ್ಯುತ್ಸಾಹದಿಂದ ಪಾಲ್ಗೊಂಡಿದ್ದರು. ಆದರೆ ಸ್ಥಳೀಯರಿಲ್ಲದೆ ಇಡೀ ಮೈದಾನದ ಕಲ್ಲು ಆಸನಗಳು ಖಾಲಿ ಖಾಲಿ.

ಬನ್ನಿಮಂಟಪ ಮೈದಾನದಲ್ಲಿ ಸುಮಾರು 32 ಸಾವಿರ ಜನರಿಗೆ ಆಸನದ ವ್ಯವಸ್ಥೆ ಇದೆ. ಆದರೆ ಸ್ವಾತಂತ್ರ್ಯೋತ್ಸವ ಸಮಾರಂಭದಲ್ಲಿ ಭಾಗಿಯಾಗಿದ್ದವರ ಸಂಖ್ಯೆ ಸಾವಿರಕ್ಕಿಂತ ಕಡಿಮೆ.

ಆದರೆ ಬಹಳಷ್ಟು ವಿದೇಶಿ ಪ್ರವಾಸಿಗರು ಸ್ವಾತಂತ್ರ್ಯ ದಿನಾಚರಣೆಯ ಕಾರ್ಯಕ್ರಮದಲ್ಲಿ ಆಸಕ್ತಿಯಿಂದ ಭಾಗಿಯಾಗಿದ್ದರು. ಧ್ವಜಾರೋಹಣ, ಅಶ್ವಾರೋಹಿ ಸೇರಿದಂತೆ ಇತರೆ ತುಕಡಿಗಳ ಪಥ ಸಂಚಲನ, ಸಾಂಸ್ಕೃತಿಕ ಕಾರ್ಯಕ್ರಮವನ್ನು ಕುತೂಹಲದಿಂದ ವೀಕ್ಷಿಸುವುದರ ಜೊತೆಗೆ ಫೋಟೋಗಳನ್ನು ತೆಗೆದುಕೊಂಡರು. ವಿದೇಶಿಯರಿಗೆ ಇರುವ ಆಸಕ್ತಿ ನಮ್ಮ ಸ್ಥಳೀಯರಿಗೆ ಇಲ್ಲದಿರುವುದು ನಾಚಿಕೆಗೇಡಿನ ಸಂಗತಿಯಾಗಿತ್ತು.

ಮೈಸೂರು ನಗರದಲ್ಲಿ ಕೆಲಸ ನಿರ್ವಹಿಸುತ್ತಿರುವ ಸರ್ಕಾರಿ ನೌಕರರು ಭಾಗಿಯಾಗಿದ್ದರೂ ಪ್ರಾಯಶಃ ಅರ್ಧ ಮೈದಾನ ತುಂಬಿರುತ್ತಿತ್ತು. ಆದರೆ ಬಹಳಷ್ಟು ಸರ್ಕಾರಿ ನೌಕರರು ಶುಕ್ರವಾರ ಹಾಗೂ ಶನಿವಾರ ರಜಾ ಹಾಕಿ ನಾಲ್ಕು ದಿನಗಳ ಜಾಲಿ ಟ್ರಿಪ್ ಗೆ ತೆರಳಿದ್ದರು.



ಪೊಲೀಸರಿಂದ ಆಕರ್ಷಕ ಪಥಸಂಚಲನ

ಬಿಜೆಪಿ ಕಚೇರಿಯಲ್ಲಿ ಸ್ವಾತಂತ್ರೋತ್ಸವ

ಮೈಸೂರಿನ ಕಛೇರಿಯಲ್ಲಿ 78ನೇ ಸ್ವಾತಂತ್ರೋತ್ಸವ ದಿನಾಚರಣೆ ಆಚರಿಸಲಾಯಿತು. ಈ ಸಂಧರ್ಭದಲ್ಲಿ ಪಕ್ಷದ ನಗರಾಧ್ಯಕ್ಷ ಎಲ್.ನಾಗೇಂದ್ರ, ಜಿಲ್ಲಾಧ್ಯಕ್ಷ ಎಲ್.ಆರ್ ಮಹದೇವ ಸ್ವಾಮಿ, ಪ್ರಧಾನ ಕಾರ್ಯದರ್ಶಿ ಬಿ.ಎಂ ರಘು, ಮುಖಂಡರಾದ ಮೈ.ವಿ ರವಿಶಂಕರ್, ಗಿರಿಧರ್, ಶೈಲೇಂದ್ರ, ಜೋಗಿ ಮಂಜು, ಕೆ.ಎಂ ಶಂಕರ್ ಇನ್ನಿತರರು ಉಪಸ್ಥಿತರಿದ್ದರು.



ಹೋಟೆಲ್ ಮಾಲೀಕರಿಂದ ಸ್ವಾತಂತ್ರ್ಯೋತ್ಸವ ಆಚರಣೆ



ಮೈಸೂರಿನ ಕೃಷ್ಣಮೂರ್ತಿಪುರಂನಲ್ಲಿರುವ ಮೈಸೂರು ಹೋಟಲ್ ಮಾಲೀಕರ ಸಂಘದಲ್ಲಿ 78ನೇ ಸ್ವಾತಂತ್ರ್ಯೋತ್ಸವ ದಿನ ಆಚರಿಸಲಾಯಿತು. ಕಾರ್ಯಕ್ರಮದಲ್ಲಿ ಸಂಘದ ಅಧ್ಯಕ್ಷ ಸಿ. ನಾರಾಯಣಗೌಡ. ಪದಾಧಿಕಾರಿಗಳು ಮತ್ತು ಸದಸ್ಯರುಗಳಾದ ರವಿಶಾಸ್ತ್ರಿ, ಕೆ. ಭಾಸ್ಕರ್ ಶೆಟ್ಟಿ, ಅನಿಲಕುಮಾರ್, ಉಗ್ರಯ್ಯ, ರವೀಂದ್ರಭಟ್, ಎನ್.ವಿ.ಹೆಗ್ಗಡೆ, ಎ.ಸಿ.ರವಿ, ಪಿ.ಎನ್.ಕುಂದರ್, ಮಹೇಶ ಕಾಮತ್, ರಾಘವನ್, ರಕ್ಷಿತ್, ಗುರುಕುಮಾರ್, ಸುಬ್ರಮಣ್ಯತಂತ್ರೀ, ಆನಂದಶೆಟ್ಟಿ, ಕಿರಣ್, ಪ್ರಕಾಶಶೆಟ್ಟಿ ಕೆ, ಮುರಳಿ, ಕೆ.ಬಿ.ರಾಜು, ಮಹದೇವ, ಎಂ.ಕೆ.ಪುರಾಣಿಕ್, ಕೆ.ಎಸ್.ಅರುಣ್ ಮತ್ತಿತರರು ಉಪಸ್ಥಿತರುದ್ದರು.

ಮಹಾರಾಜ ವಿಭಜಿತ ಕಾಲೇಜಿನಲ್ಲಿ ಸ್ವಾತ್ರಂತ್ರ್ಯೋತ್ಸವ



ಮೈಸೂರಿನ ನಜರ್‌ಬಾದ್‌ನಲ್ಲಿರುವ ಮಹಾರಾಜ ವಿಭಜಿತ ಕಾಲೇಜಿನಲ್ಲಿ 78 ನೇ ಸ್ವಾತಂತ್ರ ದಿನಾಚರಣೆ ನಡೆಯಿತು. ಇದೇ ಸಂಧರ್ಭದಲ್ಲಿ ಕಾಲೇಜಿನ ಅಭಿವದ್ಧಿ ಮಂಡಳಿಯ ಉಪಾಧ್ಯಕ್ಷರು ಹಾಗೂ ವಕೀಲರಾದ ಶ್ರೀ ಮತಿ ಯಶೋಧ ಶ್ರೀಧರ್, ಪ್ರಾಂಶುಪಾಲರಾದ ಅಶೋಕ್, ರಮೇಶ್, ಶಿಕ್ಷಕರು ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

ನೈಪುಣ್ಯದಲ್ಲಿ ವಿಜೃಂಭಣೆಯ ಸ್ವಾತಂತ್ರೋತ್ಸವ



ಮೈಸೂರು, ಆ. 16– ಮೈಸೂರಿನ ನೈಪುಣ್ಯ ಸ್ಕೂಲ್ ಆಫ್ ಎಕ್ಸಲೆನ್ಸ್ ಶಾಲೆಯಲ್ಲಿ 78ನೆಯ ಸ್ವಾತಂತ್ರ್ಯ ದಿನಾಚರಣೆಯನ್ನು ಅತ್ಯಂತ ವಿಜೃಂಭಣೆಯಿಂದ ಆಚರಿಸಲಾಯಿತು.

ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಸುಯೋಗ್ ಆಸ್ಪತ್ರೆಯ ಅಧ್ಯಕ್ಷ ಡಾ. ಎಸ್‌ಪಿ ಯೋಗಣ್ಣ, ಗೌರವ ಅತಿಥಿಗಳಾಗಿ ವಿಭಾಗೀಯ ಅರಣ್ಯಾಧಿಕಾರಿ ಲಕ್ಷ್ಮೀಕಾಂತ್ ಆಗಮಿಸಿದ್ದರು. ಧ್ವಜಾರೋಹಣ ಮಾಡುವ ಮೂಲಕ ಕಾರ್ಯಕ್ರಮ ಪ್ರಾರಂಭವಾಯಿತು. ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳು ಮಾತನಾಡಿ, ಸ್ವಾತಂತ್ರ್ಯಕ್ಕೋಸ್ಕರ ತ್ಯಾಗ ಬಲಿದಾನ ಮಾಡಿದ ವೀರರನ್ನು ಸ್ಮರಿಸುವುದರ ಜೊತೆಗೆ ಸ್ವಾತಂತ್ರ್ಯದ ಮಹತ್ವದ ಬಗ್ಗೆ ತಿಳಿಸಿದರು. ವಿದ್ಯಾರ್ಥಿಗಳಿಂದ ಪಥಸಂಚಲನ, ದೇಶಭಕ್ತಿ, ನೃತ್ಯಗಳು, ಕಿರು ನಾಟಕ ಪ್ರದರ್ಶನ ಮುಂತಾದ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆದವು.

ಸ್ವಾತಂತ್ರ್ಯ ಹೋರಾಟಗಾರರಾಗಿ ಛದ್ಮವೇಷ ಧರಿಸಿದ್ದ ಪುಟಾಣಿಗಳು ಕಾರ್ಯಕ್ರಮದ ಪ್ರಮುಖ ಆಕರ್ಷಣೆಯಾಗಿದ್ದರು. ಈ ಸ್ವಾತಂತ್ರ್ಯ ದಿನಾಚರಣೆಯನ್ನು 'ನಾನು ನನ್ನ ಗಿಡ' ಎಂಬ ಧ್ಯೇಯದೊಂದಿಗೆ ವಿಶೇಷವಾಗಿ ಆಚರಿಸಲಾಯಿತು. ನೈಪುಣ್ಯ ಶಾಲೆಯ ಎಲ್ಲಾ ವಿದ್ಯಾರ್ಥಿಗಳಿಗೂ ಶ್ರೀಗಂಧದ ಸಸಿಯನ್ನು ನೀಡಿ ಆ ಸಸಿಯನ್ನು ಪೋಷಿಸಬೇಕೆಂಬ ವಿಚಾರವನ್ನು ವಿದ್ಯಾರ್ಥಿಗಳಿಗೆ ತಿಳಿಸಲಾಯಿತು. ಸಂಸ್ಥೆಯ ಅಧ್ಯಕ್ಷ ರಘು ಕೌಟಿಲ್ಯ ಮಾತನಾಡಿ, ಶ್ರೀಗಂಧದ ಸಸಿಯನ್ನು ಬೆಳೆಸಿ. ಇದು ಪರಿಸರ ಕಾಳಜಿಯ ಜೊತೆಗೆ ಒಳ್ಳೆಯ ಆದಾಯವನ್ನು ತರುವ ಬೆಳೆ ಎಂದು ತಿಳಿಸಿದರು. ಶಾಲೆಯ ಅಕಾಡೆಮಿಕ್ ಡೀನ್ ಶ್ರೀಮತಿ ವಿಜಯ ಅಯ್ಯರ್, ಪ್ರಾಂಶುಪಾಲರಾದ ಶ್ರೀಮತಿ ಶಾಂತಿನಿ ಜೆರಾಲ್ಡ್, ಕಾರ್ಯದರ್ಶಿ ಕೌಟಿಲ್ಯ, ಶಿಕ್ಷಣ ಸಂಯೋಜಕರಾದ ಶ್ರೀಮತಿ ಭಾವನ ಶ್ರೀಕಾಂತ್, ಪಿಆರ್‌ಓ ಅಶ್ವಿನಿ ಶಂಕರ್ ಹಾಗೂ ಆಡಳಿತಾಧಿಕಾರಿಗಳು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ಸ್ವಾರ್ಥ ಸಾಧನೆಗೆ ಸ್ವಾತಂತ್ರ್ಯ ದುರುಪಯೋಗ

ಮಾಜಿ ಮೇಯರ್ ಸಂದೇಶ್ ಸ್ವಾಮಿ ವಿಷಾದ



ಮೈಸೂರು, ಆ.16–ಅನೇಕ ಮಹನೀಯರ ಪರಿಶ್ರಮದ ಫಲವಾಗಿ ಗಳಿಸಿರುವ ಸ್ವಾತಂತ್ರ್ಯ ಇಂದು ಕೆಲವರ ಸ್ವಾರ್ಥಕ್ಕೆ ದುರುಪಯೋಗವಾಗುತ್ತಿದೆ ಎಂದು ಮಾಜಿ ಮೇಯರ್ ಸಂದೇಶ್ ಸ್ವಾಮಿ ವಿಷಾದಿಸಿದರು.

ಮೈಸೂರು ಸಬರ್ಬನ್ ಬಸ್ ನಿಲ್ದಾಣದ ಬಳಿ ಇರುವ ಟ್ಯಾಕ್ಸಿ ಮಾಲೀಕರು ಮತ್ತು ಚಾಲಕರ ಸಂಘವು ಏರ್ಪಡಿಸಿದ್ದ 78ನೇ ಸ್ವಾತಂತ್ರ್ಯೋತ್ಸವದಲ್ಲಿ ಧ್ವಜಾರೋಹಣ ನೆರವೇರಿಸಿ ಅವರು ಮಾತಾಡಿದರು. ವೈಯಕ್ತಿಕ ಹಿತಾಸಕ್ತಿ ಹಾಗೂ ಸ್ವಾರ್ಥ ಸಾಧನೆಯಿಂದ ದೇಶದಲ್ಲಿ ಅಸ್ಥಿರತೆ ಉಂಟಾಗುತ್ತಿದೆ. ಇದನ್ನು ಸರಿ ಪಡಿಸಿಕೊಂಡಾಗ ಮಾತ್ರ ನಮ್ಮ ದೇಶ ಇನ್ನು ನೂರಾರು ವರ್ಷಗಳ ಕಾಲ ಸುಭದ್ರವಾಗಿ ಉಳಿಯಲು ಸಾಧ್ಯ ಇಲ್ಲವಾದರೆ ಮುಂದೊಂದು ದಿನ ಬ್ರಿಟಿಷರಂತೆ ಯಾವುದೋ ದೇಶ ನಮ್ಮನ್ನು ಆಕ್ರಮಿಸಬಹುದು ಎಂದು ಎಚ್ಚರಿಸಿದರು.

ನಮ್ಮ ಪೂರ್ವಿಕರು ಬ್ರಿಟಿಷರ ಆಳ್ವಿಕೆಯಲ್ಲಿ ಅಪಾರವಾದ ನೋವು, ಸಂಕಟ ಅನುಭವಿಸಿದ್ದಾರೆ ಮಹಾತ್ಮಗಾಂಧಿ, ಸುಭಾಷ್ ಚಂದ್ರ ಬೋಸ್, ಡಾ.ಬಿ.ಆರ್ ಅಂಬೇಡ್ಕರ್ ಮುಂತಾದ ಮಹನೀಯರು ತಮ್ಮ ತ್ಯಾಗ ಮತ್ತು ಬಲಿದಾನದಿಂದ ದೇಶಕ್ಕೆ ಸ್ವಾತಂತ್ರ್ಯ ತಂದು ಕೊಟ್ಟಿದ್ದಾರೆ. ಆದರೆ, ಸ್ವಾತಂತ್ರ್ಯ ಬಂದು 77 ವರ್ಷವಾದರೂ ದೇಶದಲ್ಲಿ ಅಸಮಾನತೆ, ಜಾತಿಯತೆ ನಿರ್ಮೂಲನೆ ಆಗದಿರುವುದು ದುರಂತದ ಸಂಗತಿ ಎಂದರು. ಇಂದಿನ ಪೀಳಿಗೆಗೆ ಹಾಗೂ ಮುಂಬರುವ ಪೀಳಿಗೆಗೆ ಸ್ವಾತಂತ್ರ್ಯದ ಮಹತ್ವ ಸಾರುವಂತಹ ಕೆಲಸ ಆಗಬೇಕು. ಎಂದರು. ಈ ಸಂದರ್ಭದಲ್ಲಿ ಸಂಘದ ಅಧ್ಯಕ್ಷ ಅಯೂಬ್ ಖಾನ್, ಕಾರ್ಯದರ್ಶಿ ನಾಗರಾಜ್ ಮತ್ತಿತರ ಪದಾಧಿಕಾರಿಗಳು ಮತ್ತು ಸದಸ್ಯರು ಭಾಗವಹಿಸಿದ್ದರು.

ಇಟ್ಟಿಗೆಗೂಡು ಸರ್ಕಾರಿ ಶಾಲೆಯಲ್ಲಿ 78ನೇ ಸ್ವಾತಂತ್ರ್ಯ ದಿನಾಚರಣೆ

ಮೈಸೂರು, ಆ. 16– ಮೈಸೂರಿನ ಇಟ್ಟಿಗೆಗೂಡಿನಲ್ಲಿರುವ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಸ್ವಾತಂತ್ರ್ಯ ದಿನಾಚರಣೆ ಆಚರಿಸಲಾಯಿತು. ಮಾಜಿ ಕಾರ್ಪೊರೇಟರ್ ಶ್ರೀಮತಿ ಛಾಯಾದೇವಿ ಧ್ವಜಾರೋಹಣ ನೆರವೇರಿಸಿ, ಮಕ್ಕಳಿಗೆ ಸ್ವೆಟರ್ ಮತ್ತು ಸಿಹಿ ವಿತರಿಸಲಾಯಿತು.

ಇದೇ ವೇಳೆ ಹೆಲ್ಪಿಂಗ್ ಹ್ಯಾಂಡ್ಸ್ ಸಂಸ್ಥೆಯು ಚಾಮರಾಜ ಡಬಲ್ ರೋಡ್‌ನಲ್ಲಿರುವ ಸರ್ಕಾರಿ ಪ್ರಾಥಮಿಕ ಶಾಲೆಯಲ್ಲಿ ಸ್ವಾತಂತ್ರ್ಯ ದಿನಾಚರಣೆ ಆಚರಿಸಲಾಯಿತು. ಮಾಜಿ ಮೇಯರ್ ಶಿವಕುಮಾರ್ ಧ್ವಜಾರೋಹಣ ನೆರವೇರಿಸಿದರು.

ಹೆಲ್ಪಿಂಗ್ ಹ್ಯಾಂಡ್ಸ್ ಅಧ್ಯಕ್ಷ ಮಹಾವೀರ ಖಾಬಿಯಾ, ಕಾರ್ಯದರ್ಶಿ ಆನಂದ್ ಪಟ್ವಾ, ಖಜಾಂಚಿ ರಾಜನ್ ಬಾಗ್ಮಾರ್ ಸದಸ್ಯರಾದ ಮನೋಹರ್ ಸಂಕಲ ಸಂಪತ್ ಬಾಗ್ಮಾರ್, ಗೌತಮ್ ಗಾಂಧಿ, ದಿಲೀಪ್ ಗನ್ನಾ, ವಿಕ್ರಮ್ ಕವಾಡ ಜಂಬೂ ಲೋಧಾ, ಸುನೀಲ್ ಪಟ್ವಾ, ಮಹಾವೀರ್ ಧೋಕಾ, ವಿಶಾಲ್ ದಗಲಿಯ, ಪವನ್ ಚೌಧರಿ, ರಾಹುಲ್ ಚೌಧರಿ ಉಪಸ್ಥಿತರಿದ್ದರು. ಬೋಹ್ರಾ, ಶಾಂತಿಲಾಲ್ ಮುತಾ, ಮಹಾವೀರ್ ಬೆಡ್ ಮುತಾ, ವಿಕ್ರಮ್, ಗೌತಮ್ ಪಟ್ವಾ, ಮಹಿಳಾ ವಿಭಾಗದ ಸದಸ್ಯರಾದ ಸೀಮಾ ಬೋಹ್ರಾ, ಬಿಂದು ಬಾಗ್ಮಾರ್, ಆಶಾ ಬಾಗ್ಮಾರ್, ಇಂದ್ರ ಖಾಬಿಯಾ, ಸೋನಾಲ್ ಚೋಪ್ಡಾ, ಮೇಯರ್ ಶಿವಕುಮಾರ್, ಕಾರ್ಪೊರೇಟರ್ ಛಾಯಾದೇವಿ, ಶಿಕ್ಷಕರು, ಪಾಲಕರು ಹಾಗೂ ಸಿಬ್ಬಂದಿ ವರ್ಗ ಉಪಸ್ಥಿತರಿದ್ದರು.



ಸರ್ಕಾರಿ ಪ್ರೌಢಶಾಲೆಯಲ್ಲಿ 78ನೇ ಸ್ವಾತಂತ್ರ್ಯೋತ್ಸವ



ಮೈಸೂರಿನ ಹಿನಕಲ್ ಗ್ರಾಮದ ಸರ್ಕಾರಿ ಪ್ರೌಢಶಾಲೆಯಲ್ಲಿ 78ನೇ ಸ್ವಾತಂತ್ರ್ಯೋತ್ಸವನ್ನು ಆಚರಿಸಲಾಯಿತು. ಬಿಜೆಪಿ ಉಪಾಧ್ಯಕ್ಷ ಹಿನಕಲ್ ಗಣೇಶ್ ಧ್ವಜಾರೋಹಣ ನೆರವೇರಿಸಿ ಮಾತನಾಡಿದರು ಈ ಸಂದರ್ಭದಲ್ಲಿ ಗ್ರಾಮದ ಹಿರಿಯ ಮುಖಂಡರಾದ ದಿವಂಗತ ಬಸವೇಗೌಡರವರ ಮೊಮ್ಮಗ ವೆಂಕಟೇಶ, ಎಸ್‌ಡಿಎಂಸಿ ಅಧ್ಯಕ್ಷ ಶಿವಪ್ರಸಾದ್ ಅತಿ ಹೆಚ್ಚು ಅಂಕ ಪಡೆದ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ಪ್ರೋತ್ಸಾಹಕ ಧನ ನೀಡಿ ಗೌರವಿಸಿದರು. ಕಾರ್ಯಕ್ರಮದಲ್ಲಿ ಬಿಜೆಪಿ ಮುಖಂಡ ಕೇಬಲ್ ಪಾಪಣ್ಣ, ದೊಡ್ಡೇಗೌಡ, ಎಸ್‌ಡಿಎಂಸಿ ನಿಕಟಪೂರ್ವ ಅಧ್ಯಕ್ಷ ಸಿದ್ದಾಚಾರಿ, ಹಿರಿಯ ಶಿಕ್ಷಕ ಮಂಜುನಾಥ್ ಮುಖ್ಯ ಶಿಕ್ಷಕಿ ಪ್ರಮೀಳ, ಹಾಗೂ ಸಹ ಶಿಕ್ಷಕರು ಹಾಜರಿದ್ದರು.

ಮೈಸೂರು ಮಿತ್ರ ಶನಿವಾರ 17 ಆಗಸ್ಟ್ 2024

87ನೇ ಅಖಿಲ ಭಾರತ ಸಾಹಿತ್ಯ ಸಮ್ಮೇಳನದಲ್ಲಿ ಸಾಧಕರನ್ನು ಗೌರವಿಸಿ

ಡಾ.ಮಹೇಶ್ ಜೋಷಿಗೆ ಸ್ಟಾರ್ ಚಂದ್ರು ಮನವಿ

ಮಂಡ್ಯ: ಈ ವರ್ಷದ ಡಿಸೆಂಬರ್‌ನಲ್ಲಿ ಮಂಡ್ಯದಲ್ಲಿ ನಡೆಯುವ 87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಹೊರ ರಾಜ್ಯ ಹಾಗೂ ವಿದೇಶದಲ್ಲಿ ನೆಲೆಸಿ, ವಿವಿಧ ಕ್ಷೇತ್ರದಲ್ಲಿ ಸಾಧನೆ ಗೈದಿರುವ ಮಂಡ್ಯದ ಪ್ರತಿಭೆಗಳನ್ನು ಆಹ್ವಾನಿಸಿ ಗೌರವಿಸುವಂತೆ ಕಾಂಗ್ರೆಸ್ ಮುಖಂಡ ಹಾಗೂ ಮಂಡ್ಯ ಜಿಲ್ಲಾ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಉಪಾಧ್ಯಕ್ಷ ವೆಂಕಟರಮಣೇಗೌಡ (ಸ್ಟಾರ್ ಚಂದ್ರು) ಮನವಿ ಮಾಡಿದ್ದಾರೆ.

ಕೇಂದ್ರ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಡಾ.ಮಹೇಶ್ ಜೋಷಿ ಅವರನ್ನು ಭೇಟಿ ಮಾಡಿ ಈ ಬಗ್ಗೆ ಮನವಿ ಸಲ್ಲಿಸಿದ ಅವರು, ಸಕ್ಕರೆ ನಾಡು, ಕಲೆ ಸಂಸ್ಕೃತಿಯ ಬೀಡಾಗಿರುವ ಮಂಡ್ಯ ಜಿಲ್ಲೆಯಲ್ಲಿ 87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನವನ್ನು ಆಯೋಜಿಸುತ್ತಿರುವುದು ಹೆಮ್ಮೆಯ ಸಂಗತಿಯಾಗಿದ್ದು, ಮಂಡ್ಯದಲ್ಲಿ ನಡೆಯಲಿರುವ ಸಮ್ಮೇಳನದಲ್ಲಿ ಸಾಧಕರನ್ನು ಗೌರವಿಸಬೇಕೆಂಬುದು ನನ್ನ ಅಭಿಮತ. ಸಾಹಿತ್ಯ ಸಮ್ಮೇಳನವೆಂದರೆ ಅದು ಭಾಷೆಯ ಹಬ್ಬ, ಕನ್ನಡ ತಾಯಿಯ ಹಬ್ಬ. ಈ ಹಬ್ಬದಲ್ಲಿ ರಾಜ್ಯ, ಹೊರರಾಜ್ಯದ ನಾನಾ ಭಾಗಗಳಲ್ಲಿ ನೆಲೆಸಿರುವವರು ಪಾಲ್ಗೊಂಡು ರೈತಾಪಿ ನಾಡಿನಲ್ಲಿ ಕನ್ನಡದ ಕಹಳೆ ಮೊಳಗಬೇಕು ಎಂದು ಹೇಳಿದ್ದಾರೆ.

ಅಮೃತ ಮಹೋತ್ಸವದ ಈ ಸಾಹಿತ್ಯ ಸಮ್ಮೇಳನದಲ್ಲಿ ರಾಜ್ಯ, ಹೊರರಾಜ್ಯದ ಸಾಹಿತ್ಯ ಪ್ರೇಮಿಗಳಿಗೆ ಆಹ್ವಾನ ನೀಡಿದಂತೆ ಮಂಡ್ಯ ನೆಲದಲ್ಲಿ ಹುಟ್ಟಿ ವೃತ್ತಿ ಬದುಕಿನ ಅನಿವಾರ್ಯತೆಯಿಂದ ಉದ್ಯೋಗ, ವ್ಯಾಪಾರ ನಿಮಿತ್ತ ವಿದೇಶದಲ್ಲಿ ನೆಲೆಸಿರುವ ಮಂಡ್ಯ ಮೂಲದ ಅನಿವಾಸಿ ಭಾರತೀಯರಿಗೂ ಕನ್ನಡದ ಹಬ್ಬಕ್ಕೆ ಆಹ್ವಾನಿಸಿ ಅವರನ್ನು ತವರು ನೆಲದಲ್ಲಿ ಗೌರವಿಸಬೇಕಿರುವುದು ನಮ್ಮ ಆದ್ಯ ಕರ್ತವ್ಯವಾಗಿದೆ ಎಂದು ಅಭಿಪ್ರಾಯಿಸಿದ್ದಾರೆ.



ಡಾ.ಮಹೇಶ್ ಜೋಶಿ ಅವರಿಗೆ ಮನವಿ ಸಲ್ಲಿಸುತ್ತಿರುವ ಸ್ಟಾರ್ ಚಂದ್ರು

ಹೊರ ರಾಜ್ಯ ಹಾಗೂ ವಿದೇಶದಲ್ಲಿ ನೆಲೆಸಿ ವೈದ್ಯಕೀಯ, ಶೈಕ್ಷಣಿಕ, ನ್ಯಾಯಾಂಗ, ತಾಂತ್ರಿಕ ಸೇರಿದಂತೆ ವಿವಿಧ ಕ್ಷೇತ್ರಗಳಲ್ಲಿ ಸಾಧನೆಗೈದಿರುವ ಕನ್ನಡದ ಮನಸುಗಳನ್ನು ನುಡಿಹಬ್ಬದಲ್ಲಿ ವಿಲೀನಗೊಳಿಸಿ ನುಡಿಜಾತ್ರೆಗೆ ಮತ್ತಷ್ಟು ಮೆರುಗು ತರುವ ಕಾರ್ಯವನ್ನು ಸರ್ಕಾರ, ಜಿಲ್ಲಾಡಳಿತ ಮತ್ತು ಕನ್ನಡ ಸಾಹಿತ್ಯ ಪರಿಷತ್ತು ಮಾಡುವ ಮೂಲಕ ಮಂಡ್ಯದ ಸೊಗಡನ್ನು ವಿದೇಶಕ್ಕೂ ಪಸರಿಸುವ ಕೀರ್ತಿ ಸಲ್ಲುತ್ತದೆ. ಜಿಲ್ಲೆಯಲ್ಲಿ ಮೂರನೇ ಬಾರಿ ನೆರವೇರುತ್ತಿರುವ ಕನ್ನಡ ತಾಯಿಯ ಹಬ್ಬದಲ್ಲಿ ಜಿಲ್ಲೆಯ ಮಣ್ಣಿನ ಮಕ್ಕಳು ಪಾಲ್ಗೊಳ್ಳುವ ಮೂಲಕ ಸಮ್ಮೇಳನಕ್ಕೆ ಮೆರುಗು ಸಿಗುವುದಲ್ಲದೆ ಅವರಲ್ಲಿನ ಕನ್ನಡ ಪ್ರೇಮ ಮತ್ತಷ್ಟು ಹೆಚ್ಚಾಗಿ ನುಡಿಜಾತ್ರೆಯನ್ನು ಅವರೂ ಸಂಭ್ರಮಿಸಿದಂತಾಗಲಿದೆ ಎಂದು ತಿಳಿಸಿದ್ದಾರೆ.

ಕನ್ನಂಬಾಡಿ ಅಣೆಕಟ್ಟೆಗೆ ಸಂಸದ ಯದುವೀರ್ ಬಾಗಿನ

ಪಾರಂಪರಿಕತೆ ಉಳಿಸಿಕೊಂಡು ಪರಿಸರ ಸ್ನೇಹಿ ಉದ್ಯಾನವನ ನಿರ್ಮಿಸಿದರೆ ಬೆಂಬಲ

ಶ್ರೀರಂಗಪಟ್ಟಣ,ಆ.16–ಕೃಷ್ಣರಾಜ ಸಾಗರ ಅಣೆಕಟ್ಟೆಯು ಸುರಕ್ಷಿತ ಪ್ರದೇಶವಾಗಿದ್ದು, ಇಲ್ಲಿನ ಮೂಲ ಪಾರಂಪರಿಕತೆ ಉಳಿಸಿಕೊಂಡು ಪರಿಸರ ಸ್ನೇಹಿ ಉದ್ಯಾನವನ ಮಾಡಿದರೆ ನಮ್ಮ ಬೆಂಬಲವಿದೆ ಎಂದು ರಾಜವಂಶಸ್ಥ ಹಾಗೂ ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ತಿಳಿಸಿದರು.

ಜಿಲ್ಲೆಯ ಕೃಷ್ಣರಾಜ ಸಾಗರ ಅಣೆಕಟ್ಟೆಗೆ ಆಗಮಿಸಿ, ಕಾವೇರಿ ಮಾತೆಗೆ ವಿಶೇಷ ಪೂಜೆ ಸಲ್ಲಿಸಿ, ಬಾಗಿನ ಸಮರ್ಪಣೆ ಮಾಡಿದ ಬಳಿಕ ಮಾತನಾಡಿದ ಅವರು, ಅಣೆಕಟ್ಟೆ ಬಳಿ ಪರಿಸರ ಸ್ನೇಹಿ ಉದ್ಯಾನವನ ಅಭಿವೃದ್ಧಿ ಮಾಡಿದರೆ ನಮ್ಮ ಅಭ್ಯಂತರವಿಲ್ಲ. ಆದರೆ, ಕೇವಲ ಮನೋರಂಜನಾ ಪಾರ್ಕ್ ಮಾಡುವುದಾದರೆ ನಮ್ಮ ವಿರೋಧವಿದೆ. ಕೆಆರ್‌ಎಸ್‌ನಲ್ಲಿರುವುದು ಪಾರಂಪರಿಕ ಉದ್ಯಾನವನ, ಅದನ್ನು ಉಳಿಸಿ ಅಭಿವೃದ್ಧಿ ಮಾಡಬೇಕು. ಅಣೆಕಟ್ಟೆ ನಿರ್ಮಾಣ ಸಂದರ್ಭದಲ್ಲಿ ಇಲ್ಲಿನ ಬೃಂದಾವನವನ್ನು ಪರಿಸರ ಸ್ನೇಹವಾಗಿ ನೀರಿನ ಕಾರಂಜಿಗಳನ್ನು ನಿರ್ಮಿಸಿ ನೀರು ಕಲುಷಿತವಾಗದಂತೆ ನೋಡಿಕೊಂಡಿದ್ದಾರೆ. ಅದನ್ನು ನಾವು ಕಾಪಾಡಿಕೊಂಡು ಹೋಗಬೇಕೆಂದರು.

ಬೃಂದಾವನದಲ್ಲಿ ಹಣ್ಣಿನ ತೋಟ, ತೆಂಗಿನ ತೋಟಗಳಿದ್ದು, ಇದನ್ನು ರೈತರಿಗೆ ಉಪಯೋಗವಾಗದಂತೆ ಅಭಿವೃದ್ಧಿ ಮಾಡಬೇಕು. ಅಣೆಕಟ್ಟೆ ತೊಂದರೆ ಯಾಗದಂತೆ ಪರಿಸರ ಮಯವಾಗಿ ಉದ್ಯಾನವನ ಮಾಡಲಿ. ಆದರೆ ಯಾವ ರೀತಿ ಮೇಲ್ದರ್ಜೆಗೆ ಉದ್ಯಾನವನ ಮಾಡುತ್ತಾರೆ ಎಂಬುದು ನನಗೆ ಮಾಹಿತಿ ಇಲ್ಲ ಎಂದು ಹೇಳಿದರು.



ಕೆಆರ್‌ಎಸ್‌ಗೆ ಬಾಗಿನ ಅರ್ಪಿಸುತ್ತಿರುವ ಸಂಸದ ಯದುವೀರ್.

ಮನೋರಂಜನಾ ಉದ್ಯಾನ ಮಾಡಲು ಬೇಕಾದಷ್ಟು ಜಾಗಗಳಿವೆ. ಪರಿಸರಕ್ಕೆ ವಿರೋಧ ಹಾಗೂ ಅಣೆಕಟ್ಟೆ ಪ್ರಸ್ತುತ ಉದ್ಯಾನವನದ ಮೂಲಸ್ಥಿತಿ ಬದಲಿಸಿ ಕಲುಷಿತಗೊಳಿಸುವುದನ್ನು ನಾವು ನಿರಂತರವಾಗಿ ವಿರೋಧಿಸುತ್ತೇವೆ ಎಂದು ಸ್ಪಷ್ಟಪಡಿಸಿದರು.

ಕೃಷ್ಣರಾಜ ಸಾಗರ ಅಣೆಕಟ್ಟೆ ಉತ್ತಮ ಸ್ಥಿತಿಯಲ್ಲಿದ್ದು, ಇಲ್ಲಿನ ಗೇಟುಗಳನ್ನು ನುರಿತ ತಂತ್ರಜ್ಞಾನಿಗಳು ಕಾಲ, ಕಾಲಕ್ಕೆ ಪರಿಶೀಲನೆ ನಡೆಸಿದ್ದಾರೆ. ಅವರ ಸಲಹೆಯಂತೆ ಸರ್ಕಾರ ಗೇಟುಗಳನ್ನು ಬದಲಾವಣೆ ಮಾಡಿಕೊಂಡು ಬಂದಿದೆ. ಹಾಗಾಗಿ ಯಾವುದೇ ಅಪಾಯವಿಲ್ಲ ಎಂದರು.

ಇದಕ್ಕೂ ಮುನ್ನ ಬಾಗಿನ ಅರ್ಪಿಸಲು ಆಗಮಿಸಿದ ಸಂಸದ ಯದುವೀರ್‌ಗೆ ಪೂರ್ಣ ಕುಂಭ ಸ್ವಾಗತ ನೀಡಲಾಯಿತು. ವಾರಗಾಸೆ, ನಾದಸ್ವರ ಹಾಗೂ ಪೂರ್ಣಕುಂಭ ಹೊತ್ತ ಮಹಿಳೆಯರು ಸ್ವಾಗತ ಕೋರಿದರು. ಕಾವೇರಿ ನೀರಾವರಿ ನಿಗಮದ ಅಧಿಕಾರಿಗಳು ಪುಷ್ಪಗುಚ್ಛ ನೀಡಿ ಸ್ವಾಗತಿಸಿ, ಅಣೆಕಟ್ಟೆಯ ಸ್ಥಿತಿಗತಿಯ ಬಗ್ಗೆ ಸಂಸದರಿಗೆ ಮಾಹಿತಿ ನೀಡಿದರು. ವೇದಬ್ರಹ್ಮ ಭಾನು ಪ್ರಕಾಶ್ ಶರ್ಮಾ ನೇತೃತ್ವದಲ್ಲಿ ಪೂಜಾ ಕೈಂಕರ್ಯಗಳು ನಡೆದು, ಕಾವೇರಿ ಪ್ರತಿಮೆಯ ಪಾದುಕೆಗಳಿಗೆ ಪೂಜೆ ಸಲ್ಲಿಸಿ ಬಳಿಕ ಬಾಗಿನ ಅರ್ಪಿಸಲಾಯಿತು.

ಈ ಸಂದರ್ಭದಲ್ಲಿ ಬಿಜೆಪಿ ಜಿಲ್ಲಾಧ್ಯಕ್ಷ ಡಾ.ಇಂದ್ರೇಶ್, ಮುಖಂಡರಾದ ಸಚ್ಚಿದಾನಂದ, ಪೀಹಳ್ಳಿ ರಮೇಶ್, ಕೆ.ಎಸ್.ನಂಜುಂಡೇಗೌಡ, ಎಲ್.ಆರ್.ಮಹದೇವಸ್ವಾಮಿ, ನಿರಂಜನ್‌ಬಾಬು ಸೇರಿದಂತೆ ಹಲವು ಮಂದಿ ಭಾಗವಹಿಸಿದ್ದರು.

ಕಾಲು ಜಾರಿ ಕೆರೆಗೆ ಬಿದ್ದು ರೈತ ಸಾವು

ಮಂಡ್ಯ: ಆಕಸ್ಮಿಕವಾಗಿ ಕಾಲು ಜಾರಿಗೆ ಕೆರೆಗೆ ರೈತನೊರ್ವ ಬಿದ್ದು ಸಾವನ್ನಪ್ಪಿರುವ ಘಟನೆ ತಾಲೂಕಿನ ಹನಕೆರೆ ಗ್ರಾಮದಲ್ಲಿ ನಡೆದಿದೆ. ಹನಕೆರೆ ಕೆರೆಯಲ್ಲಿ ಕೈ ಕಾಲು ತೊಳೆಯಲು ನೀರಿಗೆ ಇಳಿದಿದ್ದ ಹೆಚ್.ಎಸ್.ಅನಿಲ್(30) ಮೃತ ರೈತನಾಗಿದ್ದು, ಗದ್ದೆಯಲ್ಲಿ ಭತ್ತದ ನಾಟಿ ಮಾಡಲು ಭೂಮಿ ಹದಗೊಳಿಸಿ ಮನೆಗೆ ತೆರಳುವಾಗ ಕೈ ಕಾಲು ತೊಳೆಯಲು ಕೆರೆಗೆ ಇಳಿದಿದ್ದಾರೆ. ಬೇಸಿಗೆಯಲ್ಲಿ ಕೆರೆಯಲ್ಲಿ ಮಣ್ಣು ತುಂಬಿ ಗುಂಡಿ ಬಿದ್ದ ಹಿನ್ನೆಲೆ ರೈತ ನೀರಿನಲ್ಲಿ ಮುಳುಗಿ ಸಾವನ್ನಪ್ಪಿದ್ದಾರೆ. ಮೃತ ದೇಹ ಸಿಗದ ಹಿನ್ನೆಲೆಯಲ್ಲಿ ಅಗ್ನಿಶಾಮಕ ಸಿಬ್ಬಂದಿ ಕಾರ್ಯಾಚರಣೆ ನಡೆಸಿ ದೇಹ ಪತ್ತೆ ಹಚ್ಚಿ ಹೊರ ತೆಗೆದಿದ್ದು, ಮಂಡ್ಯ ಗ್ರಾಮಾಂತರ ಠಾಣಾ ವ್ಯಾಪ್ತಿಯಲ್ಲಿ ಪ್ರಕರಣ ನಡೆದಿದೆ. ಸ್ಥಳಕ್ಕೆ ಪೊಲೀಸರು ಆಗಮಿಸಿ, ಮಹಜರು ನಡೆಸಿದ್ದಾರೆ

ಮೈಶುಗರ್ ಕಾರ್ಖಾನೆಗೆ ಗುತ್ತಿಗೆದಾರರಿಂದಲೇ 2 ಕೋಟಿ ಪಂಗನಾಮ...!

ಕಾರ್ಮಿಕರು 2 ಕೋಟಿ ಎತ್ತಿಕೊಂಡು ಹೋಗಿದ್ದಾರೆ: ಎಂಡಿ ಸ್ಫೋಟಕ ಹೇಳಿಕೆ


ಮಂಡ್ಯ,ಆ.16– ಮೈಶುಗರ್ ಕಾರ್ಖಾನೆ ವ್ಯಾಪ್ತಿಯ ಕಬ್ಬು ಕಟಾವಿಗೆ ಮುಂಗಡವಾಗಿ ನೀಡಿದ್ದ ಎರಡು ಕೋಟಿ ರೂ. ಹಣವನ್ನು ಬಳ್ಳಾರಿ ಮತ್ತು ವಿಜಯಪುರ ಭಾಗದ ಕಾರ್ಮಿಕರು ಎತ್ತಿಕೊಂಡು ಹೋಗಿದ್ದಾರೆ. ಹಣ ಪಡೆದುಕೊಂಡು ಹೋದ ಯಾವ ಕಾರ್ಮಿಕರೂ ಸಹ ಕಬ್ಬು ಕಟಾವು ಮಾಡಲು ಬರುತ್ತಿಲ್ಲ ಎಂದು ಅಪರ ಜಿಲ್ಲಾಧಿಕಾರಿಯೂ ಆದ ಮೈಶುಗರ್ ಕಾರ್ಖಾನೆಯ ವ್ಯವಸ್ಥಾಪಕ ನಿರ್ದೇಶಕ ಡಾ.ಎಚ್.ಎಲ್. ನಾಗರಾಜು ಸ್ಫೋಟಕ ಹೇಳಿಕೆ ನೀಡಿದ್ದಾರೆ.

ನಗರದಲ್ಲಿ ಕಬ್ಬು ಕಡಿಯುವ ಸಂಸ್ಕೃತಿ ಬೆಳೆಸಿ, ಮೈಶುಗರ್ ಕಾರ್ಖಾನೆ ಉಳಿಸಿ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಕಾರ್ಮಿಕರನ್ನು ಕರೆತಂದಿದ್ದ ಮೇಸ್ತ್ರಿ ಸಹ ಬರುತ್ತಿಲ್ಲ. ನನ್ನ ಹೊಟ್ಟೆ ಉರಿಯುತ್ತಿದ್ದು, ಕಬ್ಬು ಕಡಿಯುವುದಕ್ಕೆ ಬಳ್ಳಾರಿ, ವಿಜಯಪುರದಿಂದ ಕಾರ್ಮಿಕರನ್ನು ಮೇಸ್ತ್ರಿಯೊಬ್ಬ ಕರೆದುಕೊಂಡು ಬಂದಿದ್ದ. ಅವರ ಮೇಲೆ ನಂಬಿಕೆ ಇಟ್ಟು 2 ಕೋಟಿ ರೂ. ನೀಡಿದೆ. ಅದನ್ನು ತೆಗೆದುಕೊಂಡು ಹೋದವರು. ಇದೀಗ ಕಟಾವಿಗೆ ಬರುತ್ತಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು.

ಅವರಿಗೆ ನೀಡಿದ ಹಣವನ್ನು ವಾಪಸ್ ಪಡೆಯುವುದಕ್ಕೆ ಆಗುತ್ತಿಲ್ಲ ಆ ದುಡ್ಡು ನಮ್ಮದಲ್ಲ, ಅವರಿಗೆ ನೀಡಿರುವ ಹಣವನ್ನು ವಾಪಸ್ ಪಡೆಯುವುದಕ್ಕೂ ಆಗುತ್ತಿಲ್ಲ. ರೈತರ ಹಣ, ಶ್ರಮಪಟ್ಟು ರೈತ ಕಬ್ಬು ತಂದು ಕಾರ್ಖಾನೆಗೆ ಹಾಕಿದ್ದ ಹಣ ಅದಾಗಿದ್ದು, ರೈತರಿಗೆ ಬಂದ ಹಣವನ್ನು ಯಾರಿಗೋ ಕೊಟ್ಟು ಕಳೆಯುತ್ತಿರುವ ಬಗ್ಗೆ ಬೇಸರವಿದೆ ಎಂದರು.

ಮೈಶುಗರ್ ಕಾರ್ಖಾನೆಯ ವ್ಯವಸ್ಥಾಪಕ ನಿರ್ದೇಶಕನಾಗಿ ಪ್ರತಿನಿತ್ಯ ನನಗೆ ಅದೇ ಯೋಚನೆಯಾಗಿದೆ. ಉತ್ತಮವಾಗಿ ಕೆಲಸ ಮಾಡುತ್ತಾನೆಂಬ ನಂಬಿಕೆ ಮೇಲೆ ನನ್ನ ಮೇಲೆ ವಿಶ್ವಾಸವಿಟ್ಟು ಎಂಡಿ ಮಾಡಿದ್ದಾರೆ. ಆದರೆ ಆ ಖುರ್ಚಿಯಲ್ಲಿ ಕುಳಿತು ವೈಯಕ್ತಿಕವಾಗಿ ನಿತ್ಯ ನೋವು ಅನುಭವಿಸುತ್ತಿದ್ದೇನೆ. ಕಬ್ಬು ಕಡಿಯಲು ಆಳುಗಳನ್ನು ಕಳುಹಿಸುವಂತೆ ರೈತರು ನಿತ್ಯ ಕರೆ ಮಾಡುತ್ತಿದ್ದು, ಅವರಿಗೆ ಉತ್ತರ ಕೊಡಲಾಗುತ್ತಿಲ್ಲ ಎಂದು ಅಳಲು ತೋಡಿಕೊಂಡರು.

15 ತಿಂಗಳ ಕಬ್ಬು ಕಟಾವಿಗೆ ಬಂದರೂ ಕಬ್ಬು ಕಡೆದಿಲ್ಲ. ಹಣ ಪಡೆದುಕೊಂಡು ಹೋದ ಕಾರ್ಮಿಕರೂ ಬರುತ್ತಿಲ್ಲ. ಜಿಲ್ಲೆಯ ಅಧಿಕಾರಿಯಾಗಿ ಇದು ನನಗೆ ನೋವು ತಂದಿದೆ. ಜಿಲ್ಲೆಯಲ್ಲಿರುವ ನಮ್ಮ ಯುವಕರನ್ನು ಕಬ್ಬು ಕಡಿಯುವ ಸಂಸ್ಕೃತಿ ಕಡೆಗೆ ತೆಗೆದುಕೊಂಡು ಹೋಗುವ ಅನಿವಾರ್ಯತೆ ಇದೆ. ಇತ್ತೀಚಿನ ಯುವಕರು ಯಾರೂ ಕಷ್ಟಪಟ್ಟು ಕೆಲಸ ಮಾಡುವುದಿಲ್ಲ. ಯುವಕರೇ ಕಬ್ಬು ಕಡಿಯುವುದಕ್ಕೆ ಟೊಂಕ ಕಟ್ಟಿ ನಿಂತರೆ ಕಾರ್ಖಾನೆಗೆ ಅಗತ್ಯವಿರುವಷ್ಟು ಕಬ್ಬನ್ನು ಕಡಿದು ಸಕಾಲದಲ್ಲಿ ಪೂರೈಸಿಕೊಳ್ಳಬಹುದು. ಬೇರೆ ಜಿಲ್ಲೆಯವರನ್ನು ಅವಲಂಬಿಸುವ ಅವಶ್ಯಕತೆ ಇರುವುದಿಲ್ಲ. ಕಬ್ಬು ಕಟಾವಿಗೆ ಪ್ರತಿ ಗ್ರಾಮದಲ್ಲಿ ಕನಿಷ್ಠ 50 ಜನರ ತಂಡ ಕಟ್ಟುವ ಅವಶ್ಯಕತೆ ಇದೆ ಎಂದರು.



ಯುವಕರು ಕಷ್ಟ ಪಟ್ಟರೆ ಒಂದು ಟನ್ ಕಬ್ಬಿಗೆ 700 ರೂ. ಉಳಿಯುತ್ತದೆ. ಕಬ್ಬು ಕಡಿಯುವ ಕಾರ್ಯಕ್ಕೆ ಯುವಕರು ಮುಂದಾದರೆ ರೈತಾಪಿ ವರ್ಗವನ್ನು ಉನ್ನತೀಕರಣ ಮಾಡಲು ಸಾಧ್ಯವಿದೆ. ಮಂಡ್ಯ ಜಿಲ್ಲೆಯಲ್ಲಿ ಶೇ.90ರಷ್ಟು ರೈತರ ಜಿಲ್ಲೆಯಾಗಿದೆ. ಕಾರ್ಖಾನೆಯ ಪೂಜೆ ದಿನ 25 ಮಂದಿ ಗುತ್ತಿಗೆದಾರರು ಬಂದರು. ಕಬ್ಬು ಇಡಯೋದಕ್ಕೆ ಕಾರ್ಮಿಕರು ಸಿಗುತ್ತಾರೆ. ಕಾರ್ಖಾನೆಗೆ ಯಶಸ್ಸು ತರಬಹುದು ಎಂದುಕೊಂಡಿದ್ದೆ. ಕೃಷಿಕರು ಇರುವ ಜಿಲ್ಲೆಯಲ್ಲಿ ಈ ರೀತಿಯ ಪರಿಸ್ಥಿತಿ ನೋಡಿ ಶೋಚನೀಯ ಎನಿಸಿದೆ ಎಂದು ಬೇಸರ ವ್ಯಕ್ತಪಡಿಸಿದರು.

ಎರಡಲ್ಲ 1 ಕೋಟಿ: ಅಧ್ಯಕ್ಷರಿಂದ ದ್ವಂದ್ವ ಹೇಳಿಕೆ

ಮಂಡ್ಯ: ಮೈಶುಗರ್‌ಗೆ ಕಾರ್ಮಿಕರೇ 2 ಕೋಟಿ ಪಂಗನಾಮ ಹಾಕಿರುವ ವಿಚಾರವನ್ನು ಎಂಡಿ ನಾಗರಾಜು ಬಹಿರಂಗಪಡಿಸಿದ ಬೆನ್ನಲ್ಲೇ ಪ್ರತಿಕ್ರಿಯಿಸಿರುವ ಕಾರ್ಖಾನೆ ಅಧ್ಯಕ್ಷ ಸಿ.ಡಿ.ಗಂಗಾಧರ್, ಕಾರ್ಮಿಕರನ್ನು ಕರೆತರುವ ಗುತ್ತಿಗೆದಾರ 2 ಕೋಟಿ ತೆಗೆದುಕೊಂಡು ಹೋಗಿಲ್ಲ. 1 ಕೋಟಿ ಮಾತ್ರ ತೆಗೆದುಕೊಂಡು ಹೋಗಿದ್ದಾರೆ ಎಂದು ಹೇಳಿದ್ದು, ಅಧ್ಯಕ್ಷರು ಹಾಗೂ ಎಂಡಿ ಹೇಳಿಕೆಗಳು ರೈತರನ್ನು ಗೊಂದಲಕ್ಕೀಡು ಮಾಡಿದೆ. ಈ ಸಂಬಂಧ ಪ್ರತಿಕ್ರಿಯೆ ನೀಡಿರುವ ಮೈಶುಗರ್ ಅಧ್ಯಕ್ಷ ಸಿ.ಡಿ.ಗಂಗಾಧರ್, ಕಾರ್ಮಿಕರನ್ನು ಕರೆತರುವ ಉತ್ತರ ಕರ್ನಾಟಕದ ಗುತ್ತಿಗೆದಾರರಿಂದ ವಂಚನೆಯಾಗಿದ್ದು, ಕಬ್ಬು ಕಟಾವಿಗೆ ಮುಂಗಡವಾಗಿ 1 ಕೋಟಿ ಪಡೆದಿದ್ದರು. ಬಳ್ಳಾರಿ, ಬಿಜಾಪುರ ಮೂಲದ ಗುತ್ತಿಗೆದಾರರಿಂದ ವಂಚನೆಯಾಗಿದೆ. ಇತ್ತ ಕಾರ್ಮಿಕರು ಬರುತ್ತಿಲ್ಲ, ಕಬ್ಬು ಕಟಾವು ಆಗುತ್ತಿಲ್ಲ ಎಂದರು.

ಶಿಕ್ಷಕ ಎ.ಬಿ.ಚಂದ್ರಪ್ಪ ನಿಧನ



ಭಾರತೀನಗರ.ಆ.16– ಇಲ್ಲಿಗೆ ಸಮೀಪದ ಕಾಡುಕೊತ್ತನಹಳ್ಳಿ ಗ್ರಾಮದ ಅಂಬೇಡ್ಕರ್ ಸ್ಮಾರಕ ಪ್ರೌಢ ಶಾಲೆಯ ತೋಟಗಾರಿಕೆ ಶಿಕ್ಷಕ ಎ.ಬಿ. ಚಂದ್ರಪ್ಪ(59) ಶುಕ್ರವಾರ ಹೃದಯಾಘಾತದಿಂದ ಮೃತಪಟ್ಟಿದ್ದಾರೆ.

ಮೃತರು ಪತ್ನಿ, ಶಂಕುತಲ, ಓರ್ವ ಪುತ್ರಿ ಸೇರಿದಂತೆ ಅಪಾರ ಬಂಧು ಮಿತ್ರರನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆ ಸ್ವಗ್ರಾಮವಾದ ಚಿತ್ರದುರ್ಗ ಜಿಲ್ಲೆಯ ಕಡೂರು ತಾಲೂಕಿನ ಅಜ್ಜಂಪುರ ಗ್ರಾಮದಲ್ಲಿ ಶನಿವಾರ ಮಧ್ಯಾಹ್ನ 12 ಗಂಟೆಗೆ ಜರುಗಲಿದೆ ಎಂದು ಕುಟುಂಬ ಮೂಲಗಳು ತಿಳಿಸಿವೆ.

ಮೃತರು ಈ ಹಿಂದೆ ಶೆಟ್ಟಹಳ್ಳಿ ಗ್ರಾಮದ ಮದಕರಿ ಪ್ರೌಢಶಾಲೆಯಲ್ಲಿ 25 ವರ್ಷಗಳ ಕಾಲ ಸೇವೆ ಸಲ್ಲಿಸಿದ್ದಾರೆ. ಮೃತರಿಗೆ ಶೆಟ್ಟಹಳ್ಳಿ ಮದಕರಿ ಪ್ರೌಢಶಾಲೆ ಮತ್ತು ಕಾಡುಕೊತ್ತನಹಳ್ಳಿ ಅಂಬೇಡ್ಕರ್ ಸ್ಮಾರಕ ಪ್ರೌಢಶಾಲೆಯ ಶಿಕ್ಷಕ ವೃಂದ ಸಂತಾಪ ಸೂಚಿಸಿದೆ.

ಒಂದನೇ ಪುಟದಿಂದ

ಮುಂದಿನ 30 ದಿನ ಎಚ್ಚರ

ಗುಡ್ಡ ಕುಸಿತ ತಡೆಗಟ್ಟಲು ತಜ್ಞರು ಅನೇಕ ವರದಿ ನೀಡಿದ್ದಾರೆ, ಆ ವರದಿಗಳನ್ನು ಅಧಿಕಾರಿಗಳು ಪರಿಶೀಲಿಸಿದ್ದಾರೆಯೇ, ಕ್ರಮ ಕೈಗೊಂಡಿದ್ದಾರೆಯೇ ಎಂದು ಪ್ರಶ್ನಿಸಿದರು. ನದಿ ಪಾತ್ರದ ಕೆಳಗಿನ ಮತ್ತು ಗುಡ್ಡಗಾಡು ಪ್ರದೇಶದ ಸೂಕ್ಷ್ಮ ಜಾಗಗಳಲ್ಲಿ ವಾಸಿಸುವವರಿಗೆ ಮುನ್ನೆಚ್ಚರಿಕೆ ನೀಡಿ. ಸಾರ್ವಜನಿಕ ಹಾಗೂ ಖಾಸಗಿ ಕಟ್ಟಡಗಳು ಶಿಥಿಲಗೊಂಡ ಕಡೆಗಳಿಂದ ಜನರನ್ನು ಸ್ಥಳಾಂತರಿಸುವ ಕೆಲಸ ಮಾಡಿ. ಮಳೆಯಿಂದ ಹಾನಿಗೊಳಗಾದ ಪ್ರದೇಶಗಳಲ್ಲಿ ತಕ್ಷಣ ದುರಸ್ತಿ ಕೈಗೊಳ್ಳಿ, ಜಿಲ್ಲಾಡಳಿತದಲ್ಲಿ ಇರುವ ಹಣವನ್ನು ತುರ್ತು ಕಾಮಗಾರಿಗೆ ಬಳಸಿಕೊಳ್ಳಿ, ಪರಿಹಾರ ಕೋರಿ ಹೆಚ್ಚು ಹಣ ಕೇಳಿದರೆ, ಮಂಜೂರು ಮಾಡಿ ಎಂದು ತಿಳಿಸಿದ್ದಾರೆ.

ಮಳೆ ನಿಂತ ಮೇಲೆ ಹಾನಿ ಅಂದಾಜು: ಮಳೆ ಮುಗಿಯುತ್ತಿದ್ದಂತೆ ನಷ್ಟದ ಅಂದಾಜಿನ ಬಗ್ಗೆ ಜಿಲ್ಲಾಡಳಿತದಿಂದ ವರದಿ ತರಿಸಿ ನಂತರ ಒಟ್ಟಾರೆ ಎಷ್ಟು ನಷ್ಟ ಆಗಿದೆ ಎಂಬುದನ್ನು ಅವಲೋಕಿಸಿ, ಕೇಂದ್ರಕ್ಕೆ ಪರಿಹಾರ ಕೋರಿ ಮನವಿ ಸಲ್ಲಿಸೋಣ ಎಂದರಲ್ಲದೆ ಕೇರಳದ ವಯನಾಡಿನಲ್ಲಿ ಮನೆ ಕಳೆದುಕೊಂಡವರಿಗೆ 100 ವಸತಿ ನಿರ್ಮಿಸಿಕೊಡುವ ರಾಜ್ಯ ಸರ್ಕಾರದ ವಾಗ್ದಾನದಂತೆ ಅಲ್ಲಿನ ಅಧಿಕಾರಿಗಳೊಂದಿಗೆ ಸಂಪರ್ಕಿಸಿ ಕ್ರಮಕೈಗೊಳ್ಳುವಂತೆ ಮುಖ್ಯಮಂತ್ರಿ ಆದೇಶಿಸಿದ್ದಾರೆ. ರಾಜ್ಯಾದ್ಯಂತ 82 ಲಕ್ಷ ಹೆಕ್ಟೇರ್ ಗುರಿಗೆ ಎದುರಾಗಿ 70 ಲಕ್ಷ ಹೆಕ್ಟೇರ್ ಬಿತ್ತನೆ ಆಗಿದೆ. ಈ ಬಾರಿ ಗುರಿ ಮೀರಿ ಸಾಧನೆ ಆಗುವ ನಿರೀಕ್ಷೆ ಇದೆ ಮಳೆಯಿಂದ 81589 ಹೆಕ್ಟೇರ್ ಪ್ರದೇಶದಲ್ಲಿ ಬೆಳೆ ಹಾನಿಯಾಗಿದೆ ಎಂದು ಅಂದಾಜಿಸಲಾಗಿದೆ. ಅಂತಿಮ ವರದಿ ಬಂದ ಕೂಡಲೇ ಪರಿಹಾರ ವಿತರಣೆಗೆ ಕ್ರಮ ವಹಿಸಲಾಗುವುದು ಎಂದಿದ್ದಾರೆ.

ಮಳೆ ಹೆಚ್ಚಾಗಿರುವ ಹಿನ್ನೆಲೆಯಲ್ಲಿ ವಿವಿಧ ಏತ ನೀರಾವರಿ ಯೋಜನೆಗಳಡಿ ಎಲ್ಲೆಲ್ಲಿ ಅವಕಾಶವಿದೆಯೋ ಅಲ್ಲೆಲ್ಲ ಕೆರೆಗಳಿಗೆ ನೀರು ತುಂಬಿಸಲು ಕ್ರಮ ಕೈಗೊಳ್ಳುವಂತೆ ಸೂಚಿಸಿದರು. ಆ ಮೂಲಕ ಅಂತರ್ಜಲ ಮಟ್ಟ, ಕುಡಿಯುವ ನೀರಿನ ಸಮಸ್ಯೆ ಕಡಿಮೆಯಾಗುವುದು ಎಂದು ಸೂಚಿಸಲಾಯಿತು.

67 ಸಾವು: ಸೇತುವೆಗಳ ಫಿಟ್‌ನೆಸ್‌ಗಳ ಬಗ್ಗೆ ವರದಿಯನ್ನು ಲೋಕೋಪಯೋಗಿ ಇಲಾಖೆಯಿಂದ ಪಡೆಯಬೇಕು. ಸಂಪರ್ಕ ರಸ್ತೆಗಳು ಕುಸಿದಿದ್ದರೆ ಅವುಗಳನ್ನು ಸರಿಪಡಿಸಿ, ವಾಹನ ಸಂಚಾರಕ್ಕೆ ಸುಗಮಗೊಳಿಸಬೇಕು. ಎಲ್ಲಾ ಸೇತುವೆ, ರಸ್ತೆಗಳನ್ನು ನಿರಂತರವಾಗಿ ಪರಿಶೀಲನೆ ನಡೆಸಿ ಯಾವುದೇ ಅನಾಹುತವಾಗದಂತೆ ಎಚ್ಚರಿಕೆ ವಹಿಸಬೇಕು. ಮುಳುಗು ಸೇತುವೆಗಳಲ್ಲಿ ವಾಹನ ಸಂಚಾರವನ್ನು ನಿರ್ಬಂಧಿಸಬೇಕು. ಯಾವುದೇ ಕಾರಣಕ್ಕೂ ವಾಹನ ಸಂಚರಿಸದಂತೆ ಸುರಕ್ಷತಾ ಕ್ರಮಗಳನ್ನು ಕೈಗೊಳ್ಳಬೇಕು. ಅತಿವೃಷ್ಟಿಯಿಂದಾಗಿ ರಾಜ್ಯದಲ್ಲಿ ಒಟ್ಟು 67 ಸಾವು ಸಂಭವಿಸಿದ್ದು, 66 ಪ್ರಕರಣಗಳಲ್ಲಿ 329 ಲಕ್ಷ ರೂ. ಪರಿಹಾರ ಒದಗಿಸಲಾಗಿದೆ ಎಂದು ಹೇಳಿದರು.

ಹಳೆ ಶಾಲಾ–ಕಟ್ಟಡ ದುರಸ್ಥಿ: ಅಂಗನವಾಡಿ, ಶಾಲೆ ಕಟ್ಟಡಗಳ, ಸೇತುವೆಗಳು, ಕೆರೆಗಳು ಸುಸ್ಥಿತಿಯಲ್ಲಿರುವ ಬಗ್ಗೆ ಖಾತರಿಪಡಿಸಿಕೊಳ್ಳಬೇಕು.ಮಲೆನಾಡು, ಕರಾವಳಿ ಭಾಗಗಳಲ್ಲಿ ಇರುವ ಹಳೇ ಶಾಲಾ ಕಟ್ಟಡಗಳನ್ನು ಗುರುತಿಸಿ, ಕ್ರಿಯಾ ಯೋಜನೆಯಲ್ಲಿ ಆದ್ಯತೆ ಮೇರೆಗೆ ದುರಸ್ತಿ ಪಡಿಸಬೇಕು. ಪಂಚಾಯತ್ ಮಟ್ಟದಲ್ಲಿ ಟಾಸ್ಕ್ ಫೋರ್ಸ್ ರಚಿಸಲಾಗಿದೆ. 20 ಸಾವಿರ ರೂ. ಅನುದಾನ ಒದಗಿಸಲಾಗಿದೆ. ಸಾವು ನೋವು ತಪ್ಪಿಸುವುದು ನಮ್ಮ ಆದ್ಯತೆ. ಗ್ರಾಮ ಪಂಚಾಯತ್ ಟಾಸ್ಕ್ ಫೋರ್ಸ್ ಬಲಪಡಿಸಲು ಕ್ರಮ ಕೈಗೊಳ್ಳಬೇಕು. ಒಟ್ಟು 1283 ಮನೆಗಳು ಶೇ. 75 ಕ್ಕಿಂತ ಹೆಚ್ಚು ಹಾನಿಗೊಳಗಾಗಿದೆ. ಅದರಲ್ಲಿ 879 ಪ್ರಕರಣಗಳಲ್ಲಿ ತಲಾ 1.20 ಲಕ್ಷ ರೂ. ನಂತೆ 10.54 ಕೋಟಿ ರೂ. ಪರಿಹಾರ ವಿತರಿಸಲಾಗಿದೆ. ಇದರೊಂದಿಗೆ ದೇವರಾಜ ಅರಸು ವಸತಿ ಯೋಜನೆಯಡಿ ಮನೆ ಮಂಜೂರು ಮಾಡಲಾಗುವುದು. ಈಗಾಗಲೇ 500 ಮನೆ ಮಂಜೂರು ಮಾಡಲಾಗಿದೆ. 2817 ಕುಟುಂಬಗಳಿಗೆ ಬಟ್ಟೆ ಬರೆ ಹಾನಿಗಾಗಿ 2500 ರೂ. ನಂತೆ ಹಾಗೂ 2811 ಕುಟುಂಬಗಳಿಗೆ ಗೃಹೋಪಯೋಗಿ ಸಾಮಗ್ರಿಗಳ ಹಾನಿಗೆ ತಲಾ 2500 ರಂತೆ ಒಟ್ಟು 1.40 ಕೋಟಿ ರೂ. ಪರಿಹಾರ ವಿತರಿಸಲಾಗಿದೆ ಎಂದು ತಿಳಿಸಿದರು.

ಪ್ರವಾಹ ಎಚ್ಚರ: ಪ್ರವಾಹ ಇರುವಾಗ ನೀರಿಗೆ ಇಳಿಯಲು ಬಿಡಬಾರದು, ಪೊಲೀಸರ ಸಹಕಾರದಿಂದ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಬೇಕು. ಗ್ರಾಮ ಪಂಚಾಯತ್, ಕಂದಾಯ ಇಲಾಖೆ ಹಾಗೂ ಪೊಲೀಸ್ ಇಲಾಖೆ ಈ ನಿಟ್ಟಿನಲ್ಲಿ ಮುಂಜಾಗರೂಕತೆ ಕ್ರಮಗಳನ್ನು ಕೈಗೊಳ್ಳಬೇಕು. ಬೆಂಗಳೂರಿನಲ್ಲಿ ಅಧಿಕಾರಿಗಳಿಗೆ ಕಟ್ಟೆಚ್ಚರ ವಹಿಸಲು ಸೂಚಿಸಲಾಗಿದೆ. ಪ್ರತಿದಿನ ನಗರದ ಪರಿಸ್ಥಿತಿ ಕುರಿತು ಸಭೆ ನಡೆಸಿ ಪರಿಶೀಲಿಸಲು ಬಿಬಿಎಂಪಿ ಮುಖ್ಯ ಆಯುಕ್ತರಿಗೆ ಸೂಚಿಸಲಾಗಿದೆ. ವಲಯ ಆಯುಕ್ತರ ಸಭೆ ನಡೆಸಿ, ಮುನ್ನೆಚ್ಚರಿಕೆ ಕ್ರಮ ಕೈಗೊಳ್ಳಲು ಹಾಗೂ ಎಂಜಿನಿಯರುಗಳಿಗೆ ಜವಾಬ್ದಾರಿ ನಿಗದಿ ಪಡಿಸಿ. ಕರ್ತವ್ಯಲೋಪ ಎಸಗಿದರೆ, ಮುಲಾಜಿಲ್ಲದೆ ಅವರ ವಿರುದ್ಧ ಕ್ರಮ ಕೈಗೊಳ್ಳುವಂತೆ ಸೂಚಿಸಿದರು.

ಸಾಂಕ್ರಾಮಿಕ ರೋಗಗಳ ಬಗ್ಗೆ ಎಚ್ಚರ: ಎಲ್ಲಾ ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು ತಮ್ಮ ಅಧೀನದಲ್ಲಿರುವ ಅಧಿಕಾರಿಗಳು ಎಚ್ಚರಿಕೆಯಿಂದ ಇರಲು ಸೂಚಿಸಬೇಕು. ನಗರ ಮತ್ತು ಪಟ್ಟಣಗಳಲ್ಲಿ ಕಾಲುವೆಗಳಲ್ಲಿ ಮಳೆ ನೀರು ಸರಾಗವಾಗಿ ಹರಿದು ಹೋಗುವಂತೆ ಕ್ರಮ ಕೈಗೊಳ್ಳಬೇಕು. ಎಲ್ಲಾ ಚರಂಡಿಗಳ ಸ್ವಚ್ಛತೆಯನ್ನು ನಿರಂತರವಾಗಿ ಮಾಡಬೇಕು. 210ಕೋಟಿ ರೂ. ರಾಜ್ಯ ಹೆದ್ದಾರಿಗಳ ದುರಸ್ತಿಗೆ ಈಗಾಗಲೇ ಬಿಡುಗಡೆ ಮಾಡಲಾಗಿದೆ. ಪ್ರವಾಹ ಸಂದರ್ಭದಲ್ಲಿ ಉದ್ಭವವಾಗಬಹುದಾದ ಸಾಂಕ್ರಾಮಿಕ ಕಾಯಿಲೆಗಳ ಬಗ್ಗೆ ಮುನ್ನೆಚ್ಚರಿಕೆ ವಹಿಸುವಂತೆ ಆರೋಗ್ಯ ಇಲಾಖೆ ಅಧಿಕಾರಿಗಳಿಗೆ ಸೂಚಿಸಲಾಯಿತು. ಡೆಂಗ್ಯು ಪ್ರಕರಣಗಳಲ್ಲಿ ಇಳಿಕೆಯಾಗಿದೆ. ಚಿಕುನ್‌ಗುನ್ಯಾ, ಮಲೇರಿಯಾ ರೋಗ ಹರಡದಂತೆ ಕೂಡ ಎಚ್ಚರಿಕೆ ವಹಿಸುವಂತೆ ನಿರ್ದೇಶಿಸಲಾಯಿತು. ಪ್ರವಾಹ, ಭಾರಿ ಮಳೆ ಸಂದರ್ಭದಲ್ಲಿ ವಿದ್ಯುತ್ ಸಂಪರ್ಕ ಕಡಿತಗೊಂಡರೆ, ಕೂಡಲೇ ಸರಿಪಡಿಸಲು ಸಿದ್ಧತೆ ಮಾಡಿಕೊಳ್ಳಲು ಸೂಚಿಸಲಾಯಿತು. ಅಗತ್ಯವಿರುವ ಟ್ರಾನ್ಸ್‌ಫಾರ್ಮರ್‌ಗಳು, ಕಂಬಗಳನ್ನು ಲಭ್ಯಗೊಳಿಸಲು ಸೂಚಿಸಲಾಯಿತಲ್ಲದೆ ಎಲ್ಲ ಇಲಾಖೆಗಳೂ ಕಟ್ಟೆಚ್ಚರದಿಂದ ಕಾರ್ಯನಿರ್ವಹಿಸಬೇಕೆಂದು ಸೂಚನೆ ನೀಡಿದರು.

ಭ್ರೂಣ ಹತ್ಯೆ ಪ್ರಕರಣ ಬೆಳಕಿಗೆ

ಸಂಬಂಧಿಸಿದಂತೆ ಕಳೆದ ಎರಡು ತಿಂಗಳಿಂದ ಪ್ಲಾನ್ ಮಾಡಿಕೊಳ್ಳಲಾಗಿತ್ತು. ಭ್ರೂಣ ಪತ್ತೆ ಮಾಡಿಸಿಕೊಂಡಿರುವ ಬಗ್ಗೆ ಮಾಹಿತಿಯು ಸಹ ನಮಗೆ ದೊರೆತ್ತಿತು. ಖಚಿತ ಮಾಹಿತಿ ಆಧಾರದ ಮೇಲೆ ದಾಳಿ ನಡೆಸಲಾಗಿದೆ ಎಂದರು.

ಕಾರ್ಯಾಚರಣೆ ಮೂಲಕ ಭ್ರೂಣ ಪತ್ತೆ ಪ್ರಕರಣದ ಮೇಲೆ ದಾಳಿ ನಡೆಸಿದ್ದು, ನಿನ್ನೆ ರಾತ್ರಿ ಮಾಹಿತಿ ಸಿಕ್ಕ ಬೆನ್ನಲ್ಲೆ ಅಲರ್ಟ್ ಆಗಿದ್ದೆವು. ಬೆಳ್ಳೂರು ಬಳಿ ಬನ್ನಿ ಅಂತ ಮಾಹಿತಿ ನೀಡಿದ್ದರು. ಅವರ ಮೇಲೆ ಅಟ್ಯಾಕ್ ಮಾಡಿದ ಸಂದರ್ಭದಲ್ಲಿ ನಮ್ಮ ಮೇಲೆ ದಾಳಿಯಾಗಿದೆ. ಮನೆ ಮಾಲೀಕ ಧನಂಜಯ ಎಂಬಾತ ದಾಳಿ ಮಾಡಿದ. ಡೆಕಾಯ್ ಅಪರೇಷನ್ ಮೂಲಕ ಕಾರ್ಯಾಚರಣೆ ಮಾಡಿದ್ದು, ಪೊಲೀಸರಿಗೆ ಮಾಹಿತಿ ಕೊಟ್ಟು ಅವರನ್ನು ನಮ್ಮೊಂದಿಗೆ ಕರೆದುಕೊಂಡು ಹೋಗಿದ್ದೆವು ಎಂದು ವಿವರಿಸಿದರು.

ಕದಬಳ್ಳಿ ಬಳಿಯ ಮಾವಿನಕೆರೆ ಗ್ರಾಮದ ತೋಟದ ಮನೆಯಲ್ಲಿ ಸ್ಕ್ಯಾನಿಂಗ್ ಸೆಂಟರ್ ತೆರೆದು ಭ್ರೂಣ ಪತ್ತೆ ಮತ್ತು ಹತ್ಯೆ ಮಾಡಲಾಗುತ್ತಿತ್ತು. ಅಭಿಷೇಕ್ ಎಂಬ ವ್ಯಕ್ತಿ ಸ್ಕ್ಯಾನಿಂಗ್ ಮಾಡಿದ್ದಾನೆ. ಈ ಅಭಿಷೇಕ್ ಬಯಪ್ಪನಹಳ್ಳಿ ಹಾಗೂ ಪಾಂಡವಪುರದ ಪ್ರಕರಣದಲ್ಲಿ ಭಾಗಿಯಾಗಿದ್ದ. ಇದನ್ನು ಪೊಲೀಸರ ಗಮನಕ್ಕೆ ತರಲಾಗಿದೆ. ಎಲ್ಲಾ ಕಡೆ ಅಭಿಷೇಕ್ ಹೆಸರು ಕೇಳಿ ಬರುತ್ತಿದೆ. ಅಭಿಷೇಕ್ ಸಿಕ್ಕರೆ ಮಂಡ್ಯ ಜಿಲ್ಲೆಯಲ್ಲಿ ಭ್ರೂಣ ಪತ್ತೆ ಹತ್ಯೆ ಪ್ರಕರಣ ಅಂತ್ಯ ಕಾಣಬಹುದು ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಹಾಸನ ಜಿಲ್ಲೆಯ ರಾಮನಾಥಪುರ ಮೂಲದ ತೇಜು ಎಂಬಾಕೆ ಮೂರನೇ ಹೆಣ್ಣು ಮಗು ಆಗುತ್ತಿರುವ ಕಾರಣ ಭ್ರೂಣ ಪತ್ತೆ ಬಂದಿದ್ದಳು. ತನ್ನ ಪತಿ ಮನೋಹರ್ ಜೊತೆಗೆ ಬಂದು ಭ್ರೂಣ ಹತ್ಯೆ ಮಾಡಿಸಿಕೊಳ್ಳುವಾಗ ನಮ್ಮ ಕೈಗೆ ಎಲ್ಲರೂ ಸಿಕ್ಕಿ ಬಿದ್ದಿದ್ದಾರೆ. ಘಟನೆ ಸಂಬಂಧ ಮನೆ ಮಾಲೀಕ ಧನಂಜಯ, ಭ್ರೂಣ ಹತ್ಯೆಗಾಗಿ ಪತ್ನಿಯನ್ನು ಕರೆದುಕೊಂಡು ಬಂದಿದ್ದ ಮನೋಹರ್ ಹಾಗೂ ಭ್ರೂಣ ಹತ್ಯೆಗೆ ಸಹಾಯಕಿಯಾಗಿದ್ದ ನಾಗಮಣಿಯನ್ನು ಬಂಧಿಸಲಾಗಿದೆ ಎಂದು ತಿಳಿಸಿದರು.

ಘಟನೆ ಪತ್ತೆ ಹಚ್ಚಲು ನಾವೇ ಒಬ್ಬರನ್ನು ಕಳಿಸಿ ಈ ಕಾರ್ಯಾಚರಣೆ ಯಶಸ್ವಿಯಾಗುವಂತೆ ಮಾಡಿದ್ದೇವೆ. ದಾಳಿ ವೇಳೆ 'ಎಬಿ ಟು ಕಿಟ್' ಮಾತ್ರೆಗಳು ಸಿಕ್ಕಿವೆ. ಯಾವ ಮೆಡಿಕಲ್‌ನಲ್ಲಿ ಸಿಕ್ಕಿದೆ ಅನ್ನೋದನ್ನು ತನಿಖೆ ಮಾಡಬೇಕಿದೆ. ಬಂಧಿತರಾದ ಮನೋಹರ್, ಧನಂಜಯ, ನಾಗಮಣಿಯನ್ನು ಪೊಲೀಸರು ತೀವ್ರ ವಿಚಾರಣೆಗೆ ಒಳಪಡಿಸಿದ್ದಾರೆ. ಅಭಿಷೇಕ್ ಪತ್ತೆಗೆ ಪೊಲೀಸರು ತನಿಖೆ ಆರಂಭಿಸಿದ್ದು, ಆತ ಸಿಕ್ಕಿದ ಬಳಿಕ ಮತ್ತಷ್ಟು ಮಾಹಿತಿ ಹೊರಬೀಳಲಿದೆ. ಜಿಲ್ಲೆಯಲ್ಲಿ ಭ್ರೂಣ ಪತ್ತೆ ಹತ್ಯೆ ಪ್ರಕರಣ ಕಂಡು ಬಂದರೆ ಮಾಹಿತಿ ನೀಡುವಂತೆ ಮನವಿ ಮಾಡಿದರು.

ಜಿಲ್ಲೆಯಲ್ಲಿ ನಿಲ್ಲದ ಹೆಣ್ಣು ಭ್ರೂಣ ಪತ್ತೆ, ಹತ್ಯೆ ದಂಧೆ: ಮಂಡ್ಯ ಜಿಲ್ಲೆಯಲ್ಲಿ ಹೆಣ್ಣು ಭ್ರೂಣ ಪತ್ತೆ, ಹತ್ಯೆ ನಡೆಯುತ್ತಿರುವ ವಿಚಾರ ಕರ್ನಾಟಕದಾದ್ಯಂತ ಬಹಳಷ್ಟು ಚರ್ಚೆಗೆ ಗ್ರಾಸವಾಗಿತ್ತು. ಪಾಂಡವಪುರ ಸರ್ಕಾರಿ ಹೆಲ್ತ್ ಕ್ವಾಟ್ರಸ್ ಹಾಗೂ ಮಂಡ್ಯದ ಹಾಡ್ಯ ಗ್ರಾಮದ ಆಲೆಮನೆಯಲ್ಲಿ ನಡೆಯುತ್ತಿದ್ದ ಹೆಣ್ಣು ಭ್ರೂಣ ಪತ್ತೆ, ಹತ್ಯೆ, ಪ್ರಕರಣ ಮೇ ತಿಂಗಳಲ್ಲಿ ಭಾರಿ ಸದ್ದು ಮಾಡಿತ್ತು. ಇದೀಗ ಆ ವಿಚಾರ ಸಂಬಂಧಿತ ಚರ್ಚೆ ತಣ್ಣಗಾಗುತ್ತಿರುವ ಹೊತ್ತಿನಲ್ಲಿಯೇ ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ ಅವರ ತವರು ಕ್ಷೇತ್ರ ನಾಗಮಂಗಲದ ಮಾವಿನಕೆರೆ ಗ್ರಾಮದ ತೋಟದ ಮನೆಯಲ್ಲೂ ಹೆಣ್ಣು ಭ್ರೂಣ ಪತ್ತೆ, ಹತ್ಯೆ ಕೃತ್ಯ ನಡೆಯುತ್ತಿರುವುದು ಬೆಳಕಿಗೆ ಬಂದಿರುವುದು ನಾಗರಿಕ ಸಮಾಜ ತಲೆತಗ್ಗಿಸುವಂತಾಗಿದೆ.

ಅದ್ದೂರಿ ನಾಡಹಬ್ಬ ದಸರಾ ಆಚರಣೆ

ಎಂದರು. ಶ್ರೀರಂಗಪಟ್ಟಣ ದಸರಾಗೆ ಕಳೆದ ವರ್ಷ ಒಂದು ಕೋಟಿ ನೀಡಲಾಗಿತ್ತು. ಆದರೆ ಈ ಬಾರಿ 1.50 ಕೋಟಿ ನೀಡಲಾಗುತ್ತಿದೆ. ಇನ್ನು ಚಾಮರಾಜನಗರ ದಸರಾಗೆ 2 ಕೋಟಿ ರೂ. ನೀಡಲಾಗುತ್ತಿದೆ ಎಂದು ಡಾ.ಮಹದೇವಪ್ಪ ತಿಳಿಸಿದರು.

ಆಕರ್ಷಕ ದೀಪಾಲಂಕಾರ: ಈ ಬಾರಿ ಮೈಸೂರಿನ ವಿದ್ಯುತ್ ದೀಪಾಲಂಕಾರವನ್ನು 21 ದಿನಗಳ ತನಕ ವಿಸ್ತರಿಸಲಾಗಿದೆ. ಅತ್ಯಾಕರ್ಷಕ ವಿದ್ಯುತ್ ದೀಪಲಂಕಾರದ ಹೊಣೆಯನ್ನು ಚೆಸ್ಕಾಂಗೆ ವಹಿಸಲಿದ್ದು, ಅದರ ವೆಚ್ಚವನ್ನು ಅವರೆ ಭರಿಸುತ್ತಾರೆ ಎಂದು ಹೇಳಿದರು. ಮೈಸೂರಿನ ಚಾಮುಂಡಿ ಬೆಟ್ಟದಲ್ಲಿ ಅಕ್ಟೋಬರ್ 3 ರಂದು ಬೆಳಿಗ್ಗೆ 9.15ರಿಂದ 9.45 ಗಂಟೆಯೊಳಗೆ ದಸರಾ ಉದ್ಘಾಟನೆ ನೆರವೇರಲಿದೆ. ದಸರಾದ ವಿವಿಧ ಕಾರ್ಯಕ್ರಮಗಳು ಸುಸೂತ್ರವಾಗಿ ನೆರವೇರಲು 19 ಉಪ ಸಮಿತಿಗಳನ್ನು ರಚನೆ ಮಾಡಲಾಗಿದ್ದು, ಇಂದಿನ ಕಾರ್ಯಕಾರಿ ಸಮಿತಿ ಸಭೆಯಲ್ಲಿ ಇದಕ್ಕೆ ಅಂಗೀಕಾರ ನೀಡಲಾಗಿದೆ ಎಂದು ಹೇಳಿದರು.

ಆ.21ಕ್ಕೆ ಗಜ ಪಯಣ: ಆಗಸ್ಟ್ 21 ಗಜಪಯಣದ ಕಾರ್ಯಕ್ರಮ ನಿಗದಿ ಮಾಡಲಾಗಿದೆ. ಆನೆಗಳನ್ನು ವಾಹನದಲ್ಲಿ ತರುವ ಬದಲು ಕಾಲ್ನಡಿಗೆಯಲ್ಲಿ ಕರೆತರುವಂತೆ ಇಂದಿನ ಕಾರ್ಯಕಾರಿ ಸಮಿತಿಯಲ್ಲಿ ಕೆಲವರು ಸಲಹೆ ನೀಡಿದರು. ಆದರೆ 50 ಕಿಲೋ ಮೀಟರ್ ತನಕ ಆನೆಗಳು ನಡೆದು ಬಂದರೆ ಅವುಗಳಿಗೆ ಆಯಾಸವಾಗುತ್ತದೆ. ಜೊತೆಗೆ ಹೈಕೋರ್ಟ್ ಹಾಗೂ ಸುಪ್ರೀಂಕೋರ್ಟ್ ನಿರ್ದೇಶನಕ್ಕೆ ಇದು ವಿರುದ್ಧವಾಗಿದೆ ಎಂಬ ಕಾರಣದಿಂದ ಈ ಸಲಹೆ ತಿರಸ್ಕರಿಸಲಾಯಿತು. ಆಗಸ್ಟ್ 21 ರಂದು ಆರಂಭವಾಗುವ ಗಜಪಯಣ ಅಂದೆ ಮೈಸೂರಿಗೆ ಬಂದು ತಲುಪಲಿದ್ದು, ಆಗಸ್ಟ್ 23 ರಂದು ಮೈಸೂರು ಅರಮನೆಯಲ್ಲಿ ಸಾಂಪ್ರದಾಯಿಕವಾಗಿ ಸ್ವಾಗತಿಸಲಾಗುವುದು ಎಂದು ಡಾ. ಮಹದೇವಪ್ಪ ವಿವರಿಸಿದರು. ಬರಗಾಲದ ಹಿನ್ನೆಲೆ ಕಳೆದ ಬಾರಿ ಕೆಲವು ಕಾರ್ಯಕ್ರಮಗಳನ್ನು ಸರಳವಾಗಿ ಆಯೋಜಿಸಲಾಗಿತ್ತು. ಆದರೆ ಈ ಬಾರಿ ಅದ್ದೂರಿ ದಸರಾ ಆಚರಣೆ ಮಾಡುತ್ತಿರುವ ಕಾರಣ ಯುವ ದಸರಾ, ಯುವ ಸಂಭ್ರಮ ಕಾರ್ಯಕ್ರಮಗಳು ಪ್ರತಿ ವರ್ಷ ದಂತೆ ನಡೆಯುತ್ತದೆ. ಆದರೆ ಎರಡು ವರ್ಷದ ಕಾರ್ಯಕ್ರಮ ಹಾಗೂ ಕಲಾ ವಿದರು ಪುನರಾವರ್ತನೆ ಆಗದಂತೆ ವಿಭಿನ್ನ ಕಾರ್ಯಕ್ರಮ ರೂಪಿಸುವಂತೆ ಅಧಿಕಾರಿಗಳಿಗೆ ಸಲಹೆ ನೀಡಲಾಗಿದೆ ಎಂದು ತಿಳಿಸಿದರು.

ಉದ್ಘಾಟಕರ ತೀರ್ಮಾನ ಸಿಎಂಗೆ: ದಸರಾ ಆಚರಣೆಗೆ ಅನುದಾನ, ದಸರಾ ಉದ್ಘಾಟಕರ ಹೆಸರನ್ನು ಘೋಷಣೆ ಮಾಡುವ ಅಧಿಕಾರವನ್ನು ಮುಖ್ಯಮಂತ್ರಿ ಸಿದ್ದ ರಾಮಯ್ಯ ಅವರಿಗೆ ನೀಡಲಾಗಿದೆ ಎಂದು ಡಾ.ಮಹದೇವಪ್ಪ ತಿಳಿಸಿದರು.

ಕೆ.ಆರ್.ಆಸ್ಪತ್ರೆ ಶತಮಾನೋತ್ಸವ: ಮೈಸೂರಿನ ಕೆ.ಆರ್.ಆಸ್ಪತ್ರೆ ಶತಮಾನೋತ್ಸವದ ಸಂಭ್ರಮದಲ್ಲಿದ್ದು, ಅದ್ದೂರಿ ಸಮಾರಂಭ ಆಚರಣೆಗೆ ಕಾರ್ಯಕ್ರಮ ಆಯೋಜಿಸಲಾಗುವುದು. ಈ ಸಂಬಂಧ ಪ್ರತ್ಯೇಕವಾಗಿ ಅಧಿಕಾರಿಗಳ ಸಭೆ ನಡೆಸುತ್ತೇನೆ ಎಂದರು.

ನವದೆಹಲಿಯಲ್ಲಿ ನಿನ್ನೆ ನಡೆದ ಸ್ವಾತಂತ್ರ್ಯ ದಿನಾಚರಣೆ ಸಮಾರಂಭದಲ್ಲಿ ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅವರನ್ನು ಎರಡನೇ ಸಾಲಿನಲ್ಲಿ ಕೂರಲು ಆಸನದ ವ್ಯವಸ್ಥೆ ಮಾಡಿರುವುದಕ್ಕೆ ಕಿಡಿಕಾರಿದ ಡಾ.ಮಹದೇವಪ್ಪ, ಇದು ಪ್ರಜಾಪ್ರಭುತ್ವಕ್ಕೆ ಶೋಭೆ ತರುವುದಿಲ್ಲ ಎಂದು ಅಭಿಪ್ರಾಯಪಟ್ಟರು. ಕಾರ್ಯಕಾರಿ ಸಮಿತಿ ಸಭೆಯಲ್ಲಿ ಮಾತನಾಡಿದ ಶಾಸಕ ತನ್ವೀರ್ ಸೇಠ್, ಆಹಾರ ಮೇಳವನ್ನು ಒಂದು ತಿಂಗಳ ಕಾಲ ಆಯೋಜಿಸಬೇಕು. ಸ್ವಚ್ಚತೆ ಕಾಪಾಡಿಕೊಂಡು ಕಡಿಮೆ ದರದಲ್ಲಿ ಗುಣಮಟ್ಟದ ಆಹಾರ ನೀಡಬೇಕು ಎಂದು ಸಲಹೆ ನೀಡಿದರು.

ಈ ವೇಳೆ ಮಾತನಾಡಿದ ಶಾಸಕ ಅನಿಲ್ ಚಿಕ್ಕಮಾದು, ಅರ್ಜುನ ಆನೆ ಮರಣ ಹೊಂದಿದ್ದು, ಅದರ ಹೆಸರಿನಲ್ಲಿ ಮಾವುತರಿಗೆ ಪ್ರಶಸ್ತಿ ನೀಡಬೇಕು ಎಂದು ಮನವಿ ಮಾಡಿದರು.

ಸಭೆಯಲ್ಲಿ ಶಾಸಕರಾದ ಜಿ.ಟಿ.ದೇವೇಗೌಡ, ಟಿ.ಎಸ್.ಶ್ರೀವತ್ಸ, ಕೆ.ಹರೀಶ್‌ಗೌಡ, ರಮೇಶ್ ಬಂಡಿಸಿದ್ದೇಗೌಡ, ಪುಟ್ಟರಂಗಶೆಟ್ಟಿ, ಡಿ.ರವಿಶಂಕರ್, ಹೆಚ್.ಎಂ.ಗಣೇಶ್ ಪ್ರಸಾದ್, ಎ.ಆರ್.ಕೃಷ್ಣಮೂರ್ತಿ, ಹೆಚ್.ವಿಶ್ವನಾಥ್, ಡಾ.ತಿಮ್ಮಯ್ಯ, ಕೆ.ವಿವೇಕಾನಂದ, ಜಿಲ್ಲಾಧಿಕಾರಿ ಜಿ.ಲಕ್ಷ್ಮಿಕಾಂತ ರೆಡ್ಡಿ, ನಗರ ಪೊಲೀಸ್ ಆಯುಕ್ತೆ ಸೀಮಾ ಲಾಟ್ಕರ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ವಿಷ್ಣುವರ್ಧನ್, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಕೆ.ಎಂ.ಗಾಯತ್ರಿ ಸೇರಿದಂತೆ ಹಲವರು ಉಪಸ್ಥಿತರಿದ್ದರು.

ದಸರಾದಲ್ಲಿ ಅರಮನೆ ಸುತ್ತ ಪ್ರಾಯೋಗಿಕವಾಗಿ ಝೀರೊ ಟ್ರಾಫಿಕ್

ವಿಶ್ವ ವಿಖ್ಯಾತ ಮೈಸೂರು ದಸರಾ ಮಹೋತ್ಸವದ ಸಂದರ್ಭದ 9 ದಿನದ ಅವಧಿಯಲ್ಲಿ ಅರಮನೆ ಸುತ್ತ ಟ್ರಾಫಿಕ್ ಜಾಮ್ ಅವ್ಯವಸ್ಥೆಯಿಂದ ಮುಕ್ತ ಮಾಡಲು ಪ್ರಾಯೋಗಿಕವಾಗಿ ಈ ವರ್ಷ ಝೀರೋ ಟ್ರಾಫಿಕ್ ಪರಿಚಯಿಸಲು ತೀರ್ಮಾನಿಸಲಾಗಿದೆ ಎಂದು ಡಾ.ಮಹದೇವಪ್ಪ ತಿಳಿಸಿದರು. 9 ದಿನಗಳ ಕಾಲ ನಡೆಯುವ ದಸರಾ ಸಂದರ್ಭದಲ್ಲಿ ಅರಮನೆ ಸುತ್ತ ಟ್ರಾಫಿಕ್ ಜಾಮ್ ಆಗುತ್ತದೆ. ಇದರಿಂದ ಜನರು ತೀವ್ರ ತೊಂದರೆ ಅನುಭವಿಸುತ್ತಾರೆ ಎಂದರು. ಯೂರೋಪ್ ದೇಶದಲ್ಲಿ ಇಂತಹ ಮಹೋತ್ಸವಗಳು ನಡೆದ ಸಂದರ್ಭದಲ್ಲಿ ನಿಗದಿತ ಸ್ಥಳದಲ್ಲಿ ವಾಹನ ನಿಲುಗಡೆ ಮಾಡಿ ಕಾಲ್ನಡಿಗೆಯಲ್ಲಿ ವೀಕ್ಷಣೆ ಮಾಡುವ ವ್ಯವಸ್ಥೆ ಇದೆ. ಆದರೆ ಇದಕ್ಕೆ ನಮ್ಮ ಜನರು ಒಗ್ಗಿಕೊಳ್ಳುವುದು ಮುಖ್ಯ ಎಂದು ಹೇಳಿದರು.

ಈ ಹಿನ್ನೆಲೆಯಲ್ಲಿ ಈ ವರ್ಷ ಪ್ರಾಯೋಗಿಕವಾಗಿ ಅರಮನೆ ಸುತ್ತ ಝೀರೋ ಟ್ರಾಫಿಕ್ ವ್ಯವಸ್ಥೆ ಜಾರಿಗೊಳಿಸಲಾಗುವುದು. ದಸರಾ ಆರಂಭಗೊಳ್ಳುವ ಮುನ್ನ ಝೀರೋ ಟ್ರಾಫಿಕ್ ಅನ್ನು ಪರೀಕ್ಷಾರ್ಥವಾಗಿ ಮಾಡಲಾಗುವುದು. ಆ ವೇಳೆ ಸಾಧಕ–ಬಾಧಕ, ಲೋಪ–ದೋಷಗಳನ್ನು ಗುರುತಿಸಲು ಸಹಾಯವಾಗುತ್ತದೆ ಎಂದು ಹೇಳಿದರು. ವಾಹನಗಳ ನಿಲುಗಡೆಗೆ ಸ್ಥಳವನ್ನು ಕೂಡ ಗುರುತಿಸಲಾಗುವುದು. ಕಾಲ್ನಡಿಗೆಯಲ್ಲಿ ಹೋಗಲು ಸಾಧ್ಯವಾಗದವರಿಗೆ ಲಘು ವಾಹನದ ವ್ಯವಸ್ಥೆ ಮಾಡಲು ಕೂಡ ಚಿಂತನೆ ಮಾಡಲಾಗುವುದು ಎಂದು ಹೇಳಿದರು. ದಸರಾ ವೇಳೆ ಚಾಮುಂಡಿಬೆಟ್ಟದಲ್ಲಿ ಕೂಡ ಟ್ರಾಫಿಕ್ ಜಾಮ್ ಆಗುತ್ತದೆ. ಈ ಹಿನ್ನೆಲೆ ಆಷಾಢ ಶುಕ್ರವಾರದಂತೆ ಖಾಸಗಿ ವಾಹನ ನಿರ್ಬಂಧಿಸಿ, ಕೆಎಸ್‌ಆರ್‌ಟಿಸಿ ಬಸ್ ವ್ಯವಸ್ಥೆ ಮಾಡುವ ಬಗ್ಗೆ ಕೂಡ ಚರ್ಚಿಸಲಾಗುವುದು ಎಂದು ಡಾ.ಮಹದೇವಪ್ಪ ತಿಳಿಸಿದರು.

ವೈದ್ಯರ ಮುಷ್ಕರ

ಮುಷ್ಕರದಲ್ಲಿ ಪಾಲ್ಗೊಳ್ಳುವರು ಎಂದರು. ಶನಿವಾರ ಬೆಳಗ್ಗೆ 6 ರಿಂದ ಭಾನುವಾರ ಬೆಳಗ್ಗೆ 6 ಗಂಟೆವರೆಗೆ ಮೈಸೂರು ಸೇರಿದಂತೆ ದೇಶಾದ್ಯಂತ ವೈದ್ಯರ ಸೇವೆ ಲಭ್ಯವಿರುವುದಿಲ್ಲ. ಆ ಮೂಲಕ ಕೊಲ್ಕತ್ತಾದಲ್ಲಿ ನಡೆದಿರುವ ಪ್ರಕರಣಕ್ಕೆ ವೈದ್ಯ ಸಮೂಹ ಆಕ್ರೋಶ ವ್ಯಕ್ತಪಡಿಸಲಿದೆ ಎಂದು ಡಾ.ಜಯಂತ್ ತಿಳಿಸಿದರು. ಮೈಸೂರಿನ ಕೆ.ಆರ್., ಚೆಲುವಾಂಬ, ಪಿಕೆಟಿಬಿ, ಟ್ರಾಮಾ ಕೇರ್ ಸೆಂಟರ್, ಮಲ್ಟಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ, ಜಿಲ್ಲಾ ಆಸ್ಪತ್ರೆ ಎಲ್ಲಾ ತಾಲೂಕು ಗಳ ಸಾರ್ವಜನಿಕ ಆಸ್ಪತ್ರೆ, ಸಮುದಾಯ ಆರೋಗ್ಯ ಕೇಂದ್ರ, ಪ್ರಾಥಮಿಕ ಆರೋಗ್ಯ ಕೇಂದ್ರಗಳು, ಖಾಸಗಿ ಆಸ್ಪತ್ರೆ, ಕ್ಲಿನಿಕ್‌ಗಳಲ್ಲೂ ಪ್ರತಿಭಟನೆಯಿಂದಾಗಿ ರೋಗಿಗಳಿಗೆ ತೀವ್ರ ತೊಂದರೆ ಉಂಟಾಗಲಿದೆ ಎಂದು ಡಾ. ಜಯಂತ್ ತಿಳಿಸಿದ್ದಾರೆ.

ಮೈಸೂರು ಅಸೋಸಿಯೇಷನ್ ಆಫ್ ಹಾಸ್ಪಿಟಲ್ಸ್, ನರ್ಸಿಂಗ್ ಹೋಂಗಳು ಮತ್ತು ಡಯಾಗ್ನೊಸ್ಟಿಕ್ ಸೆಂಟರ್ಸ್ ವೈದ್ಯರು ನಾಳಿನ ರಾಷ್ಟ್ರಮಟ್ಟದ ಮುಷ್ಕರಕ್ಕೆ ಬೆಂಬಲ ನೀಡಿವೆ ಎಂದು ಮಹಾನ್ ಅಧ್ಯಕ್ಷ ಡಾ.ಕೆ.ಜಾವೀದ್ ನಯೀಂ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಇಸ್ರೊ: ಭೂ ವೀಕ್ಷಣಾ ಉಪಗ್ರಹ EOS-08 ಉಡಾವಣೆ ಯಶಸ್ವಿ; ಹೊಸ ಮೈಲಿಗಲ್ಲು



ನೆಲ್ಲೂರು (ಆಂಧ್ರಪ್ರದೇಶ): ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ ಶುಕ್ರವಾರ ಆಂಧ್ರಪ್ರದೇಶದ ಶ್ರೀಹರಿಕೋಟಾದಲ್ಲಿರುವ ಸತೀಶ್ ಧವನ್ ಬಾಹ್ಯಾಕಾಶ ಕೇಂದ್ರದಿಂದ ಭೂಮಿಯ ವೀಕ್ಷಣಾ ಉಪಗ್ರಹ-8 (EOS-8) ನ್ನು ಉಡಾವಣೆ ಮಾಡಿದೆ.

ಈ ಬಗ್ಗೆ ಎಕ್ಸ್ ಪೋಸ್ಟ್‌ನಲ್ಲಿ ಎಸ್ಎಸ್ಎಲ್‌ವಿಯ ಮೂರನೇ ಅಭಿವೃದ್ಧಿ ವಾಹಕ ಹಾರಾಟ ಯಶಸ್ವಿಯಾಗಿದೆ. SSLV-D3 ನಿಖರವಾಗಿ EOS-08 ನ್ನು ಕಕ್ಷೆಗೆ ಸೇರಿಸಿತು. ಇದು ISRO/DOS ನ SSLV ಅಭಿವೃದ್ಧಿ ಯೋಜನೆ ಯಶಸ್ವಿಯಾಗಿ ಪೂರ್ಣಗೊಂಡಿದೆ. ತಂತ್ರಜ್ಞಾನ ವರ್ಗಾವಣೆಯೊಂದಿಗೆ, ಭಾರತೀಯ ಉದ್ಯಮ ಮತ್ತು ಎನ್ಎಸ್ಐಎಲ್ ಇಂಡಿಯಾ ಈಗ ಎಸ್ಎಸ್ಎಲ್‌ವಿಯನ್ನು ವಾಣಿಜ್ಯ ಕಾರ್ಯಾಚರಣೆಗಳಿಗಾಗಿ ಉತ್ಪಾದಿಸುತ್ತದೆ ಎಂದು ಇಸ್ರೊ ಹೇಳಿದೆ.

ಇಂದು ಮಧ್ಯರಾತ್ರಿ ಬಳಿಕ 2.47 ಕ್ಕೆ ಪ್ರಾರಂಭವಾಯಿತು. ಇದು SSLV-D3/EOS-08 ಮಿಷನ್‌ನ ಮೂರನೇ ಮತ್ತು ಅಂತಿಮ ಅಭಿವೃದ್ಧಿ ವಾಹಕವಾಗಿದೆ. ಬಾಹ್ಯಾಕಾಶ ನೌಕೆಯನ್ನು ಒಂದು ವರ್ಷದ ಅವಧಿಗೆ ವಿನ್ಯಾಸಗೊಳಿಸಲಾಗಿದೆ.

EOS-08 ಮಿಷನ್‌ನ ಪ್ರಾಥಮಿಕ ಉದ್ದೇಶಗಳು ಮೈಕ್ರೊಸ್ಯಾಟಲೈಟ್‌ನ್ನು ವಿನ್ಯಾಸಗೊಳಿಸುವುದು ಮತ್ತು ಅಭಿವೃದ್ಧಿಪಡಿಸುವುದು, ಮೈಕ್ರೋಸ್ಯಾಟಲೈಟ್ ಬಸ್‌ಗೆ ಹೊಂದಿಕೆಯಾಗುವ ಪೇಲೋಡ್ ಉಪಕರಣಗಳನ್ನು ರಚಿಸುವುದು ಮತ್ತು ಭವಿಷ್ಯದ ಕಾರ್ಯಾಚರಣೆಯ ಉಪಗ್ರಹಗಳಿಗೆ ಅಗತ್ಯವಾದ ಹೊಸ ತಂತ್ರಜ್ಞಾನಗಳನ್ನು ಅಳವಡಿಸಿಕೊಳ್ಳುವುದು.

ಪತ್ತೆ, ಜ್ವಾಲಾಮುಖಿ ವೀಕ್ಷಣೆ, ಮತ್ತು ಕೈಗಾರಿಕಾ ಮತ್ತು ವಿದ್ಯುತ್ ಸ್ಥಾವರ ವಿಪತ್ತು ಮೇಲ್ವಿಚಾರಣೆ. ಜಿಎನ್ ಎಸ್ಎಸ್-ಆರ್ ಪೇಲೋಡ್ ಸಾಗರ ಮೇಲ್ಮೈ ಗಾಳಿ ವಿಶ್ಲೇಷಣೆ, ಮಣ್ಣಿನ ತೇವಾಂಶದ ಮೌಲ್ಯಮಾಪನ, ಹಿಮಾಲಯ ಪ್ರದೇಶದ ಮೇಲಿನ ಕ್ರಯೋಸ್ಪಿಯರ್ ಅಧ್ಯಯನಗಳು, ಪ್ರವಾಹ ಪತ್ತೆ ಮತ್ತು ಒಳನಾಡಿನ ಜಲ ಮೂಲ ಪತ್ತೆಯಂತಹ ಅಪ್ಲಿಕೇಶನ್‌ಗಳಿಗಾಗಿ GNSS-R-ಆಧಾರಿತ ರಿಮೋಟ್ ಸೆನ್ಸಿಂಗ್‌ನ್ನು ಬಳಸುವ ಸಾಮರ್ಥ್ಯವನ್ನು ಪ್ರದರ್ಶಿಸುತ್ತದೆ.

78ನೇ ಸ್ವಾತಂತ್ರ್ಯ ದಿನಾಚರಣೆ



ಶಾಕಂಬರಿ ಧಾರ್ಮಿಕ ಶ್ರದ್ಧಾ ಕೇಂದ್ರ, ಸಂಧ್ಯಾ ಸುರಕ್ಷ ಟ್ರಸ್ಟ್, ಜಿಲ್ಲಾ ಬ್ರಾಹ್ಮಣ ಮಹಾಸಭಾ ವತಿಯಿಂದ ನಡೆದ 78ನೇ ಸ್ವಾತಂತ್ರ್ಯೋತ್ಸವ ಕಾರ್ಯಕ್ರಮದಲ್ಲಿ ಸರ್ದಾರ್ ವಲ್ಲಭಭಾಯಿ ಪಟೇಲ್ ಸದ್ಭಾವನಾ ರಾಷ್ಟ್ರೀಯ ಪ್ರಶಸ್ತಿಯನ್ನು ನಿವೃತ್ತ ನ್ಯಾಯಮೂರ್ತಿ ಎನ್ ಸಂತೋಷ ಹೆಗ್ಡೆ ಅವರಿಗೆ ಪ್ರದಾನ ಮಾಡಲಾಯಿತು. ಈ ವೇಳೆ ಕುವೆಂಪು ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿ ಡಾ.ಕೆ.ಚಿದಾನಂದ ಗೌಡ, ಶಾಸಕ ಟಿ.ಎಸ್. ಶ್ರೀವತ್ಸ ಬಿ.ಆರ್.ನಟರಾಜ್ ಜೋಯಿಸ್ ಮತ್ತಿತರರು ಉಪಸ್ಥಿತರಿದ್ದರು.



ಮೈಸೂರಿನ ಶ್ರೀರಾಂಪುರದಲ್ಲಿರುವ ಮಹಾವೀರ ವಿದ್ಯಾ ಮಂದಿರದಲ್ಲಿ (ಜೈನ್ ಸೊಸೈಟಿ) 78ನೇ ಸ್ವಾತಂತ್ರ ದಿನಾಚರಣೆಯ ಆಚರಿಸಲಾಯಿತು. ಕಾರ್ಯಕ್ರಮದಲ್ಲಿ ಅಧ್ಯಕ್ಷ ಡಾ.ಬಾಹುಬಲಿ ಜಿ ನಾಗಾವಿ, ಕಾರ್ಯದರ್ಶಿ ಇಚ್ಛಾ, ಸದಸ್ಯರಾದ ಜಿಪಿ ಅನಂತರಾಜು, ಮಾಜಿ ಸೈನಿಕ ನಂದೀಶ್ ಕುಮಾರ್, ಪ್ರಾಂಶುಪಾಲರಾದ ಅನಿತಾ ಉಪಸ್ಥಿತರಿದ್ದರು.

ನೃಪತುಂಗ ಶಾಲೆಯಲ್ಲಿ ಸ್ವಾತಂತ್ರ್ಯ ಸಂಭ್ರಮ



ಮೈಸೂರು, ಆ. 16- ಮೈಸೂರಿನ ರಾಮಕೃಷ್ಣನಗರದಲ್ಲಿರುವ ನೃಪತುಂಗ ಕನ್ನಡ ಶಾಲೆಯಲ್ಲಿ 78ನೇ ಸ್ವಾತಂತ್ರ್ಯ ದಿನಾಚರಣೆಯನ್ನು ಆಚರಿಸಲಾಯಿತು. ಸ್ವಾತಂತ್ರ್ಯ ಹೋರಾಟಗಾರರಾದ ಸುಭಾಷ್ ಚಂದ್ರ ಬೋಸ್, ಭಗತ್ ಸಿಂಗ್, ಲಾಲಾ ಲಜಪತ ರಾಯ್, ಬಾಲಗಂಗಾಧರ್ ತಿಲಕ್, ಖುದಿರಾಮ್ ಬೋಸ್, ಮಹಾತ್ಮ ಗಾಂಧೀಜಿ, ಡಾ. ಬಿ.ಆರ್.ಅಂಬೇಡ್ಕರ್, ಸರ್ದಾರ್ ವಲ್ಲಭಭಾಯಿ ಪಟೇಲ್, ಚಾಚಾ ನೆಹರು, ಲಾಲ್ ಬಹದ್ದೂರ್ ಶಾಸ್ತ್ರಿ, ಕಿತ್ತೂರು ರಾಣಿ ಚೆನ್ನಮ್ಮ, ಝಾನ್ಸಿ ರಾಣಿ ಲಕ್ಷ್ಮೀಬಾಯಿ ಅವರುಗಳ ವೇಷ ಧರಿಸಿ ಪಾತ್ರ ಅಭಿನಯಿಸಿದ್ದು ವಿಶೇಷವಾಗಿತ್ತು.

ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ನಿವೃತ್ತ ಪ್ರಾಧ್ಯಾಪಕರಾದ ಪ್ರೊಫೆಸರ್ ಎಸ್ ಶ್ರೀನಿವಾಸ ಶೆಟ್ಟಿ ಧ್ವಜಾರೋಹಣ ನೆರವೇರಿಸಿದರು. ಸಂಸ್ಥೆಯ ಕಾರ್ಯದರ್ಶಿ ಸವಿತಾ ಪ.ಮಲ್ಲೇಶ್, ಮಕ್ಕಳಿಗೆ ದಕ್ಷಿಣ ಆಫ್ರಿಕದಲ್ಲಿ ಗಾಂಧೀಜಿಯವರು ಮಾಡಿದ ಹೋರಾಟಗಳ ಬಗ್ಗೆ ತಿಳಿಸಿಕೊಟ್ಟರು.

ಅಧ್ಯಕ್ಷತೆ ವಹಿಸಿದ್ದ ಮೈಸೂರಿನ ಸಂವಹನ ಪ್ರಕಾಶನದ ಮಾಲೀಕರು ಹಾಗೂ ಕನ್ನಡ ವಿಕಾಸ ಶೈಕ್ಷಣಿಕ ಸಾಮಾಜಿಕ ಸಾಂಸ್ಕೃತಿಕ ಸಂಸ್ಥೆಯ ಧರ್ಮದರ್ಶಿಗಳಾದ ಡಿ.ಎನ್.ಲೋಕಪ್ಪ ಅವರು ಬಾಲ್ಯದಲ್ಲಿ ಆಚರಿಸುತ್ತಿದ್ದ ಸ್ವಾತಂತ್ರ್ಯ ದಿನಾಚರಣೆಯನ್ನು ಮೆಲುಕು ಹಾಕುತ್ತಾ, ಮಕ್ಕಳೊಂದಿಗೆ ಆ ಸವಿ ನೆನಪುಗಳನ್ನು ಹಂಚಿಕೊಂಡರು. ಹಾಗೂ ಕರ್ನಾಟಕ ಭಾಗದ ದೇಶಭಕ್ತರು ಹಾಗೂ ಸ್ವಾತಂತ್ರ್ಯ ಹೋರಾಟಗಾರರ ಬಗ್ಗೆ ಮಕ್ಕಳಿಗೆ ತಿಳಿಸಿಕೊಟ್ಟರು.

ಸಂಸ್ಥೆಯ ಉಪಾಧ್ಯಕ್ಷರಾದ ಸ.ರ. ಸುದರ್ಶನ, ಮುಖ್ಯ ಶಿಕ್ಷಕರುಗಳಾದ ಸೌಮ್ಯಶ್ರೀ ಹಾಗೂ ಶೀಲಾ, ಶಿಕ್ಷಕ - ಶಿಕ್ಷಕೇತರರು, ಮಕ್ಕಳು ಉಪಸ್ಥಿತರಿದ್ದರು.

ಅಮಾನತಾಗಿರುವ ಪೊಲೀಸ್ ಸಿಬ್ಬಂದಿಗೆ ಮುಖ್ಯಮಂತ್ರಿ ಪದಕ!

ಪೊಲೀಸ್ ಇಲಾಖೆಯ ಪಾವಿತ್ರ್ಯತೆ ಬಗ್ಗೆ ವಿಪಕ್ಷಗಳ ಗೇಲಿ

ಮೈಸೂರು, ಆ.16- ಕರ್ತವ್ಯಲೋಪದಡಿ ಅಮಾನತ್ತಿನಲ್ಲಿರುವ ಮೈಸೂರಿನ ಪೊಲೀಸ್ ಸಿಬ್ಬಂದಿಯೊಬ್ಬರಿಗೆ ಮುಖ್ಯಮಂತ್ರಿ ಪದಕ ಘೋಷಣೆಯಾಗಿರುವುದು ಭಾರೀ ಚರ್ಚೆಗೆ ಗ್ರಾಸವಾಗಿದೆ.

ಮೈಸೂರು ನಗರ ಸಿಸಿಬಿ ಘಟಕದ ಮುಖ್ಯ ಪೇದೆ ಸಲೀಂ ಪಾಷಾ ತಿಂಗಳ ಹಿಂದೆ ಅಮಾನತ್ತಾಗಿದ್ದು, ಇವರಿಗೆ ಈ ಬಾರಿಯ ಸ್ವಾತಂತ್ರ್ಯೋತ್ಸವದ ಹಿನ್ನೆಲೆಯಲ್ಲಿ ಮುಖ್ಯಮಂತ್ರಿ ಪದಕ ಘೋಷಿಸಿ, ಸರ್ಕಾರ ಪ್ರಶಂಸಿಸಿದೆ.

ಸ್ವಾತಂತ್ರ್ಯ ದಿನಾಚರಣೆ ಪ್ರಯುಕ್ತ ಉತ್ತಮ ಸೇವೆ ಸಲ್ಲಿಸಿದ ಪೊಲೀಸ್ ಅಧಿಕಾರಿಗಳು ಮತ್ತು ಸಿಬ್ಬಂದಿಗೆ ರಾಜ್ಯ ಸರ್ಕಾರದಿಂದ ಮುಖ್ಯಮಂತ್ರಿ ಪದಕ ನೀಡಲಾಗಿದೆ. ಈ ಪಟ್ಟಿಯಲ್ಲಿ ಅಪರಾಧ ಪ್ರಕರಣಗಳಲ್ಲಿ ಆರೋಪಿಗಳ ಜತೆ ಸಂಪರ್ಕ ಹೊಂದುವ ಮೂಲಕ ಸಾರ್ವಜನಿಕರ ಆಸ್ತಿ ಕಳುವಿಗೆ ಪರೋಕ್ಷ ಸಹಾಯ ಮಾಡಿದ ಆರೋಪದಡಿ ಅಮಾನತಾಗಿರುವ ಸಲೀ ಪಾಷಾ ಹೆಸರಿರುವುದು ಪೊಲೀಸ್ ಇಲಾಖೆಯ ಬಗ್ಗೆ ಸಾರ್ವಜನಿಕರಲ್ಲಿ ಅನುಮಾನ ಹುಟ್ಟಿಸಿದೆ.


ಸಲೀಂ ಪಾಷಾ

ಮುಖ್ಯಮಂತ್ರಿಗಳ ಪದಕ ಪಡೆಯಬೇಕಿದ್ದಲ್ಲಿ ಸಾಕಷ್ಟು ಹಂತಗಳಿವೆ. ಹಿರಿಯ ಅಧಿಕಾರಿಗಳ ಶಿಫಾರಸು ಅಗತ್ಯವಿದೆ. ಹೀಗಿದ್ದರೂ ಪದಕ ಪಡೆಯುವಲ್ಲಿ ಅರ್ಹತೆ ಪಡೆದಿರುವುದು ಇಡೀ ವ್ಯವಸ್ಥೆಯನ್ನು ಅನುಮಾನದಿಂದ ನೋಡುವಂತಾಗಿದೆ. 2023ನೇ ಸಾಲಿನ ಕರ್ತವ್ಯದ ಆಧಾರದಲ್ಲಿ ಈ ಬಾರಿಯ ಪ್ರಶಸ್ತಿ ಘೋಷಣೆ ಮಾಡಲಾಗಿರುತ್ತದೆ. ಹಾಗೆಯೇ ಸಲೀಂ ಪಾಷಾ ಅವರಿಗೂ ಪ್ರಶಸ್ತಿ ಸಿಕ್ಕಿರಬಹುದು ಎನ್ನಲಾಗಿದೆ. ಆದರೂ ಸಲೀಂ ಪಾಷಾ ಅವರ ಹೆಸರನ್ನು ಮುಖ್ಯಮಂತ್ರಿ ಪದಕಕ್ಕೆ ಶಿಫಾರಸ್ಸು ಮಾಡಿದ ನಂತರ ಅವರು ಅಮಾನತ್ತಾಗಿರುವ ಬಗ್ಗೆ ಸರ್ಕಾರಕ್ಕೆ ಮಾಹಿತಿ ನೀಡಿದ್ದರೆ ಮುಜುಗರ ತಪ್ಪುತ್ತಿತ್ತು.

ಈ ವಿಚಾರವಾಗಿ ಮೈಸೂರು ನಗರ ಪೊಲೀಸ್ ಆಯುಕ್ತರಾದ ಸೀಮಾ ಲಾಟ್ಕರ್ ಅವರು ಪ್ರತಿಕ್ರಿಯೆ ನೀಡಲು ನಿರಾಕರಿಸಿದರು. ಆದರೆ ಈ ವಿಚಾರವನ್ನು ಮುಂದಿಟ್ಟುಕೊಂಡು ವಿಪಕ್ಷಗಳು ಕಾಂಗ್ರೆಸ್ ಸರ್ಕಾರದ ವಿರುದ್ಧ ವಾಗ್ದಾಳಿ ನಡೆಸಿವೆ.

ಈ ಕುರಿತು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಪ್ರತಿಕ್ರಿಯಿಸಿದ್ದು, 'ಕೆಲ ಅನಾಮಧೇಯಗಳನ್ನು ಕಂಡರೆ ಈ ಕಾಂಗ್ರೆಸ್ ಸರ್ಕಾರ ಕಣ್ಣು ಮುಚ್ಚಿಕೊಳ್ಳುತ್ತದೆ. ಅಪರಾಧಿಯಾಗಿದ್ದರೂ ಸರಿ, ಕಳ್ಳರಾಗಿದ್ದರೂ ಸರಿ, ಕೊನೆಗೆ ಭಯೋತ್ಪಾದಕರಾದರೂ ಸರಿ, ಅವರ ಬಗೆಗಿನ ಕಾಳಜಿಯಲ್ಲಿ ರಾಜೀ ಮಾಡಿಕೊಳ್ಳುವ ಪ್ರಶ್ನೆಯೇ ಇಲ್ಲ ಎನ್ನುವುದನ್ನು ಸಾಬೀತುಪಡಿಸುವ ರೀತಿಯಲ್ಲಿ ಸ್ವಾತಂತ್ರ್ಯೋತ್ಸವದ ಸಂದರ್ಭದಲ್ಲಿ ಕೊಡ ಮಾಡುವ 'ಮುಖ್ಯಮಂತ್ರಿಗಳ ಪದಕ' ಪಟ್ಟಿಯಲ್ಲಿ ಮೈಸೂರಿನ ಅಮಾನತ್ತಿಗೊಳಗಾದ ಪೊಲೀಸ್ ಪೇದೆಯೊಬ್ಬರ ಹೆಸರು ಪ್ರಕಟವಾಗಿದೆ.' ಎಂದು ತಮ್ಮ ಎಕ್ಸ್ ಖಾತೆಯಲ್ಲಿ ವಾಗ್ದಾಳಿ ನಡೆಸಿದ್ದಾರೆ.

ಸಂದೇಶ್ ನಾಗರಾಜ್ ಅವರಿಗೆ ಹುಟ್ಟುಹಬ್ಬದ ಅಭಿನಂದನೆ



ಮೈಸೂರಿನ ಸಂಗೊಳ್ಳಿ ರಾಯಣ್ಣ ಹಿತ ರಕ್ಷಣಾ ಸಮಿತಿ ವತಿಯಿಂದ ಉದ್ಯಮಿಯೂ ಆದ ವಿಧಾನ ಪರಿಷತ್ ಮಾಜಿ ಸದಸ್ಯ ಸಂದೇಶ್ ನಾಗರಾಜ್ ಅವರಿಗೆ ಶುಭ ಕೋರಲಾಯಿತು. ಈ ವೇಳೆ ಸಂದೇಶ್, ಮಂಜೇಶ್, ರವಿ, ಕುರುಬರಹಳ್ಳಿ ಮಂಜು, ಕುರುಬರಹಳ್ಳಿ ಪ್ರಕಾಶ್, ಸೋಮು, ಎಂ.ಮಹದೇವು, ಪ್ರಭಾಕರ್, ಸುರೇಶ್, ಕ್ಯಾಂಟೀನ್ ರವಿ, ಚಂದ್ರಶೇಖರ್, ರಮೇಶ್‌ಗೌಡ, ಚಂದ್ರ, ಧನಂಜಯ, ಎಂ.ಕೆ.ಮಂಜು, ಚೇತನ್ ಇನ್ನಿತರರಿದ್ದರು.



ಹೆಚ್.ಡಿ.ಕೋಟೆ ತಾಲೂಕು ಸಂದೇಶ್ ನಾಗರಾಜ್ ಅಭಿಮಾನಿಗಳ ಸಂಘದ ಅಧ್ಯಕ್ಷ ನಿಂಗೇಗೌಡ, ಮುಖಂಡರಾದ ಸತೀಶ್, ಅವರು ವಿಧಾನ ಪರಿಷತ್ ಮಾಜಿ ಸದಸ್ಯ ಸಂದೇಶ್ ನಾಗರಾಜ್ ಅವರನ್ನು ಅವರ ಹುಟ್ಟುಹಬ್ಬದ ಹಿನ್ನೆಲೆಯಲ್ಲಿ ಅಭಿನಂದಿಸಿದರು. ಈ ವೇಳೆ ಮಾದೇಗೌಡ, ರಾಜೇಶ್, ಸಂದೇಶ್ ನಾಗರಾಜ್ ಅವರ ಆಪ್ತ ಸಹಾಯಕ ಪ್ರಭು ಇನ್ನಿತರರು ಉಪಸ್ಥಿತರಿದ್ದರು.



ಮೈಸೂರಿನ ಹೋಟೆಲ್ ಮಾಲೀಕರ ಸಂಘದಿಂದ ಮೈಸೂರಿನ ಹಿರಿಯ ಹೋಟಲ್ ಉದ್ಯಮಿ, ಚಲನಚಿತ್ರ ನಿರ್ಮಾಕರು ಹಾಗು ವಿದಾನ ಪರಿಷತ್ ಮಾಜಿ ಸದಸ್ಯರಾದ ಸಂದೇಶ್ ನಾಗರಾಜು ಅವರಿಗೆ ಹುಟ್ಟು ಹಬ್ಬ ಹಾಗು ವರ ಮಹಾಲಕ್ಷ್ಮಿ ಹಬ್ಬದ ಶುಭಾಶಯಗಳನ್ನು ಕೋರಲಾಯಿತು. ಕಾರ್ಯಕ್ರಮದಲ್ಲಿ ಹೋಟಲ್ ಮಾಲೀಕರ ಸಂಘದ ಅಧ್ಯಕ್ಷ ಸಿ.ನಾರಾಯಣಗೌಡ , ಯುವರಾಜ ಸಿಲ್ಕ್ಸ್ ಮಾಲೀಕ ಹಾಗು ಹೋಟಲ್ ಉದ್ಯಮಿ ಯುವರಾಜ್, ಸಂಘದ ಸದಸ್ಯ ಎ.ಸಿ. ರವಿ ಇನ್ನಿತರರು ಉಪಸ್ಥಿತರಿದ್ದರು.

ಶ್ರೀ ವಿವೇಕ ಬಾಲೋದ್ಯಾನ ಪಬ್ಲಿಕ್ ಸ್ಕೂಲ್‌ನಲ್ಲಿ ಸ್ವಾತಂತ್ರ್ಯ ದಿನಾಚರಣೆ



ಮೈಸೂರು,ಆ.16- ಮೈಸೂರು ಜಯನಗರ ಶ್ರೀ ವಿವೇಕ ಬಾಲೋದ್ಯಾನ ಪಬ್ಲಿಕ್ ಸ್ಕೂಲ್‌ನಲ್ಲಿ 78ನೇ ಸ್ವಾತಂತ್ರ್ಯ ದಿನಾಚರಣೆಯನ್ನು ಸಂಭ್ರಮ ಸಡಗರದಿಂದ ಆಚರಿಸಲಾಯಿತು.

ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಭಾರತೀಯ ಸೇನೆ ಮಾಜಿ ಕರ್ನಲ್ ಗೋಕುಲ ಅವರು ಧ್ವಜಾರೋಹಣ ನೆರವೇರಿಸಿ, ಮಾತನಾಡಿ ಕಲಿಕೆ ಎಂಬುದು ಒಂದು ನಿರಂತರವಾದ ಪ್ರಕ್ರಿಯೆಯಾಗಿದೆ. ಜೀವನದ ಪ್ರತಿಕ್ಷಣವೂ ನಾವು ಕಲಿಯುತ್ತಲೇ ಇರುತ್ತೇವೆ. ಈ ಕಲಿಕೆಗೆ ಅನೇಕ ಪ್ರೇರಣೆಗಳು ತುಂಬಾ ಅವಶ್ಯಕ ಅವುಗಳಲ್ಲಿ ನೈತಿಕ ಪ್ರೇರಣೆ, ಆಧ್ಯಾತ್ಮಿಕ ಪ್ರೇರಣೆ ಹಾಗೂ ಕಲಾತ್ಮಕತೆ ಇವು ಬಹಳ ಮುಖ್ಯವಾಗಿ ಬೇಕಾಗುತ್ತದೆ. ಹಾಗೆಯೆ ಒಳ್ಳೆಯ ಆರೋಗ್ಯ, ಒಳ್ಳೆಯ ವೈಜ್ಞಾನಿಕ ತಿಳುವಳಿಕೆ ಎಲ್ಲಕ್ಕಿಂತ ಮುಖ್ಯವಾಗಿ ರಾಜಕೀಯ ಜ್ಞಾನ ತುಂಬಾ ಅವಶ್ಯಕವಾಗಿ ಬೇಕಾಗುತ್ತದೆ ಎಂದರು.

ಆಡಳಿತ ಮಂಡಳಿಯ ಕಾರ್ಯದರ್ಶಿ ಎಂ.ಎಸ್.ನಾಗೇಶ್ ಮಾತನಾಡಿ, ಜಗತ್ತು ಬದಲಾಗಬೇಕು ಎನ್ನುವವರು ಮೊದಲು ತಮ್ಮಿಂದಲೇ ಬದಲಾವಣೆಯಾಗಬೇಕು ಎಂಬುದನ್ನು ಅರಿತುಕೊಳ್ಳಬೇಕು ಎಂದರು.

ಅಧ್ಯಕ್ಷತೆಯನ್ನು ವಹಿಸಿದ್ದ ಶಾಲೆಯ ಆಡಳಿತ ಮಂಡಳಿ ಅಧ್ಯಕ್ಷ ವಾಸುದೇವ ರಾವ್ ಅರೂರು ರವರು ಮಾತನಾಡಿದರು. ಆಡಳಿತ ಮಂಡಳಿಯ ಉಪಾಧ್ಯಕ್ಷ ಬಿ.ಎನ್. ಪ್ರಭಾಕರ್, ಖಜಾಂಚಿ ಎಚ್.ಎಸ್. ಶಿವಶಂಕರ್, ಮುಖ್ಯ ಆಡಳಿತ ಅಧಿಕಾರಿ ಶ್ರೀಮತಿ ಭವಾನಿ ನಾಗೇಶ್, ಪ್ರಾಂಶುಪಾಲ ಡಾ. ಎನ್. ಭಾರತೀಶಂಕರ್ ಉಪಸ್ಥಿತರಿದ್ದರು.

ಮಕ್ಕಳಿಂದ ದೇಶಭಕ್ತಿಯ ಸಾಮೂಹಿಕ ಗೀತ ಗಾಯನ, ವರ್ಣ ರಂಜಿತ ಸಾಮೂಹಿಕ ನೃತ್ಯ ಹಾಗೂ ಪಥಸಂಚಲನ ಕಾರ್ಯಕ್ರಮಗಳು ನಡೆದವು. ಪ್ರಾಂಶುಪಾಲ ಡಾ.ಎನ್. ಭಾರತೀಶಂಕರ್ ಸ್ವಾಗತಿಸಿದರೆ, ಶಿಕ್ಷಕಿ ಕುಮಾರಿ ಶುಭಾಂಕರ ವಂದನಾರ್ಪಣೆ ಮಾಡಿದರು.

ಶಾಸಕ ಹರೀಶ್‌ಗೌಡರಿಂದ ಹೊಲಿಗೆ ಯಂತ್ರ ವಿತರಣೆ



ಮೈಸೂರು, ಆ.16(ಎಂಕೆ)- ಮೈಸೂರಿನ ವಾರ್ಡ್ ನಂ.4ರ ಹೆಬ್ಬಾಳಿನ 60 ಅಡಿ ರಸ್ತೆಯಲ್ಲಿರುವ ಪಾಲಿಕೆ ಸಮುದಾಯ ಭವನದಲ್ಲಿ 78 ಮಂದಿ ಮಹಿಳೆಯರಿಗೆ ಹೊಲಿಗೆ ಯಂತ್ರ ವಿತರಣೆ ಮಾಡಲಾಯಿತು. ನಗರಪಾಲಿಕೆ ವತಿಯಿಂದ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಶಾಸಕ ಕೆ.ಹರೀಶ್‌ಗೌಡ, ಫಲಾನುಭವಿ ಮಹಿಳೆಯರಿಗೆ ಹೊಲಿಗೆ ಯಂತ್ರ ವಿತರಣೆ ಮಾಡಿದರು. ಬಳಿಕ ಮಾತನಾಡಿದ ಅವರು, ಮಹಿಳೆಯರು ಸ್ವಾವಲಂಬಿಗಳಾಗಿ ಜೀವನ ಕಟ್ಟಿಕೊಳ್ಳಲು ಟೈಲರಿಂಗ್ ಉತ್ತಮ ಪರ್ಯಾಯ ಮಾರ್ಗವಾಗಿದೆ. ಸರ್ಕಾರ ಗ್ಯಾರಂಟಿ ಯೋಜನೆಗಳ ಜೊತೆಗೆ ಟೈಲರಿಂಗ್ ಇನ್ನಿತರೆ ಸ್ವಯಂ ಉದ್ಯೋಗಗಳ ಮೂಲಕ ಮಹಿಳೆಯರ ಸಬಲೀಕರಣ ಸಾಧ್ಯ ಎಂದು ತಿಳಿಸಿದರು.

ನಗರಪಾಲಿಕೆ ಮಾಜಿ ಸದಸ್ಯ ಪೈಲ್ವಾನ್ ಶ್ರೀನಿವಾಸ್, ಸ್ಥಳೀಯ ಮುಖಂಡರಾದ ಜಯರಾಮೇಗೌಡ, ವಿಕ್ರಾಂತ್ ಕೃಷ್ಣ, ದಂಡಪಾಣಿ, ಅಪ್ಪಾಜಿಗೌಡ, ಅನಿಲ್, ರಾಮೇಗೌಡ, ತಿಮ್ಮೇಗೌಡ, ಎಲೆಕ್ಟ್ರಿಕ್ ಪ್ರಕಾಶ್, ಚಂದ್ರಪ್ಪ, ದಿನೇಶ್, ರಘು, ಗಂಗಾಧರ್‌ಗೌಡ ಮತ್ತಿತರರು ಉಪಸ್ಥಿತರಿದ್ದರು.



ಮೈಸೂರಿನ ವಿಶ್ವೇಶ್ವರನಗರದ ಸಾಯಿ ಬೃಂದಾವನ ಅಪಾರ್ಟ್‌ಮೆಂಟ್‌ನಲ್ಲಿ ಗುರುವಾರ ನಡೆದ 78 ನೇ ಸ್ವಾತಂತ್ರ್ಯ ದಿನಾಚರಣೆ ಕಾರ್ಯಕ್ರಮದಲ್ಲಿ ನಿವೃತ್ತ ಏರ್ ವಿಂಗ್ ಕಮಾಂಡರ್ ವಿ.ರಮೇಶ್ ಧ್ವಜಾರೋಹಣ ನೆರವೇರಿಸಿದರು. ಅಪೋಲೊ ಆಸ್ಪತ್ರೆ ವೈದ್ಯ ಡಾ.ನಾರಾಯಣ ಹೆಗಡೆ, ಮಾಜಿ ಕಾರ್ಪೊರೇಟರ್ ಬಿ.ವಿ.ಮಂಜುನಾಥ್, ಅಪಾರ್ಟ್ಮೆಂಟ್ ನಿವಾಸಿಗಳ ಸಂಘದ ಅಧ್ಯಕ್ಷ ಆರ್.ಗಿರೀಶ್ ಹಾಗೂ ಇತರರನ್ನು ಚಿತ್ರದಲ್ಲಿ ಕಾಣಬಹುದು



ಸ್ವಾತಂತ್ರ್ಯ ದಿನಾಚರಣೆಯ ಅಂಗವಾಗಿ ಮೈಸೂರು ನಗರ ಬಿಜೆಪಿ ಎಸ್.ಟಿ.ಮೋರ್ಚಾ ವತಿಯಿಂದ ಗಾಂಧಿಚೌಕದಲ್ಲಿರುವ ವೃತ್ತದಲ್ಲಿರುವ ಮಹಾತ್ಮ ಗಾಂಧಿಯವರ ಪ್ರತಿಮೆ ಸ್ವಚ್ಛಗೊಳಿಸಿ ಮಾಲಾರ್ಪಣೆ ಮಾಡಲಾಯಿತು. ಅಧ್ಯಕ್ಷ ಪಡುವಾರಹಳ್ಳಿಯ ಎಂ ರಾಮಕೃಷ್ಣ, ಉಪಾಧ್ಯಕ್ಷ ಟೆನ್ನಿಸ್ ಗೋಪಿ, ಪ್ರಧಾನ ಕಾರ್ಯದರ್ಶಿ ನಾರಾಯಣ ಲೋಲಪ್ಪ, ಕೃಷ್ಣನಾಯಕ, ಭಾನುಪ್ರಕಾಶ್, ಎಸ್,ತ್ಯಾಗರಾಜ, ಲೋಕೇಶ್ ಜಯಸಿಂಹ,ಎಂ ಮಹೇಶ್, ಜಗದೀಶ್ ಬಾಲರಾಜು, ಸಿದ್ದರಾಜು, ನಂದೀಶ್, ಎಂ.ಮಹೇಶ್, ಗಜ ಮತ್ತಿತರರು ಉಪಸ್ಥಿತರಿದ್ದರು.

ದೇಶ - ವಿದೇಶ

ಸೆಪ್ಟೆಂಬರ್‌ನಲ್ಲಿ ಜಪಾನ್ ಪ್ರಧಾನಿ ಕಿಶಿದಾ ರಾಜೀನಾಮೆ

ಟೋಕಿಯೋ, ಆ.16- ಜಪಾನ್ ಪ್ರಧಾನಿ ಫುಮಿಯೋ ಕಿಶಿದಾ ತಮ್ಮ ಸ್ಥಾನಕ್ಕೆ ಸೆಪ್ಟೆಂಬರ್‌ನಲ್ಲಿ ರಾಜೀನಾಮೆ ನೀಡಲಿದ್ದಾರೆ. ಹಗರಣಗಳು ಹಾಗೂ ಬೆಲೆ ಏರಿಕೆಯ ನಡುವೆ ಪ್ರಧಾನಿ ಹುದ್ದೆಯಲ್ಲಿ ಕಿಶಿದಾ 3 ವರ್ಷಗಳ ಕಾಲ ಪ್ರಧಾನಿಯಾಗಿದ್ದಾರೆ.



ಕಿಶಿದಾಗೆ ಸಾರ್ವಜನಿಕ ಬೆಂಬಲ ಕ್ಷೀಣಿಸುತ್ತಿದ್ದು, ಮರು ಚುನಾವಣೆ ಬಯಸದಿರಲು ಲಿಬರಲ್ ಡೆಮಾಕ್ರೆಟಿಕ್ ಪಕ್ಷದ (ಎಲ್‌ಡಿಪಿ) ನಾಯಕ ನಿರ್ಧರಿಸಿದ್ದಾರೆ ಎಂದು ಸಾರ್ವಜನಿಕ ಪ್ರಸಾರಕ NHK ಸೇರಿದಂತೆ ಜಪಾನಿನ ಮಾಧ್ಯಮವು ಹಿರಿಯ ಆಡಳಿತ ಸಿಬ್ಬಂದಿಯನ್ನು ಉಲ್ಲೇಖಿಸಿ ವರದಿ ಮಾಡಿದೆ. LDP ವಕ್ತಾರರು ಈ ವರದಿಯ ಬಗ್ಗೆ ಪ್ರತಿಕ್ರಿಯಿಸಲು ನಿರಾಕರಿಸಿದ್ದಾರೆ. ಕಿಶಿದಾ ಅವರು ಪದವಿ ತ್ಯಜಿಸುವ ನಿರ್ಧಾರ, ಪಕ್ಷದ ಮುಖ್ಯಸ್ಥರ ಸ್ಥಾನಕ್ಕೆ ಮತ್ತು ವಿಶ್ವದ ನಾಲ್ಕನೇ ಅತಿದೊಡ್ಡ ಆರ್ಥಿಕತೆಗೆ ಹೊಸ ನಾಯಕನ ಆಯ್ಕೆ ಮಾಡಲು ಸ್ಪರ್ಧೆಯನ್ನು ಉಂಟುಮಾಡಲಿದೆ LDP ಆಯ್ಕೆ ಮಾಡುವ ಕಿಶಿದಾ ಉತ್ತರಾಧಿಕಾರಿಗೆ ಜೀವನ ವೆಚ್ಚದಲ್ಲಿ ಹೆಚ್ಚಳ, ಭೌಗೋಳಿಕ ರಾಜಕೀಯ ಉದ್ವಿಗ್ನತೆಗಳು ಸವಾಲಿನ ಸಂಗತಿಯಾಗಿರಲಿದೆ

ಕೊಲ್ಕತ್ತಾದಲ್ಲಿ ವೈದ್ಯೆ ಮೇಲೆ ಅತ್ಯಾಚಾರ, ಹತ್ಯೆ: ಕಾಲೇಜು ಮಾಜಿ ಪ್ರಾಂಶುಪಾಲನಿಗೆ ಸಿಬಿಐ ಸಮನ್ಸ್


ಕೊಲ್ಕತ್ತಾ, ಆ.16- ಕೊಲ್ಕತ್ತಾದ ಆರ್‌ಜಿ ಕರ್ ವೈದ್ಯಕೀಯ ಆಸ್ಪತ್ರೆ ಮತ್ತು ಕಾಲೇಜಿನಲ್ಲಿ ಪ್ರಶಿಕ್ಷಣಾರ್ಥಿ ವೈದ್ಯೆಯ ಅತ್ಯಾಚಾರ ಮತ್ತು ಕೊಲೆಯಾದ ಕೆಲವು ದಿನಗಳ



ನಂತರ, ಸಂಸ್ಥೆಯ ಮಾಜಿ ಪ್ರಾಂಶುಪಾಲ ಸಂದೀಪ್ ಘೋಷ್‌ಗೆ ಸಿಬಿಐ ಅಧಿಕಾರಿಗಳು ಸಮನ್ಸ್ ನೀಡಿ ಅವರನ್ನು ಕೋಲ್ಕತ್ತಾದ ಸಿಬಿಓನಲ್ಲಿರುವ ಸಿಬಿಐ ಕಚೇರಿಗೆ ಕರೆದೊಯ್ದಿದ್ದಾರೆ. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಆರ್‌ಜಿ ಕರ್ ಮೆಡಿಕಲ್ ಕಾಲೇಜು ಮತ್ತು ಆಸ್ಪತ್ರೆಯಲ್ಲಿ ವಿಧ್ವಂಸಕ ಕೃತ್ಯದ ಪ್ರಕರಣವನ್ನು ಕೊಲ್ಕತ್ತಾ ಹೈಕೋರ್ಟ್ ಸ್ವಯಂಪ್ರೇರಿತವಾಗಿ ವಿಚಾರಣೆಗೆ ತೆಗೆದುಕೊಂಡಿತ್ತು. ಜೊತೆಗೆ ಪ್ರಕರಣದ ತನಿಖೆಯನ್ನು ನ್ಯಾಯಾಲಯ ಸಿಬಿಐಗೆ ವಹಿಸಿತು. ಈ ಪ್ರಕರಣವನ್ನು ಕೊಲ್ಕತ್ತಾ ಹೈಕೋರ್ಟ್ ಸಿಬಿಐಗೆ ವಹಿಸಿದ ಕೆಲವೇ ಗಂಟೆಗಳಲ್ಲಿ ಸಿಬಿಐ ಅಧಿಕಾರಿಗಳು ಮಾಜಿ ಪ್ರಾಂಶುಪಾಲ ಸಂದೀಪ್ ಘೋಷ್‌ಗೆ ಸಮನ್ಸ್ ನೀಡಿ ಅವರನ್ನು ಕೊಲ್ಕತ್ತಾದ ಸಿಬಿಐ ಕಚೇರಿಗೆ ಕರೆದೊಯ್ದಿರುವುದು ಕುತೂಹಲ ಮೂಡಿಸಿದೆ.

116 ರಾಷ್ಟ್ರಗಳಲ್ಲಿ ಮಂಕಿಪಾಕ್ಸ್; ವಿಶ್ವ ಆರೋಗ್ಯ ಸಂಸ್ಥೆ ಹೈ ಅಲರ್ಟ್

ಇಸ್ಲಾಮಾಬಾದ್: ನೆರೆಯ ಪಾಕಿಸ್ತಾನ ಮತ್ತು ಸ್ವೀಡನ್ ಮಾತ್ರವಲ್ಲದೆ 116 ರಾಷ್ಟ್ರಗಳಲ್ಲಿ ಮಂಕಿ ಪಾಕ್ಸ್ (ಮಂಗನ ಕಾಯಿಲೆ) ಹರಡಿದೆ ಇವೆರಡು ದೇಶಗಳಲ್ಲಿ ಪ್ರಕರಣಗಳು ವರದಿಯಾಗಿದ್ದು, ವಿಶ್ವದೆಲ್ಲೆಡೆ ಆತಂಕ ಸೃಷ್ಟಿಸಿದೆ.



ಆಫ್ರಿಕಾ ದೇಶಗಳಲ್ಲಿ ಅಲ್ಲೋಲ ಕಲ್ಲೋಲ ಸೃಷ್ಟಿಸಿದ ಈ ವೈರಸ್ ಇತ್ತೀಚೆಗೆ ಇತರ ಎರಡು ದೇಶಗಳಲ್ಲಿ ಮಂಗನ ಕಾಯಿಲೆಯ ಪ್ರಕರಣಗಳು ವರದಿಯಾಗಿವೆ ಎಂದು ಅಧಿಕಾರಿಗಳು ಖಚಿತಪಡಿಸಿದ್ದಾರೆ. ಪಾಕಿಸ್ತಾನದಲ್ಲಿ ಮೂವರಿಗೆ ಮಂಕಿ ಪಾಕ್ಸ್ ಸೋಂಕು ತಗುಲಿದೆ ಎಂದು ಪಾಕಿಸ್ತಾನದ ಆರೋಗ್ಯ ಸಚಿವಾಲಯ ಬಹಿರಂಗಪಡಿಸಿದೆ. ರೋಗಪೀಡಿತರು ಆ.3 ರಂದು ಸೌದಿ ಅರೇಬಿಯಾದಿಂದ ಬಂದಿದ್ದರು. ಪೇಶಾವರದ ಖೈಬರ್ ವೈದ್ಯಕೀಯ ವಿಶ್ವವಿದ್ಯಾಲಯವು ಪರೀಕ್ಷೆ ನಂತರ ಮಂಕಿಪಾಕ್ಸ್ ಇರುವುದನ್ನು ದೃಢಪಡಿಸಿದೆ.

ಈ ಹಿನ್ನೆಲೆಯಲ್ಲಿ ವಿಶ್ವ ಆರೋಗ್ಯ ಸಂಸ್ಥೆ(WHO) ಆರೋಗ್ಯ ತುರ್ತು ಪರಿಸ್ಥಿತಿ ಘೋಷಿಸಿದೆ. ಸ್ವೀಡನ್ ನಂತರ ಶೀಘ್ರದಲ್ಲೇ ಯುರೋಪ್‌ನಲ್ಲಿ ಹೆಚ್ಚಿನ ಪ್ರಕರಣಗಳು ವರದಿಯಾಗುವ ಅಪಾಯವಿದೆ ಎಂದು ವಿಶ್ವ ಆರೋಗ್ಯ ಸಂಸ್ಥೆ ಎಚ್ಚರಿಸಿದೆ.

ಹುಡುಗಿ ಸಿಗದೇ ಕುಕ್ಕರನ್ನು ಮದುವೆಯಾದ ಯುವಕ!

ಇಂಡೋನೇಷ್ಯಾ, ಆ.16- ಇಂಡೋನೇಷ್ಯಾದ ಯುವಕನೊಬ್ಬನ ವಿಶಿಷ್ಟ ವಿವಾಹವೊಂದು ಇದೀಗ ಸಾಮಾಜಿಕ ಮಾಧ್ಯಮದಲ್ಲಿ ಭಾರೀ ಚರ್ಚೆಗೆ ಕಾರಣವಾಗಿದೆ. ಅಸಲಿಗೆ,



ಈ ಯುವಕ ಹುಡುಗಿಯನ್ನು ಮದುವೆಯಾಗಿಲ್ಲ ಆದರೆ ಕುಕ್ಕರ್ ಅನ್ನು ಮದುವೆಯಾಗಿದ್ದಾನೆ.

ಈ ಯುವಕನ ಮದುವೆಯ ಫೋಟೊಗಳು ಅಂತರ್ಜಾಲದಲ್ಲಿ ವೈರಲ್ ಆಗುತ್ತಿದೆ. ಮಧುಮಗ ಬಿಳಿ ಉಡುಪಿನಲ್ಲಿ ಕಾಣಿಸಿಕೊಂಡಿದ್ದು, ಕುಕ್ಕರ್‌ನ ಮೇಲ್ಭಾಗಕ್ಕೆ ಹುಡುಗಿಯಂತೆ ಶಾಲು ಹೊದಿಸಿ, ಮುತ್ತಿಡುತ್ತಿರುವುದು ಫೋಟೋದಲ್ಲಿ ಸೆರೆಯಾಗಿದೆ. ಈ ಯುವಕ ಖೋಯಿರುಲ್ ಅನಮ್ ಎಂದು ಗುರುತಿಸಲಾಗಿದ್ದು, ಸಾಕಷ್ಟು ವರ್ಷಗಳಿಂದ ಮದುವೆಯಾಗಲು ಹುಡುಗಿಯನ್ನು ಹುಡುಕುತ್ತಿದ್ದ. ಹುಡುಗಿ ಸಿಗದೇ ಬೇಸತ್ತು ಈಗ ಕುಕ್ಕರನ್ನೇ ತನ್ನ ಪತ್ನಿಯನ್ನಾಗಿ ಸ್ವೀಕರಿಸಿದ್ದಾನೆ.

ಆದರೆ ಮದುವೆಯಾಗಿ ನಾಲ್ಕೇ ದಿನದಲ್ಲಿ ಪತ್ನಿ ಅಂದರೆ ಕುಕ್ಕರ್‌ಗೆ ವಿಚ್ಛೇದನ ನೀಡಿರುವುದು ವರದಿಯಾಗಿದೆ. ನನ್ನ ಪತ್ನಿಗೆ ಅನ್ನ ಬೇಯಿಸುವುದು ಮಾತ್ರ ಸಾಧ್ಯ, ಬೇರೇನೂ ಗೊತ್ತಿಲ್ಲ, ಹೀಗಾಗಿ ವಿಚ್ಛೇದನ ನೀಡಿದ್ದೇನೆ ಎಂದು ಹೇಳಿಕೊಂಡಿದ್ದಾನೆ

ಅಫ್ಘಾನಿಸ್ತಾನದಲ್ಲಿ 14 ಲಕ್ಷ ಹೆಣ್ಣುಮಕ್ಕಳು ಶಿಕ್ಷಣ ವಂಚಿತ

ಕಾಬೂಲ್, ಆ.16- ಅಫ್ಘಾನಿಸ್ತಾನದ ತಾಲಿಬಾನ್ ಸರ್ಕಾರವು ಉದ್ದೇಶ ಪೂರ್ವಕವಾಗಿ 14 ಲಕ್ಷ ಹೆಣ್ಣುಮಕ್ಕಳನ್ನು ಶಾಲೆಗಳಿಂದ ಹೊರಗುಳಿಯುವಂತೆ ಮಾಡಿದೆ ಎಂದು ಯುನೆಸ್ಕೊ ಗುರುವಾರ ಹೇಳಿದೆ. ಹೆಣ್ಣುಮಕ್ಕಳು ಪ್ರೌಢ ಮತ್ತು ಉನ್ನತ ಶಿಕ್ಷಣ ಪಡೆಯುವುದಕ್ಕೆ ಅಫ್ಘಾನಿಸ್ತಾನದಲ್ಲಿ ನಿಷೇಧ ಹೇರಲಾಗಿದೆ.



2021ರಲ್ಲಿ ಅಫ್ಘಾನಿಸ್ತಾನದ ಆಡಳಿತವನ್ನು ತನ್ನ ಕೈವಶ ಮಾಡಿ ಕೊಂಡಿದ್ದ ತಾಲಿಬಾನ್, ಹೆಣ್ಣುಮಕ್ಕಳು ಆರನೇ ತರಗತಿಗಿಂತ ಹೆಚ್ಚಿನ ಶಿಕ್ಷಣ ಪಡೆಯುವುದನ್ನು ನಿಷೇಧಿಸಿತ್ತು. ಇದೀಗ ತಾಲಿಬಾನ್ ಆಡಳಿತ ಮೂರು ವರ್ಷ ಪೂರ್ಣ ಗೊಂಡಿದ್ದು, ಈ ನಿಷೇಧ ತೆರವುಗೊಳಿಸುವ ಯಾವುದೇ ಲಕ್ಷಣಗಳು ಗೋಚರಿಸುತ್ತಿಲ್ಲ. 2023ರ ಏಪ್ರಿಲ್ ಬಳಿಕ 3 ಲಕ್ಷ ಹೆಣ್ಣುಮಕ್ಕಳು ಒಳಗೊಂಡಂತೆ ತಾಲಿಬಾನ್ ಸಂಘಟನೆ ಅಧಿಕಾರ ವಹಿಸಿಕೊಂಡ ನಂತರ ಸುಮಾರು 14 ಲಕ್ಷ ಹೆಣ್ಣುಮಕ್ಕಳು ಪ್ರೌಢ ಶಾಲಾ ಶಿಕ್ಷಣ ಪಡೆಯುವ ಅವಕಾಶ ಕಳೆದುಕೊಂಡಿದ್ದಾರೆ ಎಂದು ಯುನೆಸ್ಕೊ ತಿಳಿಸಿದೆ. ಈ ನಿಷೇಧ ಜಾರಿಗೂ ಮುನ್ನ ಶಾಲೆಗಳಿಂದ ದೂರವುಳಿದವರನ್ನೂ ಸೇರಿಸಿಕೊಂಡರೆ, ಸುಮಾರು 25 ಲಕ್ಷ ಹೆಣ್ಣುಮಕ್ಕಳು ಶಿಕ್ಷಣದಿಂದ ವಂಚಿತರಾಗಿದ್ದಾರೆ.


ಸಣ್ಣಪುಲಿಕೋಟು ಗ್ರಾಮದಲ್ಲಿ ಅಕ್ರಮ ನಾಡ ಬಂದೂಕು ತಯಾರಿಸುತ್ತಿದ್ದ

ನಾಲ್ವರ ಬಂಧನ; 5 ಬಂದೂಕು, 1 ಪಿಸ್ತೂಲು ವಶ


ಕೋಟಿ


ಎಸ್.ರವಿ


ಎನ್.ಜಿ.ಶಿವರಾಮ್


ಸುರೇಶ್

> ಪ್ರಮುಖ ಆರೋಪಿ ಸುರೇಶ್ ಯಾರಿಗೆ ಎಷ್ಟು ವರ್ಷದಿಂದ ಬಂದೂಕು ಮಾರಾಟ ಮಾಡಿದ್ದಾನೆ. ಇದರ ಹಿಂದೆ ಯಾರಿದ್ದಾರೆ ಎಂದು ತನಿಖೆ ನಡೆಸಲಾಗುತ್ತಿದೆ. ಆರೋಪಿ ಸುರೇಶ್ 15 ವರ್ಷಗಳ ಹಿಂದೆ ಕೇರಳದಿಂದ ಕೊಡಗಿಗೆ ಆಗಮಿಸಿ, ಕರಿಕೆ ಮತ್ತು ಭಾಗಮಂಡಲ ವ್ಯಾಪ್ತಿಯಲ್ಲಿ ನೆಲೆಸಿದ್ದ. ಅಕ್ರಮ ಬಂದೂಕು ತಯಾರಿ ಮಾಹಿತಿ ದೊರೆತ ಹಿನ್ನೆಲೆಯಲ್ಲಿ ಏಪ್ರಿಲ್‌ನಿಂದ ಈತನ ಮೇಲೆ ನಿಗಾ ಇಡಲಾಗಿತ್ತು. ಮಾಲು ಸಹಿತ ಸುರೇಶ್‌ನನ್ನು ಬಂಧಿಸಲಾಗಿದೆ.
>
> –ಕೆ.ರಾಮರಾಜನ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ


ನಾಡ ಬಂದೂಕು, ಪಿಸ್ತೂಲು, ತಯಾರಿಕೆ ಪರಿಕರಗಳಾದ ನಳಿಕೆಗಳು, ಕಟ್ಟಿಂಗ್ ಮಿಷಿನ್, ಡ್ರಿಲ್ಲರ್, ಟ್ರಿಗರ್, ಸ್ಪ್ರಿಂಗ್ ವಶಪಡಿಸಿಕೊಂಡಿರುವುದು.

ಮಡಿಕೇರಿ, ಆ.16–ಅಕ್ರಮವಾಗಿ ನಾಡ ಬಂದೂಕುಗಳನ್ನು ತಯಾರಿಸುತ್ತಿದ್ದ ಮನೆಯೊಂದರ ಮೇಲೆ ದಾಳಿ ನಡೆಸಿದ ಭಾಗಮಂಡಲ ಠಾಣೆ ಪೊಲೀಸರು ನಾಲ್ವರನ್ನು ಬಂಧಿಸಿದ್ದು, 5 ನಾಡ ಬಂದೂಕು, 1 ನಾಡ ಪಿಸ್ತೂಲು, ಬಂದೂಕು ತಯಾರಿಕೆಗೆ ಒಳಸುತ್ತಿದ್ದ ಇತರ ವಸ್ತುಗಳನ್ನು ವಶಪಡಿಸಿಕೊಂಡಿದ್ದಾರೆ.

ಮೂಲತಃ ಕೇರಳದ ಇಡುಕ್ಕಿ ಜಿಲ್ಲೆಯ ಭಾಗಮಂಡಲ ಸಣ್ಣಪುಲಿಕೋಟು ಗ್ರಾಮದಲ್ಲಿ ನಿವಾಸಿರಾದ ಪ್ರಮುಖ ಆರೋಪಿ ಸುರೇಶ್(52), ಈತನಿಂದ ಅಕ್ರಮ ಬಂದೂಕು ಖರೀದಿಸಿದ್ದ ಕರಿಕೆ ಚೆತ್ತುಕಾಯ ಗ್ರಾಮದ ಎನ್.ಜಿ.ಶಿವರಾಮ್(45), ಪಿರಿಯಾಪಟ್ಟಣ ತಾಲೂಕಿನ ಮಾಗಳಿ ಗ್ರಾಮದ ಎಸ್.ರವಿ(35), ಭಾಗಮಂಡಲ ದೊಡ್ಡಪುಲಿಕೋಟು ಗ್ರಾಮದ ಕೋಟಿ(55)ಯನ್ನು ಬಂಧಿಸಲಾಗಿದೆ.

ಪ್ರಕರಣ ಹಿನ್ನೆಲೆ: ಭಾಗಮಂಡಲ ಪೊಲೀಸ್ ಠಾಣಾ ವ್ಯಾಪ್ತಿಯ ಸಣ್ಣಪುಲಿಕೋಟು ಗ್ರಾಮದ ಮನೆಯೊಂದರಲ್ಲಿ ಸುರೇಶ್ ಅಕ್ರಮವಾಗಿ ನಾಡ ಬಂದೂಕುಗಳನ್ನು ತಯಾರಿಸುತ್ತಿದ್ದು, ಆ.15ರಂದು ಪೊಲೀಸರು ಮನೆ ಮೇಲೆ ದಾಳಿ ನಡೆಸಿದ್ದಾರೆ. ಈ ವೇಳೆ 2 ನಾಡ ಬಂದೂಕು, 1 ನಾಡ ಪಿಸ್ತೂಲು, ಬಂದೂಕಿನ ನಳಿಕೆಗಳು, ಕಟ್ಟಿಂಗ್ ಮಿಷಿನ್, ಡ್ರಿಲ್ಲರ್, ಟ್ರಿಗರ್, ಸ್ಪ್ರಿಂಗ್ ಸಹಿತ ಬಂದೂಕು ತಯಾರಿಕೆಗೆ ಬಳಸುವ ಇತರ ಪರಿಕರಗಳು ಪತ್ತೆಯಾಗಿವೆ.

ನಂತರ ಆರೋಪಿ ಸುರೇಶ್‌ನನ್ನು ಬಂಧಿಸಿ, ವಿಚಾರಣೆಗೆ ಒಳಪಡಿಸಿದಾಗ ಅಕ್ರಮವಾಗಿ ತಯಾರಿಸಿದ್ದ ಬಂದೂಕುಗಳನ್ನು ಮಾರಾಟ ಮಾಡಿರುವ ವಿಚಾರವನ್ನು ಬಾಯ್ಬಿಟ್ಟಿದ್ದಾನೆ. ಮಾಹಿತಿ ಆಧರಿಸಿ ಬಂದೂಕು ಖರೀದಿಸಿದ್ದ ಇತರ 3 ಆರೋಪಿಗಳನ್ನು ಬಂಧಿಸಿ ನ್ಯಾಯಾಂಗ ವಶಕ್ಕೆ ಒಪ್ಪಿಸಲಾಗಿದೆ.

ಮಡಿಕೇರಿ ಡಿವೈಎಸ್‌ಪಿ ಮಹೇಶ್ ಕುಮಾರ್, ಗ್ರಾಮಾಂತರ ವೃತ್ತ ನಿರೀಕ್ಷಕ ಅನೂಪ್ ಮಾದಪ್ಪ, ಭಾಗಮಂಡಲ ಪೊಲೀಸ್ ಠಾಣಾಧಿಕಾರಿ ಶೋಭಾ ಲಾಮಾಣಿ ಮತ್ತು ಸಿಬ್ಬಂದಿ ಕಾರ್ಯಾಚರಣೆಯಲ್ಲಿ ಭಾಗವಹಿಸಿದ್ದರು.

ಹೊರ ರಾಜ್ಯದ ಕಾರ್ಮಿಕರ ಗುರುತಿನ ಚೀಟಿಯನ್ನು ಮಾಲೀಕರೇ ಸಂಗ್ರಹಿಸಬೇಕು

ಮಡಿಕೇರಿ, ಆ.16– ಕೊಡಗಿಗೆ ಬರುವ ಹೊರ ರಾಜ್ಯದ ಕಾರ್ಮಿಕರ ಗುರುತಿನ ಚೀಟಿಗಳನ್ನು ಜಿಲ್ಲೆಯ ಕಾಫಿ ತೋಟ, ಹೋಂ ಸ್ಟೇ ಹಾಗೂ ಇತರ ಮಾಲೀಕರೇ ಸಂಗ್ರಹಿಸಬೇಕು ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ.ರಾಮರಾಜನ್ ತಿಳಿಸಿದರು.


ಕೆ.ರಾಮರಾಜನ್

ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಇದೀಗ ಬಾಂಗ್ಲಾದಲ್ಲಿ ಸೃಷ್ಟಿಯಾಗಿರುವ ಅರಾಜಕತೆಯಿಂದ ಅಲ್ಲಿನ ಜನರು ಕೊಡಗಿಗೆ ಆಗಮಿಸುವ ಕುರಿತು ಸಾರ್ವಜನಿಕರು ಆತಂಕ ವ್ಯಕ್ತಪಡಿಸಿದ್ದಾರೆ. ಆದರೆ, ಬಾಂಗ್ಲಾ ಗಡಿಯಲ್ಲಿ ಭದ್ರತಾ ಪಡೆ, ಪೊಲೀಸ್ ಮತ್ತು ರಕ್ಷಣಾ ಇಲಾಖೆ ತಂಡಗಳು ಕಟ್ಟುನಿಟ್ಟಿನ ತಪಾಸಣೆ ಮತ್ತು ಪರಿಶೀಲನೆ ನಡೆಸುತ್ತಿವೆ. ಈ ಹಿನ್ನೆಲೆಯಲ್ಲಿ ಯಾರು ಕೂಡ ಗಡಿ ದಾಟಿ ಬರಲು ಸಾಧ್ಯವಿಲ್ಲ ಎಂದರು.

ಜಿಲ್ಲೆಯ ಕಾಫಿ ತೋಟಗಳು, ಹೋಂ ಸ್ಟೇ ಸಹಿತ ಇತರ ಕಡೆಗಳಿಗೆ ಅಸ್ಸಾಂ, ಮಣಿಪುರ, ಪಶ್ಚಿಮ ಬಂಗಾಳ ಸಹಿತ ಹೊರ ರಾಜ್ಯದಿಂದ ಕಾರ್ಮಿಕರು ಕೆಲಸಕ್ಕೆ ಬಂದಿದ್ದಾರೆ. ಕಾರ್ಮಿಕರ ಗುರುತಿನ ಚೀಟಿಗಳಾದ ಆಧಾರ್ ಕಾರ್ಡ್, ಮತದಾರರ ಗುರುತಿನ ಚೀಟಿ, ಬ್ಯಾಂಕ್ ದಾಖಲೆ, ಪ್ಯಾನ್‌ಕಾರ್ಡ್ ಸಹಿತ ಫೋಟೋವನ್ನು ಸಂಗ್ರಹಿಸಬೇಕು. ಇದರಿಂದ ಅಪರಾಧ ಪ್ರಕರಣಗಳಲ್ಲಿ ಭಾಗಿಯಾಗಿ ತಲೆಮರೆಸಿಕೊಂಡು ಇಲ್ಲಿ ಆಶ್ರಯ ಪಡೆದಿರುವುದು ಅಥವಾ ಜಿಲ್ಲೆಯಲ್ಲಿ ಅಪರಾಧ ಎಸಗಿ ಬೇರೆಡೆಗೆ ತೆರಳುವವರನ್ನು ಪತ್ತೆ ಹಚ್ಚಲು ಸಾಧ್ಯವಾಗುತ್ತದೆ. ಹೀಗಾಗಿ ಕೆಲಸಕ್ಕೆ ನೇಮಿಸಿಕೊಂಡ ಮಾಲೀಕರೇ ಕಾರ್ಮಿಕರ ಗುರುತಿನ ಚೀಟಿಗಳನ್ನು ಸಂಗ್ರಹಿಸಬೇಕು ಎಂದು ಸೂಚಿಸಿದರು.

ಕೆಲಸ ಮೂಲಭೂತ ಹಕ್ಕು: ಅಸ್ಸಾಂ, ಪಶ್ಚಿಮ ಬಂಗಾಳ, ಮಣಿಪುರ, ಮಿಜೋರಾಂ ಕಡೆಗಳಿಂದಲೂ ಕೆಲಸ ಅರಸಿಕೊಂಡು ಕಾರ್ಮಿಕರು ರಾಜ್ಯಕ್ಕೆ ಆಗಮಿಸುತ್ತಾರೆ. ಈ ವೇಳೆ ಅವರ ಮುಖ ಚಹರೆ, ವೇಷಭೂಷಣ ನೆರೆ ದೇಶದ ಜನರನ್ನು ಹೋಲುತ್ತದೆ ಎಂದು ಕೀಳಾಗಿ ಕಾಣಲಾಗುತ್ತಿದೆ. ಇದು ಸರಿಯಾದ ನಡೆಯಲ್ಲ. ದೇಶದ ಪ್ರಜೆಗೆ ಎಲ್ಲಿ ಬೇಕಾದರು ಕೆಲಸ ಮಾಡುವ ಅವಕಾಶವಿದ್ದು, ಅದು ಮೂಲಭೂತ ಹಕ್ಕಾಗಿದೆ. ಶಂಕಿತ ವ್ಯಕ್ತಿಗಳು, ಅವರ ನಡವಳಿಕೆ ಕುರಿತು ಸಾರ್ವಜನಿಕರಿಗೆ ಸಂಶಯ ಮೂಡಿದರೆ ಪೊಲೀಸ್ ಇಲಾಖೆಗೆ ಮಾಹಿತಿ ನೀಡಬೇಕು ಎಂದು ಎಸ್‌ಪಿ ತಿಳಿಸಿದರು.

ಪ್ರೀತಮ್ ಡಿ.ಶ್ರೇಯಕರ್, ರಾಜೇಶ್‌ಗೆ ಸಿಎಂ ಪದಕ


ಸಿ.ಕೆ.ರಾಜೇಶ್


ಡಿ.ಶ್ರೇಯಕರ್

ಮಡಿಕೇರಿ, ಆ.16–ಕೊಡಗು ಜಿಲ್ಲೆಯ ಶನಿವಾರಸಂತೆ ಪೊಲೀಸ್ ಠಾಣೆ ವೃತ್ತ ನಿರೀಕ್ಷಕ ಪ್ರೀತಮ್ ಡಿ.ಶ್ರೇಯಕರ್ ಹಾಗೂ ಡಿಸಿಆರ್‌ಬಿ ವಿಭಾಗದ ಹೆಡ್‌ಕಾನ್ಸ್ ಟೇಬಲ್ ಸಿ.ಕೆ.ರಾಜೇಶ್ ಅವರು ಮುಖ್ಯಮಂತ್ರಿ ಪದಕಕ್ಕೆ ಭಾಜನರಾಗಿದ್ದಾರೆ.

ವೃತ್ತ ನಿರೀಕ್ಷಕ ಪ್ರೀತಮ್ ಡಿ.ಶ್ರೇಯಕರ್ ಅವರು ಸಿಐಡಿ ವಿಭಾಗದಲ್ಲಿ ಸಲ್ಲಿಸಿದ ಸೇವೆಯನ್ನು ಗುರುತಿಸಿ ಮುಖ್ಯಮಂತ್ರಿ ಪದಕಕ್ಕೆ ಆಯ್ಕೆ ಮಾಡಲಾಗಿದೆ. ಜಿಲ್ಲಾ ಸಿಡಿಆರ್ ಘಟಕದ ತಾಂತ್ರಿಕ ಪರಿಣಿತಿ ಆಧರಿಸಿ ಸಿ.ಕೆ.ರಾಜೇಶ್ ಅವರಿಗೆ ಪದಕ ಘೋಷಿಸಲಾಗಿದೆ.

ಆಗಸ್ಟ್ ಕೊನೆವರೆಗೂ ಎಚ್ಚರವಹಿಸಿ

ಮಡಿಕೇರಿ: ಕೊಡಗು ಜಿಲ್ಲೆಯಲ್ಲಿ ಮುಂಗಾರು ಮಳೆ ಮುಂದುವರೆಯಲಿದ್ದು, ಈ ಹಿನ್ನೆಲೆಯಲ್ಲಿ ಆಗಸ್ಟ್ ಅಂತ್ಯದವರೆಗೂ ಹೆಚ್ಚಿನ ಎಚ್ಚರ ವಹಿಸಬೇಕಿದೆ ಎಂದು ಜಿಲ್ಲಾಧಿಕಾರಿ ವೆಂಕಟ್ ರಾಜಾ ನಿರ್ದೇಶನ ನೀಡಿದರು. ಅಧಿಕಾರಿಗಳ ವಿಡಿಯೋ ಸಂವಾದದಲ್ಲಿ ಜಿಲ್ಲೆಯ ಭೂ ಕುಸಿತ ಹಾಗೂ ಪ್ರವಾಹ ಪೀಡಿತ ಪ್ರದೇಶಗಳಲ್ಲಿ ಅಗತ್ಯ ಮುನ್ನೆಚ್ಚರ ವಹಿಸಬೇಕು. ಈಗ ಮಳೆ ಕಡಿಮೆ ಆಗಿದ್ದರೂ ಮುಂದಿನ ದಿನಗಳಲ್ಲಿ ಮತ್ತೆ ಮಳೆ ಆಗುವ ಸಾಧ್ಯತೆ ಇದೆ. ಆದ್ದರಿಂದ ಹವಾಮಾನ ಇಲಾಖೆ ಮಾಹಿತಿಯಂತೆ ಅಗತ್ಯ ಕ್ರಮ ವಹಿಸಬೇಕು ಎಂದು ಸೂಚಿಸಿದರು.

ಇಂದು ವೈದ್ಯಕೀಯ ಸೇವೆ ಬಂದ್

ಮಡಿಕೇರಿ, ಆ.16–ಕೋಲ್ಕತ್ತಾದ ಆರ್‌ಜಿಆರ್ ವೈದ್ಯಕೀಯ ಆಸ್ಪತ್ರೆಯ ತರಬೇತಿ ವೈದ್ಯೆಯ ಅತ್ಯಾಚಾರ ಹಾಗೂ ಹತ್ಯೆ ಖಂಡಿಸಿ ಆ.17ರಂದು ವೈದ್ಯಕೀಯ ಸೇವೆಗಳನ್ನು ಬಂದ್ ಮಾಡುವುದಾಗಿ ಭಾರತೀಯ ವೈದ್ಯಕೀಯ ಸಂಘ ಘೋಷಿಸಿದ್ದು, ಕೊಡಗಿನಲ್ಲೂ ಬಂದ್ ಆಗಲಿದೆ ಎಂದು ಸಂಘದ ಜಿಲ್ಲಾ ಘಟಕ ತಿಳಿಸಿದೆ. ಕೊಡಗು ಜಿಲ್ಲೆಯ ಸರ್ಕಾರಿ ಮತ್ತು ಖಾಸಗಿ ಆಸ್ಪತ್ರೆ ಹಾಗೂ ಕ್ಲಿನಿಕ್‌ಗಳಲ್ಲಿ ಶನಿವಾರ ಬೆಳಗ್ಗೆ 6 ರಿಂದ ಆ.18ರ ಬೆಳಗ್ಗೆ 6 ಗಂಟೆವರೆಗೆ ಎಲ್ಲಾ ವೈದ್ಯಕೀಯ ಸೇವೆಗಳು ಸ್ಥಗಿತಗೊಳ್ಳಲಿವೆ. ಹೊರ ರೋಗಿಗಳ ಚಿಕಿತ್ಸಾ ಸೇವೆ ಮತ್ತು ಶಸ್ತ್ರಚಿಕಿತ್ಸಾ ಘಟಕಗಳು ಈ ಅವಧಿಯಲ್ಲಿ ಕಾರ್ಯನಿರ್ವಹಿಸುವುದಿಲ್ಲ. ವೈದ್ಯರ ಮುಷ್ಕರಕ್ಕೆ ಸಾರ್ವಜನಿಕರು ಸಹಕಾರ ನೀಡಬೇಕು ಎಂದು ಭಾರತೀಯ ವೈದ್ಯಕೀಯ ಸಂಘದ ಕೊಡಗು ಘಟಕದ ಅಧ್ಯಕ್ಷ ಡಾ.ಶ್ಯಾಮ್ ಅಪ್ಪಣ್ಣ ಮತ್ತು ಪ್ರಧಾನ ಕಾರ್ಯದರ್ಶಿ ಡಾ.ಸಿ.ಆರ್.ಪ್ರಶಾಂತ್ ತಿಳಿಸಿದ್ದಾರೆ.

ಸ್ವಾತಂತ್ರ್ಯ ಹೋರಾಟಗಾರರನ್ನು ಸ್ಮರಿಸಬೇಕು

ವಿರಾಜಪೇಟೆ, ಆ.16–ಸ್ವಾತಂತ್ರ್ಯಕ್ಕಾಗಿ ಎಲ್ಲವನ್ನೂ ತ್ಯಾಗಮಾಡಿದ ಹೋರಾಟಗಾರರನ್ನು ಸದಾ ಸ್ಮರಿಸಬೇಕು ಎಂದು ಶಾಸಕ ಎ.ಎಸ್.ಪೊನ್ನಣ್ಣ ತಿಳಿಸಿದರು.

ಪಟ್ಟಣದ ತಾಲೂಕು ಮೈದಾನದಲ್ಲಿ ನಡೆದ ಸ್ವಾತಂತ್ರ್ಯೋತ್ಸವದಲ್ಲಿ ಮಾತನಾಡಿದ ಅವರು, ಬರೀ ಮಾತಿನಿಂದ ದೇಶ ಪ್ರೇಮ ತೋರಿಸುವುದಲ್ಲ. ನೆಹರು ಅವರು ಸ್ವಾತಂತ್ರ್ಯ ಹೋರಾಟದ ಸಂದರ್ಭ ಸುಮಾರು 9 ವರ್ಷ ಜೈಲುವಾಸ ಅನುಭವಿಸಿದರು. ಆದರೆ, ಇಂದು ಇತಿಹಾಸ ತಿರುಚುವ ಕೆಲಸವನ್ನು ಯಾರಿಂದಲೂ ಒಪ್ಪಲು ಸಾಧ್ಯವಿಲ್ಲ. ಅಹಿಂಸಾ ಮಾರ್ಗದಿಂದ ಸ್ವಾತಂತ್ರ್ಯ ಪಡೆದುಕೊಂಡ ಮೊದಲ ದೇಶ ಭಾರತ ಎಂದರು.

ವಿಧಾನಪರಿಷತ್ ಸದಸ್ಯ ಎಂ.ಸುಜಾ ಕುಶಾಲಪ್ಪ ಮಾತನಾಡಿ, ಹಿರಿಯರ ಹೋರಾಟದ ಫಲವಾಗಿ ನಾವಿಂದು ಸ್ವಾತಂತ್ರ್ಯ ಅನುಭವಿಸುತ್ತಿದ್ದೇವೆ. ದೇಶವನ್ನು ಬೆಳೆಸುವ ಜವಾಬ್ದಾರಿ ನಮ್ಮೆಲ್ಲರ ಮೇಲಿದೆ ಎಂದರು.


ದೇಶ ಭಕ್ತಿ ನೃತ್ಯ ಪ್ರದರ್ಶಿಸಿದ ಮಕ್ಕಳೊಂದಿಗೆ ಶಾಸಕ ಎ.ಎಸ್.ಪೊನ್ನಣ್ಣ, ವಿಧಾನ ಪರಿಷತ್ ಸದಸ್ಯ ಎಂ.ಸುಜಾ ಕುಶಾಲಪ್ಪ ಇದ್ದರು.

ತಹಸೀಲ್ದಾರ್ ಎಚ್.ಎನ್.ರಾಮಚಂದ್ರ ಧ್ವಜಾರೋಹಣ ನೆರವೇರಿಸಿದರು. ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿ ಪರೀಕ್ಷೆಯಲ್ಲಿ ಶೇ.100ರಷ್ಟು ಫಲಿತಾಂಶ ಪಡೆದ ವಿದ್ಯಾಸಂಸ್ಥೆಗಳು, ಅತ್ಯುತ್ತಮ ಅಂಕ ಪಡೆದ ವಿದ್ಯಾರ್ಥಿಗಳು ಹಾಗೂ ವಿವಿಧ ಕ್ಷೇತ್ರದ ಸಾಧಕರನ್ನು ಸನ್ಮಾನಿಸಲಾಯಿತು. ಇದೇ ವೇಳೆ ಪೊಲೀಸ್, ಎನ್‌ಸಿಸಿ, ಸ್ಕೌಟ್ ಮತ್ತು ಗೈಡ್ಸ್ ತಂಡಗಳು ಆಕರ್ಷಕ ಪಥ ಸಂಚಲನ ನಡೆಸಿದವು. ಪುಟಾಣಿಗಳು ಹಾಗೂ ಶಾಲಾ ವಿದ್ಯಾರ್ಥಿಗಳು ದೇಶ ಭಕ್ತಿ ನೃತ್ಯ ಪ್ರದರ್ಶಿಸಿದರು.

ಕಾರ್ಯಕ್ರಮದಲ್ಲಿ ಡಿವೈಎಸ್ಪಿ ಮೋಹನ್ ಕುಮಾರ್, ಸಿಪಿಐ ಶಿವರುದ್ರ, ಕನ್ನಡ ಸಾಹಿತ್ಯ ಪರಿಷತ್ ತಾಲೂಕು ಅಧ್ಯಕ್ಷ ಡಿ.ಪಿ.ರಾಜೇಶ್, ಪುರಸಭೆ ಮುಖ್ಯಾಧಿಕಾರಿ ಚಂದ್ರಕುಮಾರ್, ಕ್ಷೇತ್ರ ಶಿಕ್ಷಣಾಧಿಕಾರಿ ಎಂ.ಪ್ರಕಾಶ್, ಪುರಸಭೆ ಸದಸ್ಯರು, ವಿವಿಧ ಇಲಾಖೆ ಅಧಿಕಾರಿಗಳು ಉಪಸ್ಥಿತರಿದ್ದರು.

ತಾಲೂಕು ಆಡಳಿತದಿಂದ ಮಾಜಿ ಸೈನಿಕರಿಗೆ ಅವಮಾನ

ವಿರಾಜಪೇಟೆ, ಆ.16– ರಾಷ್ಟ್ರೀಯ ಹಬ್ಬಗಳ ಆಚರಣಾ ಸಮಿತಿ ಹಾಗೂ ತಾಲೂಕು ಆಡಳಿತದ ಆಶ್ರಯದಲ್ಲಿ ನಡೆದ ಸ್ವಾತಂತ್ರ್ಯ ದಿನಾಚರಣೆಯಲ್ಲಿ ತಾಲೂಕು ಆಡಳಿತ ಮಾಜಿ ಸೈನಿಕರನ್ನು ಅವಮಾನಿಸಲಾಗಿದೆ ಎಂದು ಕೊಡಗು ಜಿಲ್ಲಾ ಮಾಜಿ ಸೈನಿಕರ ಸಹಕಾರ ಸಂಘದ ಅಧ್ಯಕ್ಷ ಚಪ್ಪಂಡ ಹರೀಶ್ ಉತ್ತಯ್ಯ ಆರೋಪಿಸಿದರು.



ಪಟ್ಟಣದ ಪ್ರೆಸ್‌ಕ್ಲಬ್‌ನಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸ್ವಾತಂತ್ರ್ಯೋತ್ಸವ, ಗಣರಾಜ್ಯೋತ್ಸವ ಹಾಗೂ ಕನ್ನಡ ರಾಜ್ಯೋತ್ಸವ ಕಾರ್ಯಕ್ರಮಗಳನ್ನು ತಾಲೂಕು ಮೈದಾನದಲ್ಲಿ ನಡೆಸಲಾಗುತ್ತದೆ. ಕಾರ್ಯಕ್ರಮದಲ್ಲಿ ಸಾಧಕರು, ದೇಶಸೇವೆ ಮಾಡಿದ ಗಣ್ಯರನ್ನು ಸನ್ಮಾನಿಸುವುದು ಹಿಂದಿನಿಂದಲೂ ಪರಿಪಾಠವಾಗಿದೆ. ಆದರೆ, ಈ ಬಾರಿ ಸನ್ಮಾನಿತರಿಗೆ ವೇದಿಕೆಯಲ್ಲಿ ಆಸನದ ವ್ಯವಸ್ಥೆ ಮಾಡಿರಲಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಈ ಬಾರಿ ಮಾಜಿ ಯೋಧರಾದ ನಾಯಕಂಡ ಬೋಪಣ್ಣ, ಪುಗ್ಗೇರ ಪೊನ್ನಪ್ಪ, ಐನಂಡ ಮಂದಣ್ಣ, ಕಟ್ಟೇರ ವಿಶ್ವನಾಥ್, ಮಂಡ್ಯೋಳಂಡ ಬೋಪಯ್ಯ ಅವರನ್ನು ಸನ್ಮಾನಿಸಲಾಯಿತು. ಆದರೆ, ಸನ್ಮಾನಿತರಿಗೆ ವೇದಿಕೆಯಲ್ಲಿ ಆಸನದ ವ್ಯವಸ್ಥೆ ಮಾಡಿರಲಿಲ್ಲ ಎಂದರು.

ವೇದಿಕೆಯಲ್ಲಿ ಸನ್ಮಾನಿತರಿಗೆ ಅಗೌರವ ತೋರಿರುವುದು ತಾಲೂಕು ಆಡಳಿತಕ್ಕೆ ಶೋಭೆಯಲ್ಲ. ಮುಂದಿನ ಬಾರಿ ಇಂತಹ ಕಾರ್ಯಕ್ರಮಗಳಲ್ಲಿ ಭಾಗವಹಿಸಬೇಕಾ? ಇಲ್ಲ ಬೇಡವಾ ಎಂಬುದನ್ನು ತೀರ್ಮಾನಿಸಲಾಗುವುದು ಎಂದರು.

ಸುದ್ದಿಗೋಷ್ಠಿಯಲ್ಲಿ ಸಂಘದ ಉಪಾಧ್ಯಕ್ಷ ರಾಜ ಚಂದ್ರಶೇಖರ್, ಕಾರ್ಯದರ್ಶಿ ಪುಗ್ಗೇರ ನಂದಾ, ಖಜಾಂಚಿ ತೋರೆರ ಪೂವಯ್ಯ ಉಪಸ್ಥಿತರಿದ್ದರು.

ಜಿಲ್ಲೆಯಲ್ಲಿ ಸಂಭ್ರಮದ ವರಮಹಾಲಕ್ಷ್ಮೀ ಹಬ್ಬ


ಗುಂಡ್ಲುಪೇಟೆಯಲ್ಲಿ ವರಮಹಾಲಕ್ಷ್ಮೀ ಹಬ್ಬದ ಅಂಗವಾಗಿ ಮಹಿಳೆಯರು ದೇವಿಗೆ ವಿಶೇಷ ಅಲಂಕಾರದೊಂದಿಗೆ ಪೂಜೆ ಸಲ್ಲಿಸಿದರು.

ಚಾಮರಾಜನಗರ, ಆ.16– ಜಿಲ್ಲೆಯ ವಿವಿಧೆಡೆ ಶುಕ್ರವಾರ ವರಮಹಾಲಕ್ಷ್ಮೀ ಹಬ್ಬವನ್ನು ಸಂಭ್ರಮ ಹಾಗೂ ಭಕ್ತಿಯಿಂದ ಆಚರಿಸಲಾಯಿತು.

ಚಾಮರಾಜನಗರ, ಗುಂಡ್ಲುಪೇಟೆ, ಕೊಳ್ಳೇಗಾಲ, ಯಳಂದೂರು, ಹನೂರು ಸೇರಿದಂತೆ ಗ್ರಾಮೀಣ ಪ್ರದೇಶಗಳಲ್ಲಿ ವರಮಹಾಲಕ್ಷ್ಮೀ ವ್ರತಾಚರಣೆಯನ್ನು ಆಚರಿಸಲಾಗಿದ್ದು, ಹೊಸ ಸೀರೆ ಧರಿಸಿ ಕಂಗೊಳಿಸುತ್ತಿದ್ದ ಸುಮಂಗಲಿಯರು ಮನೆಗಳಲ್ಲಿ ಮಹಾಲಕ್ಷ್ಮೀಯ ವಿಗ್ರಹ ಸ್ಥಾಪಿಸಿ, ಹೂವು, ಚಿನ್ನಾಭರಣಗಳಿಂದ ಅಲಂಕರಿಸಿ ಪೂಜೆ ಸಲ್ಲಿಸಿದರು.

ದೇವಾಲಯಗಳಲ್ಲಿ ವಿಶೇಷ ಪೂಜೆ: ವರಮಹಾಲಕ್ಷ್ಮೀ ಅಂಗವಾಗಿ ನಗರದ ಹೊರವಲಯದ ಕರಿವರದರಾಜಸ್ವಾಮಿಬೆಟ್ಟ, ಗುಂಡ್ಲುಪೇಟೆ ವೃತ್ತದ ಸಮೀಪದ ಶ್ರೀದೇವಿ ಭೂದೇವಿ ಸಮೇತ ವರಾಹಸ್ವಾಮಿ, ಹಳೇ ಖಾಸಗಿ ಬಸ್ ನಿಲ್ದಾಣದ ಲಕ್ಷ್ಮೀಕಾಂತಸ್ವಾಮಿ ದೇವಾಲಯ, ಹರಳುಕೋಟೆ ಜನಾರ್ಧನಸ್ವಾಮಿ, ಆಂಜನೇಯ ಸ್ವಾಮಿ, ಸಂತೇಮರಹಳ್ಳಿ ವೃತ್ತದ ಕಾರ್ಯಸಿದ್ಧಿ ಆಂಜನೇಯಸ್ವಾಮಿ ದೇವಾಲಯ ಹಾಗೂ ಕೊಳದ ಬೀದಿಯ ಗಣಪತಿ, ಆಂಜನೇಯಸ್ವಾಮಿ, ಶನೇಶ್ವರಸ್ವಾಮಿ ದೇವಾಲಯದಲ್ಲಿ ವಿಶೇಷ ಪೂಜೆ ಸಲ್ಲಿಸಲಾಯಿತು.

ಗುಂಡ್ಲುಪೇಟೆ ತಾಲೂಕಿನ ಹಿಮವದ್ ಗೋಪಾಲ ಸ್ವಾಮಿ ಬೆಟ್ಟ, ಹುಲುಗನಮುರಡಿ ವೆಂಕಟರಮಣ ಸ್ವಾಮಿ, ಬಿಳಿಗಿರಿರಂಗನ ಬೆಟ್ಟದ ಬಿಳಿಗಿರಿರಂಗನಾಥಸ್ವಾಮಿ, ಯಳಂದೂರಿನ ಭೂವರಾಹ ನರಸಿಂಹಸ್ವಾಮಿ, ಚಿಕ್ಕಲ್ಲೂರು ಸಿದ್ದಪ್ಪಾಜಿ, ಕುರುಬನಕಟ್ಟೆ ದೇವಾಲಯಗಳಿಗೆ ಹೆಚ್ಚಿನ ಭಕ್ತರು ಆಗಮಿಸಿ ಪೂಜೆ ಸಲ್ಲಿಸಿದರು. ಮಹದೇಶ್ವರಸ್ವಾಮಿ ಬೆಟ್ಟದ ಮಾದಪ್ಪನಿಗೆ ವಿಶೇಷ ಹೂವಿನ ಅಲಂಕಾರ ಮಾಡಿ, ಪೂಜೆ ಸಲ್ಲಿಸಲಾಯಿತು. ಭಕ್ತರು ಮಾದಪ್ಪನ ದರ್ಶನ ಪಡೆದು, ಹರಕೆ ತೀರಿಸಿದರು.

ಇಂದು ಜಿಲ್ಲೆಯ ಎಲ್ಲಾ ಓಪಿಡಿ ಬಂದ್

ಚಾಮರಾಜನಗರ: ಕೋಲ್ಕತ್ತಾದ ವೈದ್ಯಕೀಯ ಕಾಲೇಜಿನ ಟ್ರೈನಿ ವೈದ್ಯೆ ಅತ್ಯಾಚಾರ ಹಾಗೂ ಕೊಲೆ ಆರೋಪಿಗಳನ್ನು ಬಂಧಿಸುವಂತೆ ಆಗ್ರಹಿಸಿ ಶನಿವಾರ (ಇಂದು) ಜಿಲ್ಲೆಯ ಸರ್ಕಾರಿ ಹಾಗೂ ಖಾಸಗಿ ಆಸ್ಪತ್ರೆಯ ವೈದ್ಯರು ಮುಷ್ಕರ ಹಮ್ಮಿಕೊಂಡಿರುವುದರಿಂದ ಎಲ್ಲಾ ಆಸ್ಪತ್ರೆಗಳಲ್ಲಿ ಓಪಿಡಿ ಸೇವೆ ಸ್ಥಗಿತಗೊಳ್ಳಲಿದೆ. ಭಾರತೀಯ ವೈದ್ಯಕೀಯ ಸಂಘದ ಕರೆಯ ಮೇರೆಗೆ ಶನಿವಾರ ಬೆಳಗ್ಗೆ 6 ರಿಂದ ಭಾನುವಾರ ಬೆಳಗ್ಗೆ 6 ಗಂಟೆವರೆಗೆ ಜಿಲ್ಲೆಯ ಎಲ್ಲಾ ಆಸ್ಪತ್ರೆಗಳಲ್ಲಿ ಓಪಿಡಿ ಸೇವೆ ಸ್ಥಗಿತಗೊಳ್ಳಲಿದ್ದು, ತುರ್ತು ಚಿಕಿತ್ಸೆ ಹೊರತುಪಡಿಸಿ ಯಾವುದೇ ಹೊರ ರೋಗಿಗಳ ತಪಾಸಣೆ ಇರುವುದಿಲ್ಲ ಐಎಂಎ ಜಿಲ್ಲಾ ಘಟಕದ ಅಧ್ಯಕ್ಷ ಡಾ.ಎಂ.ಬಸವರಾಜೇಂದ್ರ ತಿಳಿಸಿದ್ದಾರೆ.

ಆಕರ್ಷಕ ಬೈಕ್ ರ್‍ಯಾಲಿ...


ಚಾಮರಾಜನಗರದಲ್ಲಿ ಸ್ವಾತಂತ್ರ್ಯೋತ್ಸವ ಹಾಗೂ ತಿರಂಗ ಅಭಿಯಾನ ಅಂಗವಾಗಿ ಜಿಲ್ಲಾಡಳಿತ, ಜಿಲ್ಲಾ ನಗರಾಭಿವೃದ್ಧಿ ಕೋಶ ಹಾಗೂ ನಗರಸಭೆ ಸಂಯುಕ್ತಾಶ್ರಯದಲ್ಲಿ ಆಕರ್ಷಕ ಬೈಕ್ ರ್‍ಯಾಲಿ ನಡೆಸಲಾಯಿತು. ನಗರಸಭೆ ಪೌರಾಯುಕ್ತ ಎಸ್.ವಿ.ರಾಮದಾಸ್, ಇಂಜಿನಿಯರ್ ನಟರಾಜು, ಯೋಜನಾಧಿಕಾರಿ ವೆಂಕಟನಾಯಕ್, ಕಂದಾಯಾಧಿಕಾರಿ ಶರವಣ, ಹಿರಿಯ ಆರೋಗ್ಯ ನಿರೀಕ್ಷಕ ಮಂಜುನಾಥ್, ಹಿರಿಯ ಕಾರ್ಯಾಕ್ರಮ ಅಧಿಕಾರಿ ಸಿದ್ದಪ್ಪಾಜಿ ಇದ್ದರು.

ಚಾ.ನಗರದಲ್ಲಿ ಅದ್ದೂರಿ ಸ್ವಾತಂತ್ರ್ಯೋತ್ಸವ

ಪೊಲೀಸ್, ಅರಣ್ಯ, ಅಬಕಾರಿ ತುಕಡಿ, ವಿದ್ಯಾರ್ಥಿಗಳ ಆಕರ್ಷಕ ಪಥ ಸಂಚಲನ

ಚಾಮರಾಜನಗರ, ಆ.16–ಜಿಲ್ಲಾಡಳಿತದ ವತಿಯಿಂದ ನಗರದಲ್ಲಿ ಸ್ವಾತಂತ್ರ್ಯೋತ್ಸವವನ್ನು ಅದ್ಧೂರಿ ಹಾಗೂ ಅರ್ಥಪೂರ್ಣವಾಗಿ ಆಚರಿಸಲಾಯಿತು. ಕಾರ್ಯಕ್ರಮದಲ್ಲಿ ಪೊಲೀಸ್, ಅರಣ್ಯ, ಅಬಕಾರಿ, ಗೃಹರಕ್ಷಕ ದಳ ತುಕಡಿಗಳು ಸೇರಿದಂತೆ ವಿವಿಧ ಶಾಲಾ ಮಕ್ಕಳು ಆಕರ್ಷಕ ಪಥಸಂಚಲನ ನಡೆಸಿದರು.

ಜಿಲ್ಲಾ ಪೊಲೀಸ್ ಕವಾಯತು ಮೈದಾನದಲ್ಲಿ ನಡೆದ ಸ್ವಾತಂತ್ರ್ಯೋತ್ಸವದಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಕೆ.ವೆಂಕಟೇಶ್ ಧ್ವಜಾರೋಹಣ ನೆರವೇರಿಸಿ, ಧ್ವಜ ವಂದನೆ ಸ್ವೀಕರಿಸಿದರು. ನಂತರ ತೆರೆದ ವಾಹನದಲ್ಲಿ ತೆರಳಿದ ಸಚಿವರು ಪಥಸಂಚಲನಕ್ಕೆ ಸಜ್ಜಾಗಿದ್ದ ವಿವಿಧ ತುಕಡಿಗಳಿಗೆ ಗೌರವ ವಂದನೆ ಸಲ್ಲಿಸಿದರು.

ಬಳಿಕ ಮಾತನಾಡಿದ ಸಚಿವರು, ಪ್ರಸಕ್ತ ಸಾಲಿನಲ್ಲಿ ಜಿಲ್ಲೆಯಲ್ಲಿ ಹೊಸದಾಗಿ ಪಶುವೈದ್ಯ ಕಟ್ಟಡಗಳನ್ನು ನಿರ್ಮಿಸಲು ಪ್ರತಿ ಕಟ್ಟಡಕ್ಕೆ 50 ಲಕ್ಷ ರೂ.ನಂತೆ 450 ಲಕ್ಷ ರೂ. ಅನುದಾನ ಒದಗಿಸಲಾಗಿದೆ. ಜಿಲ್ಲೆಯ ಸಂತೇಮರಹಳ್ಳಿ, ಮಲಿಯೂರು, ಕೊತ್ತಲವಾಡಿ, ಹೊನ್ನೇಗೌಡನಹಳ್ಳಿ, ತೆರಕಣಾಂಬಿ, ಕಬ್ಬಳ್ಳಿ, ರಾಮಾಪುರ, ಮಹದೇಶ್ವರಬೆಟ್ಟ, ಯಳಂದೂರಿನಲ್ಲಿ ಪಶುವೈದ್ಯ ಕಟ್ಟಡ ನಿರ್ಮಿಸಲಾಗುವುದು. ಅನುಗ್ರಹ ಕೊಡುಗೆ ಯೋಜನೆಯಡಿ ಆಕಸ್ಮಿಕವಾಗಿ ಮೃತಪಟ್ಟ ಜಾನುವಾರುಗಳಿಗೆ 10 ಸಾವಿರ ರೂ. ಹಾಗೂ ಕುರಿ ಮೇಕೆಗಳಿಗೆ 5 ಸಾವಿರ ರೂ. ಪರಿಹಾರ ನೀಡಲಾಗುತ್ತಿದೆ ಎಂದು ತಿಳಿಸಿದರು.


ಚಾಮರಾಜನಗರದ ಕವಾಯತು ಮೈದಾನದಲ್ಲಿ ನಡೆದ ಸ್ವಾತಂತ್ರ್ಯೋತ್ಸವದಲ್ಲಿ ಸಚಿವ ಕೆ.ವೆಂಕಟೇಶ್ ಪಥಸಂಚಲನ ತುಕಡಿಗಳಿಗೆ ಗೌರವ ವಂದನೆ ಸಲ್ಲಿಸಿದರು.

ನಂತರ ಸಚಿವರು ಹಾಗೂ ಗಣ್ಯರು ರಾಷ್ಟ್ರನಾಯಕರ ಭಾವಚಿತ್ರಗಳಿಗೆ ಪುಷ್ಪಾರ್ಚನೆ ಮಾಡಿ, ಗೌರವ ಸಲ್ಲಿಸಿದರು. ಸರ್ಕಾರಿ ಬಾಲಕಿಯರ ಪದವಿಪೂರ್ವ ಕಾಲೇಜಿನ ಪ್ರೌಢಶಾಲಾ ವಿಭಾಗ, ಸೇವಾಭಾರತಿ ಶಾಲೆ, ಯುನಿವರ್ಸ್ ಆಂಗ್ಲ ಮಾಧ್ಯಮ ಶಾಲೆ ತಂಡಗಳು ಸಾಂಸ್ಕೃತಿಕ ಕಾರ್ಯಕ್ರಮ ನಡೆಸಿದವು. ಜೆಎಸ್‌ಎಸ್ ಪ್ರೌಢಶಾಲೆ ಪ್ರಸ್ತುತಪಡಿಸಿದ ಸಂಗೊಳ್ಳಿ ರಾಯಣ್ಣ ಹಾಗೂ ಸಂತ ಜೋಸೆಫರ ಶಾಲೆಯ ರಸ್ತೆ ಸುರಕ್ಷತಾ ನಿಯಮಗಳ ಪಾಲನೆ ಕುರಿತ ನೃತ್ಯ ರೂಪಕ ಪ್ರದರ್ಶನ ಎಲ್ಲರ ಗಮನ ಸೆಳೆಯಿತು.

ಇದೇ ವೇಳೆ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಹೆಚ್ಚು ಅಂಕ ಗಳಿಸಿದ ಜಿಲ್ಲೆಯ 6 ವಿದ್ಯಾರ್ಥಿಗಳಿಗೆ ಶಾಲಾ ಶಿಕ್ಷಣ ಇಲಾಖೆಯಿಂದ ಉಚಿತ ಲ್ಯಾಪ್‌ಟಾಪ್ ವಿತರಿಸಲಾಯಿತು. ಅಪಘಾತದಲ್ಲಿ ಮೃತಪಟ್ಟವರ ಅಂಗಾಂಗ ದಾನ ಮಾಡಿದ 7 ಕುಟುಂಬದ ಸದಸ್ಯರು, ಪೋಷಕರು, ಕೊಳ್ಳೇಗಾಲ ತಾಲೂಕಿನ ವಿವಿಧ ಗ್ರಾಮಗಳಲ್ಲಿ ಪ್ರವಾಹ ಉಂಟಾದ ಸಂದರ್ಭದಲ್ಲಿ ವಿಪತ್ತು ನಿರ್ವಹಣೆಯಲ್ಲಿ ಪ್ರಾಣದ ಹಂಗು ತೊರೆದು ಉತ್ತಮ ಕಾರ್ಯನಿರ್ವಹಿಸಿದ ಅಗ್ನಿಶಾಮಕ ಅಧಿಕಾರಿಗಳಿಗೆ ಪ್ರಶಸ್ತಿ ಪತ್ರ ವಿತರಿಸಲಾಯಿತು.

ಸಂಸದ ಸುನೀಲ್ ಬೋಸ್, ಶಾಸಕ ಸಿ.ಪುಟ್ಟರಂಗಶೆಟ್ಟಿ, ಚುಡಾ ಅಧ್ಯಕ್ಷ ಮಹಮ್ಮದ್ ಅಸ್ಗರ್, ಕಾಡಾ ಅಧ್ಯಕ್ಷ ಪಿ.ಮರಿಸ್ವಾಮಿ, ಗ್ಯಾರಂಟಿ ಯೋಜನೆ ಅನುಷ್ಠಾನ ಸಮಿತಿ ಜಿಲ್ಲಾಧ್ಯಕ್ಷ ಎಚ್.ವಿ.ಚಂದ್ರು, ಜಿಲ್ಲಾಧಿಕಾರಿ ಶಿಲ್ಪನಾಗ್, ಜಿಪಂ ಸಿಇಓ ಮೋನಾ ರೋತ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ಬಿ.ಟಿ.ಕವಿತಾ, ಅಪರ ಜಿಲ್ಲಾಧಿಕಾರಿ ಗೀತಾ ಹುಡೇದ, ಜಿಪಂ ಉಪ ಕಾರ್ಯದರ್ಶಿ ಲಕ್ಷ್ಮೀ, ತಹಸೀಲ್ದಾರ್ ಗಿರಿಜ ಇತರರು ಉಪಸ್ಥಿತರಿದ್ದರು.

ಪ್ರಜಾಪಿತ ಬ್ರಹ್ಮಾಕುಮಾರಿ ಈಶ್ವರೀಯ ವಿವಿಯಲ್ಲಿ ಧ್ವಜಾರೋಹಣ


ಪ್ರಜಾಪಿತ ಬ್ರಹ್ಮಾಕುಮಾರಿ ಈಶ್ವರೀಯ ವಿಶ್ವವಿದ್ಯಾಲಯದಲ್ಲಿ ಧ್ವಜಾರೋಹಣ ನೆರವೇರಿಸಲಾಯಿತು.

ಚಾಮರಾಜನಗರ: ಪ್ರಜಾಪಿತ ಬ್ರಹ್ಮಾಕುಮಾರಿ ಈಶ್ವರೀಯ ವಿಶ್ವವಿದ್ಯಾಲಯದಲ್ಲಿ ಸ್ವಾತಂತ್ರ್ಯೋತ್ಸವದ ಅಂಗವಾಗಿ ಧ್ವಜಾರೋಹಣ ನೆರವೇರಿಸಲಾಯಿತು.

ಧ್ವಜಾರೋಹಣ ನೆರವೇರಿಸಿ ಮಾತನಾಡಿದ ರಾಜಯೋಗಿನಿ ಬ್ರಹ್ಮಾಕುಮಾರಿ ದಾನೇಶ್ವರಿಜೀ ಭಾರತ ಇಡೀ ಜಗತ್ತಿನಲ್ಲೇ ಸರ್ವಶ್ರೇಷ್ಠ ಭೂಮಿಯಾಗಿದೆ. ಇಲ್ಲಿನ ಜನರಲ್ಲಿ ಶಾಂತಿ, ಸಹನೆ, ಸಹಯೋಗದ ಭಾವನೆ ಇದೆ. ಎಲ್ಲಿ ಪ್ರಜೆಗಳಿಗೆ ಸ್ವಾತಂತ್ರ್ಯ ಇರುತ್ತದೋ, ಅಲ್ಲಿವರೆಗೆ ದೇಶದ ಅಭಿವೃದ್ಧಿ ನಿರಂತರವಾಗಿ ನಡೆಯುತ್ತದೆ. ಇದಕ್ಕೆ ಭಾರತವೇ ಸಾಕ್ಷಿ ಎಂದರು.

ಆಸರೆ ಚಾರಿಟಬಲ್ ಟ್ರಸ್ಟ್ ಕಾರ್ಯದರ್ಶಿ ಟಿ.ಜೆ.ಸುರೇಶ್ ಮಾತನಾಡಿ, ಭಾರತ ಬ್ರಿಟಿಷ್ ಸಾಮ್ರಾಜ್ಯದೊಳಗೆ ಬದುಕುವುದು ಎಷ್ಟು ಕಷ್ಟಕರವಾಗಿತ್ತು ಎಂದು ನಾವು ಊಹಿಸಲು ಸಾಧ್ಯವಿಲ್ಲ. ಹಲವಾರು ವರ್ಷಗಳ ಹೋರಾಟ ಹಾಗೂ ಮಹನೀಯರ ತ್ಯಾಗದಿಂದ ಸ್ವಾತಂತ್ರ್ಯ ಪಡೆಯಲು ಸಾಧ್ಯವಾಯಿತು ಎಂದರು. ಇನರ್‌ವ್ಹೀಲ್ ಸಂಸ್ಥೆ ಲಕ್ಷ್ಮಿ ಶಿವಕುಮಾರ್ ಮಾತನಾಡಿದರು. ಓಂ ಶಾಂತಿ ನ್ಯೂ ಸರ್ವಿಸ್‌ನ ಬಿ.ಕೆ.ಆರಾಧ್ಯ ಶ್ರೀನಿವಾಸ್, ಗೀತಾ, ಆಶಾ, ಕಮಲಮ್ಮ, ಸುನಿತಾ, ಶಿವಕುಮಾರ್, ಲಕ್ಷ್ಮಿ ನರಸಿಂಹ, ಪ್ರಸಾದ್ ಹಾಜರಿದ್ದರು.

ಗಾಳೀಪುರದಲ್ಲಿ ವಿದ್ಯುತ್ ಉಪಕೇಂದ್ರ ಉದ್ಘಾಟನೆ

ಚಾಮರಾಜನಗರ, ಆ.16–ತಾಲೂಕಿನ ಸೋಮವಾರಪೇಟೆ ಗಾಳೀಪುರ ಗ್ರಾಮದ ವಿದ್ಯುತ್ ಉಪ ಕೇಂದ್ರ ಕಟ್ಟಡವನ್ನು ಜಿಲ್ಲಾ ಉಸ್ತುವಾರಿ ಸಚಿವ ಕೆ.ವೆಂಕಟೇಶ್ ಉದ್ಘಾಟಿಸಿದರು.

ಗಾಳೀಪುರದಲ್ಲಿ ಕರ್ನಾಟಕ ವಿದ್ಯುತ್ ಪ್ರಸರಣ ನಿಗಮದಿಂದ 10.27 ಕೋಟಿ ರೂ. ವೆಚ್ಚದಲ್ಲಿ ನಿರ್ಮಿಸಿರುವ ವಿದ್ಯುತ್ ಮಾರ್ಗಕ್ಕೆ ಕೆ.ವೆಂಕಟೇಶ್ ಕಟ್ಟಡದ ವಿದ್ಯುತ್ ಯಂತ್ರದ ಬಟನ್ ಒತ್ತುವ ಮೂಲಕ ಉಪ ಕೇಂದ್ರದ ಕಾರ್ಯನಿರ್ವಹಣೆಗೆ ಚಾಲನೆ ನೀಡಿದರು.

ಬಳಿಕ ಮಾತನಾಡಿದ ಸಚಿವ, ಈ ವಿದ್ಯುತ್ ಉಪ ಕೇಂದ್ರದಿಂದ ತಾಲೂಕಿನ ಸೋಮವಾರಪೇಟೆ, ಗಾಳೀಪುರ, ಮಲ್ಲಯ್ಯನಪುರ, ಮೂಡಲಪುರ, ಉತ್ತವಳ್ಳಿ, ಯಡಪುರ, ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಜಿಲ್ಲಾ ಆಸ್ಪತ್ರೆ, ಹರದನಹಳ್ಳಿ, ಟಿ.ಕೆ.ಮೋಳೆ, ಗ್ರಾಮಗಳ ವೋಲ್ಟೇಜ್ ಸ್ಥಿತಿ ಸುಧಾರಿಸುವುದು ಹಾಗೂ ಅಡಚಣೆರಹಿತ ವಿದ್ಯುತ್ ಪೂರೈಕೆ ಮಾಡ ಲಾಗುವುದು ಎಂದರು.

ಪ್ರಧಾನಮಂತ್ರಿ ಕುಸುಮ್ ಯೋಜನೆಯಡಿ ರೈತರು ಕೃಷಿ ಚಟುವಟಿಕೆ ಹಾಗೂ ಸಾರ್ವಜನಿಕರಿಗೆ ವಿದ್ಯುತ್ ಪೂರೈಸಲು ಜಿಲ್ಲೆಯ ವಿವಿಧೆಡೆ ಸೋಲಾರ್ ಪ್ಯಾನಲ್‌ಗಳನ್ನು ಅಳವಡಿಸಿ, ವಿದ್ಯುತ್ ಉತ್ಪಾದಿಸಲಾಗುವುದು. ಇದರಿಂದ ಅಗತ್ಯ ಪ್ರಮಾಣದ ವಿದ್ಯುತ್ ಬಳಸಿಕೊಂಡು ಉಳಿಕೆ ವಿದ್ಯುತ್ ಅನ್ನು ಇತರರಿಗೆ ನೀಡುವ ಗುರಿ ಹೊಂದಲಾಗಿದೆ ಎಂದು ತಿಳಿಸಿದರು. ಸಂಸದ ಸುನೀಲ್ ಬೋಸ್, ಶಾಸಕರಾದ ಸಿ.ಪುಟ್ಟರಂಗಶೆಟ್ಟಿ, ಎ.ಆರ್.ಕೃಷ್ಣಮೂರ್ತಿ, ಚುಡಾ ಅಧ್ಯಕ್ಷ ಮಹಮ್ಮದ್ ಅಸ್ಗರ್, ಕಾಡಾ ಅಧ್ಯಕ್ಷ ಪಿ.ಮರಿಸ್ವಾಮಿ, ಜಿಲ್ಲಾಧಿಕಾರಿ ಶಿಲ್ಪನಾಗ್, ಜಿಪಂ ಸಿಇಓ ಮೋನಾ ರೋತ್, ಎಸ್ಪಿ ಡಾ.ಬಿ.ಟಿ.ಕವಿತ, ಎಡಿಸಿ ಗೀತಾ ಹುಡೇದ, ಕರ್ನಾಟಕ ವಿದ್ಯುತ್ ಪ್ರಸರಣ ನಿಗಮದ ಅಧಿಕಾರಿಗಳು ಉಪಸ್ಥಿತರಿದ್ದರು.


ಗಾಳೀಪುರದ ವಿದ್ಯುತ್ ಉಪ ಕೇಂದ್ರ ಕಟ್ಟಡವನ್ನು ಸಚಿವ ಕೆ.ವೆಂಕಟೇಶ್ ಉದ್ಘಾಟಿಸಿದರು.

ಒಂದನೇ ಪುಟದಿಂದ

ಕನ್ನಡದ ಅತ್ಯುತ್ತಮ ಚಿತ್ರ ಪ್ರಶಸ್ತಿ

ಜನವರಿ 1, 2022 ರಿಂದ ಡಿಸೆಂಬರ್ 31,2022ರ ಸಾಲಿನಲ್ಲಿ ಬಿಡುಗಡೆಯಾದ ಚಿತ್ರಗಳನ್ನು ಪರಿಗಣಿಸಿ ಇದೀಗ ರಾಷ್ಟ್ರೀಯ ಪ್ರಶಸ್ತಿ ಘೋಷಿಸಲಾಗಿದೆ. 2023ರ ಮೇ ತಿಂಗಳಲ್ಲಿ ಈ ಪ್ರಶಸ್ತಿಗಳ ಘೋಷಣೆಯಾಗ ಬೇಕಿತ್ತು. ಆದರೆ ಕೋವಿಡ್ ಕಾರಣ ದಿಂದ ಪ್ರಶಸ್ತಿ ಘೋಷಣೆ ವಿಳಂಬ ವಾಗಿತ್ತು. ಕಾಂತಾರ ಸಿನಿಮಾ 10 ಫಿಲ್ಮ್‌ಫೇರ್ ಪ್ರಶಸ್ತಿ ಪಡೆದುಕೊಂಡಿದೆ. ಇದರ ಜೊತೆ 10 ಸೈಮಾ ಪ್ರಶಸ್ತಿಯನ್ನು ಪಡೆದ ಹೆಗ್ಗಳಿಕೆಗೆ ಪಾತ್ರವಾಗಿದೆ. ಇದರ ಜೊತೆಗೆ ಇದೀಗ ರಾಷ್ಟ್ರೀಯ ಪ್ರಶಸ್ತಿ ಗರಿಯೂ ಸೇರಿಕೊಂಡಿದೆ.

ರಾಷ್ಟ್ರೀಯ ಪ್ರಶಸ್ತಿ ಪಡೆದ ಇತರ ಚಿತ್ರಗಳು:
ಅತ್ಯುತ್ತಮ ಚಲನಚಿತ್ರ ಅಟ್ಟಂ (ಮಲಯಾಳಂ)
ಅತ್ಯುತ್ತಮ ನಿರ್ದೇಶಕ, ಸೂರಜ್ ಬರ್ಜಾತ್ಯ(ಉಂಚಾಯಿ ಚಿತ್ರ)
ಅತ್ಯುಮತ್ತ ನಟಿ– ನಿತ್ಯಾಮೆನನ್
ಅತ್ಯುತ್ತಮ ಸಹಾಯಕ ನಟಿ– ನೀನಾ ಗುಪ್ತ
ಅತ್ಯುತ್ತಮ ಸಹಾಯಕ ನಟ– ಪವನ ರಾಜ್
ಅತ್ಯುತ್ತಮ ಸಿನಿಮಾ AVGC, ಬ್ರಹಾಸ್ತ್ರ (ಹಿಂದಿ)
ಅತ್ಯುತ್ತಮ ಫೀಚರ್ ಫಿಲ್ಮ್: ಕಚ್ ಎಕ್ಸ್‌ಪ್ರೆಸ್(ಗುಜರಾತಿ)

"ಪ್ರಶಸ್ತಿ ಬಂದಿರುವುದು ಖುಷಿ ತಂದಿದೆ. ಇಡೀ ತಂಡಕ್ಕೆ ಈ ಸಲ್ಲುತ್ತದೆ. ನಾನು ಮೊದಲಿನಿಂದಲೂ ಹೇಳುತ್ತಿದ್ದೆ ಕಾಂತಾರದ ಯಶಸ್ಸನ್ನು ನಾನು ಅಪ್ಪು ಸರ್‌ಗೆ , ದೈವ ನರ್ತಕರು ಮತ್ತು ಅವರ ಕುಟುಂಬದವರಿಗೆ ಅರ್ಪಿಸಿದ್ದೆ. ಜೊತೆಗೆ ಕನ್ನಡ ಜನತೆಗೆ ಕೂಡ ಅರ್ಪಿಸುತ್ತೇನೆ. ಇಲ್ಲಿವರೆಗೆ ಬರಲು ನಿಜವಾಗಲೂ ಕನ್ನಡ ಜನತೆಯೇ ಬೆಂಬಲ ಕೊಟ್ಟಿರುವುದು. ಜೊತೆಗೆ ಇಡೀ ತಂಡ ಪ್ರಯತ್ನ ಇದೆ. ಎಲ್ಲರೂ ಒಗ್ಗಟ್ಟಾಗಿ ಇದ್ದು ಸಿನೆಮಾದ ಕೆಲಸವನ್ನು ಕಷ್ಟಪಟ್ಟು ಮಾಡಿಕೊಂಡು ಬಂದಿದ್ದೇವೆ. ಇಂದು ಕೂಡ ಅದೇ ತಂಡದ ಜೊತೆಗೆ ನಾನು ಕೆಲಸ ಮಾಡುತ್ತಿದ್ದೇನೆ. ಹಾಗಾಗಿ ಇಡೀ ತಂಡಕ್ಕೆ ನಾನು ಇದನ್ನು ಅರ್ಪಿಸುತ್ತೇನೆ. ಜನರಿಗಿಂತ ದೊಡ್ಡದು ಯಾವುದೂ ಇಲ್ಲ. ಜನ ಚಿತ್ರ ನೋಡಿ ಮೆಚ್ಚಿಕೊಂಡಾಗ ಸಿನೆಮಾ ಮಾಡುವ ಪ್ರತಿಯೊಬ್ಬರಿಗೂ ಅದು ಮುಖ್ಯವಾಗುತ್ತದೆ. ಜನ ಒಂದು ಕಿರೀಟ ಕೊಟ್ಟಿರುತ್ತಾರೆ. ಅದರ ಮೇಲೆ ಒಂದು ಗರಿಯನ್ನು ಕೊಟ್ಟಾಗ ತುಂಬಾ ಜವಾಬ್ದಾರಿ ಇರುತ್ತದೆ. ಇನ್ನೂ ಹೆಚ್ಚಿನ ಕೆಲಸ ಮಾಡಬೇಕಾಗುತ್ತದೆ. ಇಡೀ ತಂಡಕ್ಕೆ, ಡಿಓಪಿ ಅರಂವಿಂದ್ ಕಶ್ಯಪ್, ಅಜನೀಶ್ ಲೋಕನಾಥ್, ನನ್ನ ಪತ್ನಿ, ವಸ್ತ್ರ ವಿನ್ಯಾಸಕಿ ಪ್ರಗತಿ, ಹೊಂಬಾಳೆ ಫಿಲ್ಮ್ಸ್ ಎಲ್ಲರಿಗೂ ಧನ್ಯವಾದ ಹೇಳುತ್ತೇನೆ.



–ರಿಷಬ್‌ಶೆಟ್ಟಿ, ಕಾಂತಾರ ಚಿತ್ರದ ನಿರ್ದೇಶಕ, ನಾಯಕ ನಟ

ಜಮ್ಮು–ಕಾಶ್ಮೀರ, ಹರಿಯಾಣ ವಿಧಾನಸಭೆ ಚುನಾವಣೆ ದಿನಾಂಕ ಘೋಷಣೆ; ಅ.4ಕ್ಕೆ ಫಲಿತಾಂಶ

ನವದೆಹಲಿ, ಆ.16– ಲೋಕಸಭೆ ಚುನಾವಣೆ ಬಳಿಕ ರಾಜ್ಯಗಳಲ್ಲಿ ನಡೆಯ ಲಿರುವ ವಿಧಾನಸಭಾ ಚುನಾವಣೆಗೆ ಚುನಾವಣಾ ಆಯೋಗ ದಿನಾಂಕವನ್ನು ಘೋಷಿಸಿದೆ. ಜಮ್ಮು–ಕಾಶ್ಮೀರದಲ್ಲಿ ಸೆಪ್ಟೆಂಬರ್ 18ರಿಂದ 3 ಹಂತಗಳಲ್ಲಿ ಮತದಾನ ನಡೆಯಲಿದೆ. ಹರಿಯಾಣ ದಲ್ಲಿ ಅಕ್ಟೋಬರ್ 1ರಂದು ಮತದಾನ ನಡೆಯಲಿದೆ. ಅಕ್ಟೋಬರ್ 4ರಂದು ಎರಡೂ ರಾಜ್ಯಗಳ ಫಲಿತಾಂಶ ಹೊರಬೀಳಲಿದೆ. ಜಮ್ಮು–ಕಾಶ್ಮೀರದಲ್ಲಿ 3 ಹಂತಗಳಲ್ಲಿ ಮತದಾನ ನಡೆದರೆ, ಹರಿಯಾಣದಲ್ಲಿ ಒಂದೇ ಹಂತದಲ್ಲೇ ಮತದಾನ ನಡೆಯಲಿದೆ ಎಂದು ಮುಖ್ಯ ಚುನಾವಣಾ ಆಯುಕ್ತ ರಾಜೀವ್ ಕುಮಾರ್ ತಿಳಿಸಿದರು. ಜಮ್ಮು ಮತ್ತು ಕಾಶ್ಮೀರದಲ್ಲಿ ಸೆಪ್ಟೆಂಬರ್ 18, ಸೆಪ್ಟೆಂಬರ್ 25 ಮತ್ತು ಅಕ್ಟೋಬರ್ 1 ರಂದು ಮತದಾನ ನಡೆಯಲಿದೆ. ಅಕ್ಟೋಬರ್4 ರಂದು ಫಲಿತಾಂಶ ಪ್ರಕಟವಾಗಲಿದೆ. ಅಕ್ಟೋಬರ್ 1 ರಿಂದ ಹರಿಯಾಣದಲ್ಲಿ ಒಂದೇ ಹಂತದಲ್ಲಿ ಮತದಾನ ನಡೆಯಲಿದ್ದು, ಅಕ್ಟೋಬರ್ 4 ರಂದು ಫಲಿತಾಂಶಗಳನ್ನು ಪ್ರಕಟಿಸಲಾಗುವುದು.

ನಿಧನ



ಶ್ರೀಮತಿ ಬಿ.ಆರ್.ಪದ್ಮ

ಮೈಸೂರು, ಆ.16– ಮೈಸೂರಿನ ವಿಜಯ ವಿಠಲ ಹೈಸ್ಕೂಲ್ ಶಿಕ್ಷಕಿ ಶ್ರೀಮತಿ ಬಿ.ಆರ್.ಪದ್ಮ(63) ಆ.8 ರಂದು ನಿಧನರಾಗಿದ್ದಾರೆ. ಮೃತರು ಓರ್ವ ಪುತ್ರ, ಓರ್ವ ಪುತ್ರಿ ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಅದೇ ದಿನ ಚಾಮುಂಡಿಬೆಟ್ಟದ ತಪ್ಪಲಿನಲ್ಲಿರುವ ರುದ್ರಭೂಮಿಯಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ ರೂ. 600+30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 0821–2496522/23

ದಟ್ಟಗಳ್ಳಿಯಲ್ಲಿ ಇರುವ ಶುಭಪ್ರದ ಸೀರೆ ಶೋ ರೂಮಿಗೆ
ಮಹಿಳೆಯರು ಸೇಲ್ಸ್‌ಗೆ ಬೇಕಾಗಿದ್ದಾರೆ
ವಯಸ್ಸು: 25 – 35ರ ವರೆಗೆ
Mob: 6364546699

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 7204494854

SITE FOR SALE
#179, NORTH WEST CORNER, BVL LAYOUT , T NARASIPURA ROAD, MYSURU
E-W 8.5 X N-S 11.16 mtrs
CONTACT :
9902434877

RMS PHARMA
Krishnamurthy puram, Mysore
REQUIRED
PHARMACIST
with license.
Freshers are invited
Call : 96115 54441

ಬೇಕಾಗಿದ್ದಾರೆ
ಸಿವಿಲ್ ಇಂಜಿನಿಯರ್ 1 ಹುದ್ದೆ
ಸೈಟ್ ಇಂಜಿನಿಯರ್ 2 ಹುದ್ದೆ
8904233002

ಮನೆ ಭೋಗ್ಯಕ್ಕೆ ಇದೆ
ಕೇರ್ಗಳ್ಳಿ 30x40
(ಅಟ್ಯಾಚ್ ಬಾತ್ರೂಮ್)
2 BHK
9742236266
9945616145

ನೀವು ತಯಾರಿಸಿದ ವಸ್ತುವಿಗೆ ಮಾರುಕಟ್ಟೆ ಮಾಡಿ ಕೊಡಬೇಕಾ?
ಅಥವಾ
ನಿಮಗೆ ಕೆಲಸ ಬೇಕೇ?
9535666172

Job Opening in Mysore for woman Employees only
Age group 30 t0 45 years
Education Degree
salary 15k to 20k
ESI and PF
8050292837

SITE FOR SALE
30x40, west face, old RT nagar, near sharda public school, dattagalli
8217042841

HOUSE FOR SALE
ಮನೆ ಮಾರಾಟಕ್ಕಿದೆ
30x40 ಅಳತೆಯಲ್ಲಿ ಉತ್ತರ ದಿಕ್ಕಿನ ವಾಸ್ತುವುಳ್ಳ ಮನೆ ಮಾರಾಟಕ್ಕಿದೆ. ಚಾಮುಂಡೇಶ್ವರಿ ರೈಲ್ವೆ ಲೇಔಟ್ (ಕೆ.ಆರ್.ಎಸ್.ರೋಡ್) 2 ಕಿ.ಮೀ. ರಿಂಗ್ ರಸ್ತೆಯಿಂದ
Very Good Location with Clear Title + Cauvery Water
Genuine Buyer Contact.
9482746287

Sites for Sale
'Balaji Siri'
30X40, 30X50
Premium plots at T. Narasipura Main Road, attached to National Highway
Ready for Registration
Call: 9113687489

CHANGE OF NAME
I, NEELAKANTA SIDDALINGAPPA, S/o. Siddalingappa, residing at No. 165, Nandini Layout, T. Narsipura Road, Alanahalli, Mysore-570028 do hereby solemnly affirm on oath that, I have changed my name from NEELAKANTHA SIDDALINGAPPA to NEELAKANTA SIDDALINGAPPA on my own free will vide affidavit sworn in before Notary L.N. Rajendran on 13/08/2024. In future all transactions whatsoever, I will sign & identified as NEELAKANTA SIDDALINGAPPA
Sd/- NEELAKANTA SIDDALINGAPPA

ಬೋಳು ತಲೆಯ ಸಮಸ್ಯೆಯೇ?



ಕಿಮೊತೆರಪಿ ಚಿಕಿತ್ಸೆಗೆ ಒಳಪಡುತ್ತಿರುವ ರೋಗಿಗಳಿಗೆ ಸ್ಪರ್ಧಾತ್ಮಕ ಬೆಲೆಯಲ್ಲಿ ಹೇರ್ ವಿಗ್‌ಗಳು ದೊರೆಯುತ್ತವೆ.
SMART HAIR FIXING
574, 9th Cross, Anikethana Road, kuvempunagar, Mysuru
MYSURU 9611028523 MANGALORE 9343142258

ಟೇಸ್ಟಿ ಟ್ರೆಂಡ್ ಐಸ್ ಕ್ರೀಂಸ್
ಮದುವೆ ಹಾಗೂ ಸಮಾರಂಭಗಳಿಗೆ ಐಸ್ ಕ್ರೀಂ ಸರಬರಾಜು ಮಾಡುತ್ತೇವೆ. ಹಾಗೂ ಡಿಸ್ಟ್ರಿಬ್ಯೂಟರ್‌ಗಳು ಬೇಕಾಗಿದ್ದಾರೆ.
ಶಾಂತು: 9964180027
ಅನಂತು: 9886343896

WANTED
For Part Time Job
No Target,
No Investment
Male / Female
As Customer Consultant
No Age Limit
8197945400

ಬೇಕಾಗಿದ್ದಾರೆ
ದಿನಸಿ ಅಂಗಡಿಯಲ್ಲಿ ಕೆಲಸ ಮಾಡಲು ಅನುಭವವುಳ್ಳ ಹುಡುಗರು/ಕಂಪ್ಯೂಟರ್ ಬಿಲ್ಲಿಂಗ್, ಕ್ಯಾಶಿಯರ್ಸ್ ಬೇಕಾಗಿದ್ದಾರೆ.
ಇಚ್ಛೆಯುಳ್ಳವರು ಸಂಪರ್ಕಿಸಿ:
ಬಾಲಕೃಷ್ಣ ಪ್ರಾವಿಷನ್ ಸ್ಟೋರ್ಸ್
1. ಕರ್ನಾಟಕ ಬ್ಯಾಂಕ ಹತ್ತಿರ, ನಜರ್‌ಬಾದ್, ಮೈಸೂರು
2. ಶಿಷ್ಯರಣಿ ಸ್ಕೂಲ್ ಹತ್ತಿರ, ಹೆಬ್ಬಾಳ್, ಮೈಸೂರು

2.5 BHK
HOME INTERIORS @ ₹ 2.5 Lakh*
Home Space Mart
*T&C Apply
91089 23123

ಕರ್ನಾಟಕದಾದ್ಯಂತ ಪ್ರಸಿದ್ಧ MNC ಕಂಪನಿಗಳಿಗೆ
ಕಂಪನಿ, ಮತ್ತು ಆಫೀಸ್ ಕೆಲಸದ ಉದ್ಯೋಗಗಳಿಗೆ ತಕ್ಷಣ ಯುವಕ ಯುವತಿಯರು ಬೇಕಾಗಿದ್ದಾರೆ ಯಾವುದೇ ಸಂದರ್ಶನ ಇರುವುದಿಲ್ಲ ಪ್ರಸಿದ್ಧ ಕಂಪನಿಗಳಲ್ಲಿ, ಅಕೌಂಟೆಂಟ್, ಡೇಟಾ ಆಪರೇಟರ್, ಟೆಲಿಕಾಲರ್, ಕ್ಯಾಶಿಯರ್, ಆಫೀಸ್ ಬಾಯ್, ಮತ್ತು ಮ್ಯಾನುಫ್ಯಾಕ್ಚರಿಂಗ್ ಕೆಲಸಕ್ಕೆ ಬೇಕಾಗಿದ್ದಾರೆ, ಶಿಕ್ಷಣ 4ನೇ ತರಗತಿ ಇಂದ ಯಾವುದೇ ಪದವೀಧರರು, (* ಸಂಬಳ : 18000 Rs ಇಂದ 30000 Rs + ಇನ್ಸೆಂಟಿವ್ಸ್*). ಹೆಚ್ಚಿನ ಮಾಹಿತಿಗಾಗಿ ಇಂದೇ ಸಂಪರ್ಕಿಸಿ:
9632831680, 7411273440

FOR RENT
1st Floor, 15x40, 600 ft. Hall with bathroom, suitable for office, godown.
Near Jaganmohan Palace, behind Parakala Mutt, Ramanna Street.
Brokers Excuse
R. Leeladhar - 9449408002

ಕೆಲಸಕ್ಕೆ ಬೇಕಾಗಿದ್ದಾರೆ
ಮೈಸೂರು ಕೈಗಾರಿಕಾ ಪ್ರದೇಶ ಕೂರ್ಗಳ್ಳಿ, ಮೇಟಗಳ್ಳಿ, ಹಿನಕಲ್ ಇಲ್ಲಿ ಉನ್ನತ ಕಂಪನಿ, ಕಾರ್ಖಾನೆಗಳಲ್ಲಿ ಹಾಗೂ ಮೆಡಿಕಲ್‌ಗಳು ರೆಸಾರ್ಟ್ ಗಳಲ್ಲಿ ಕೆಲಸ ಮಾಡಲು ಸಪ್ಲೈರ್‌ಗಳು ಹಾಗೂ ಕಾರ್ಖಾನೆಗಳಲ್ಲಿ ಕೆಲಸ ಮಾಡಲು Helper ಗಳು ಸೆಕ್ಯೂರಿಟಿಗಳು, ಹೌಸ್ ಕೀಪಿಂಗ್, ಬೇಕಾಗಿದ್ದಾರೆ. 7th, 10th Any Degree & ITI, Deploma Pass & Fail ಹುಡುಗರು & ಹುಡುಗಿಯರು ಕೆಲಸಕ್ಕೆ ಬೇಕಾಗಿದ್ದಾರೆ. ಕೋ–ಆಪರೇಟಿವ್ ಸೊಸೈಟಿ ಹಿನಕಲ್ ಇಲ್ಲಿ ಕೆಲಸ ಮಾಡಲು, ಬಿ.ಕಾಂ. ಕಂಪ್ಯೂಟರ್ ಜ್ಞಾನವುಳ್ಳವರು ಬೇಕಾಗಿದ್ದಾರೆ.
Office Staff (Male Only)
9611208553, 9036461347

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 8296341145

ಸುವರ್ಣ ಯಾತ್ರ
ನೇಪಾಳ ಅಯೋಧ್ಯ ಮುಕ್ತಿನಾಥ ಪಶುಪತಿನಾಥ ಪ್ರವಾಸ 9 ದಿನಗಳು, ಕಾಶಿ ಗಯಾ ಬಾಬಾ ವೈದ್ಯನಾಥ್ ಪ್ರವಾಸ 7 ದಿನಗಳು, ಭೂತಾನ್ ಪ್ರವಾಸ 7 ದಿನಗಳು ಸುವರ್ಣ ಯಾತ್ರ ಸಂಪರ್ಕಿಸಿ:
8660233673
6360146483

---

neem BOND PLATINUM®
PLY / DOORS @ FACTORY RATES
MANUFACTURER 10 YEARS WARRANTY
9901291267 / 9845426862

R.S. Construction
Engineers & Contractors
ನಿಮ್ಮ ಕನಸಿನ ಮನೆಯನ್ನು ಉತ್ಕೃಷ್ಟ ಗುಣ ಮಟ್ಟದಲ್ಲಿ ಅತ್ಯಂತ ಕಡಿಮೆ ಬೆಲೆಯಲ್ಲಿ ನಾವು ನಿರ್ಮಿಸಿ ಕೊಡುತ್ತೇವೆ.
ದರ 1,80,000/– ಪ್ರತಿ ಚದರ
ಉಚಿತ ಪ್ಲಾನ್ ಕೂಡ ಮಾಡಿಕೊಡಲಾಗುತ್ತದೆ. ಇಂದೇ ಸಂಪರ್ಕಿಸಿ.
9538575009, 7019151884

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 8618373596

ಮ್ಯಾನೇಜರ್ ಬೇಕಾಗಿದ್ದಾರೆ
ಕನ್ನಡ, ಹಿಂದಿ, ಇಂಗ್ಲೀಷ್ ಕಂಪ್ಯೂಟರ್ ಜ್ಞಾನ ಹೊಂದಿರಬೇಕು ಸೂಕ್ತ ವಾಹನ ಇರಬೇಕು
18–08–2024ಸಮಯ ಬೆಳಿಗ್ಗೆ 11.00 ಗಂಟೆಗೆ, ಬೆಳವಾಡಿ, ಮೈಸೂರು
9900318170
9844530714

MUDA APPROVED SITES FOR SALE
ಸಿಪಾಯಿ ಪ್ರಾಪರ್ಟೀಸ್ ಇಲವಾಲ
1. ಕುಬೇರನಂದ ಸಾಗರ ಲೇಔಟ್, East Face 30x40 ಸೈಟ್ ಮಾರಾಟಕ್ಕಿದೆ ಬೆಲೆ 26 ಲಕ್ಷ ನೆಗೋಷಿಯೇಬಲ್
2. ಬ್ರಹ್ಮಾನಂದ ಸಾಗರ ಲೇಔಟ್ West Face 30x40 ಸೈಟ್ ಮಾರಾಟಕ್ಕಿದೆ ಬೆಲೆ 40ಲಕ್ಷ ನೆಗೋಷಿಯೇಬಲ್
3. ಕುಬೇರ ಶೆಲ್ಟರ್ ಲೇಔಟ್ 40 ಅಡಿ ರಸ್ತೆ North face 30x40 ಸೈಟ್ ಮಾರಾಟಕ್ಕಿದೆ. ಬೆಲೆ 25 ಲಕ್ಷ ನೆಗೋಷಿಯೇಬಲ್
ನಂಜುಂಡಸ್ವಾಮಿ ಹೆಚ್.ಎಸ್, ಮಾಜಿ ಸೈನಿಕರು
9483862050,7829779070

ಹೊಸ ಮನೆ ಮಾರಾಟಕ್ಕಿದೆ
ಸರ್ದಾರ್ ವಲ್ಲಭಾಯಿಪಟೇಲ್ ನಗರ ಮುಡಾ ಅನುಮೋದಿತ ಲೇಔಟ್ 20*40 ಅಡಿ. ಪೂರ್ವ ದಿಕ್ಕು. 3 ಬಿಹೆಚ್‌ಕೆ. ಬೋರ್‌ವೆಲ್ ಮತ್ತು ಪಿಲ್ಲರ್ ಹೊಂದಿದೆ, 100% ವಾಸ್ತು, ಉತ್ತಮ ಗುಣಮಟ್ಟದ ಹೊಸ ಮನೆ
Call: 9380284276

Sump & Tank Solar & Cleaning, Water Level Controller Service
Mob: 8861612486

ಸಾಲ/LOANS
House / Site Purchase
Construction Loan
Mortgage Loan
(Loans for MUDA, CORPORATION Revenue, 11A & 11B Property)
77605-98705

ನಿರ್ಮಲ ಸರ್ವೀಸ್
ಸಂಪು ಕ್ಲೀನಿಂಗ್‌ಗಾಗಿ ಸಂಪರ್ಕಿಸಿ:
6364079244

ಬೇಕಾಗಿದ್ದಾರೆ
ಜೆ.ಪಿ.ನಗರ ಮತ್ತು ಚಾಮುಂಡಿ ಪುರಂ ಏರಿಯಾಗಳಲ್ಲಿ ಕರ್ತವ್ಯ ನಿರ್ವಹಿಸಲು ಅನುಭವವುಳ್ಳ ಸೆಕ್ಯೂರಿಟಿ ಗಾರ್ಡ್‌ಗಳು ಬೇಕಾಗಿದ್ದಾರೆ. 16000 ವೇತನದೊಂದಿಗೆ ESI &PF ಮತ್ತು ಊಟದ ವ್ಯವಸ್ಥೆ ಇರುತ್ತದೆ ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ
9035050653
9035050654

SITE FOR SALE
40x60 at Dattagalli, Kuvempunagar, Roopa Nagar, Vijayanagar 4th Stage, 50x80 at Dattagalli, Vijayanagar 4th Stage
40x60 House Sale at Ramakrishnanagar
9663136318
9844915554

ವೆರಿಕೋಸ್ ವೆಯಿನ್ಸ್ ತೊಂದರೆಯೇ?
ನರಗಳು ಉಬ್ಬಿದೆಯೇ? / ಗಾಯವಾಗಿದೆಯೇ?
ಯಾವುದೇ ಔಷಧಿ ಸೇವನೆ ಇಲ್ಲದೆ, ತಜ್ಞರಿಂದ ಸಂಶೋಧಿಸಿದ ಔಷಧಿ/ತೈಲ/ಲೇಪವನ್ನು ಮೇಲೆ ಮಸಾಜ್ ಮಾಡುವ ಮೂಲಕ ಪರಿಣಾಮಕಾರಿ ಚಿಕಿತ್ಸೆಯನ್ನು ನೀಡಲಾಗುವುದು.
Dr. ಸಹನಾ B.A.M.S, PGPDAC, PGDAN
8861137033

ಟ್ಯಾಂಕ್ ಮತ್ತು ಸೋಲಾರ್ ಸರ್ವೀಸ್
ಜರ್ಮನ್ ಟೆಕ್ನಾಲಜಿ ಬಳಸಿ ಸಂಪು, ಟ್ಯಾಂಕ್ ಮತ್ತು ಸೋಲಾರ್ ಸರ್ವೀಸ್ ಮಾಡಲಾಗುತ್ತದೆ.
Mob: 9008711654

ಬೇಕಾಗಿದ್ದಾರೆ
ಕಂಪ್ಯೂಟರ್ ಟೈಪಿಂಗ್ ಮಾಡಲು ಬರುವಂತಹ ಅಭ್ಯರ್ಥಿಗಳು ಆಫೀಸ್ ಕೆಲಸಕ್ಕೆ ಬೇಕಾಗಿದ್ದಾರೆ.
ಶೇಖರ್ : 9945911118
ಅನಿಲ್ : 7026996123
ARTHOR SERVICES PVT.LTD
No.L-89, 2nd Floor, M Block, Opp. Karuna Hospital, Kuvempunagar, Mysore-570023

ಮೊಬೈಲ್‌ನಲ್ಲಿ ಕೆಲಸ ವಾರದ ಸಂಬಳ
NO TARGET, TYPING WORK
ತಿಂಗಳಿಗೆ ರೂ.10,000 ರಿಂದ ರೂ.25,000 ಗಳಿಸಬಹುದು.
8884439666

ವಧು–ವರಾನ್ವೇಷಣೆ
ಒಕ್ಕಲಿಗ/ಕುರುಬ/ ಲಿಂಗಾಯತ/ನಾಯಕ SC & ಎಲ್ಲಾ ಜಾತಿಯ ವಧು–ವರರಿಗಾಗಿ ಕೂಡಲೇ ಸಂಪರ್ಕಿಸಿ
(II Marriages Also)
9343175000

WANTED
30X40 SITE In Vijayanagar I, II, II Phase
8884133677

SITE FOR SALE
(25x40) Kuvempunagar
(15x55), Saraswathipuram
(40x60) Nithyanandasagar
Mys-Hunsur Road
50 Lacks
93421-25252

WANTED
A reputed lodge in the heart of the City is looking for a receptionist role, Those having Previous experience or freshers also can apply but (having computer & hotel industry knowledge Prefred first)
9663991888
9739742344

WANTED
* Telecallers
* Marketing Manager
* TV Anchors
* PigMe collection boy
* Office Assistant
Contact:
9980959598

ಬೇಕಾಗಿದ್ದಾರೆ
ಮೈಸೂರಿನಲ್ಲಿ ಹೊಸದಾಗಿ ಪ್ರಾರಂಭವಾಗಿರುವ ಸಸ್ಯಹಾರಿ ಹೋಟೆಲ್‌ಗೆ ಕೆಲಸಗಾರರು ಬೇಕಾಗಿದ್ದಾರೆ. ಕಿಚನ್ ಸೂಪರ್‌ವೈಸರ್ – 2, ಸಪ್ಲೆಯರ್ಸ್ – 6, ಹೌಸ್ ಕೀಪಿಂಗ್ – 3, ಕ್ಯಾಶಿಯರ್ – 3, ಟೇಬಲ್ ಕ್ಲೀನರ್ಸ್ – 2, ಕಾಫಿ ಟೀ ಭಟ್ಟರು – 2, ಜ್ಯೂಸ್ ಮೇಕರ್ – 2.
ಕೂಡಲೇ ಸಂಪರ್ಕಿಸಿ:
8317454665

ಬೇಕಾಗಿದ್ದಾರೆ
ಪೆಟ್ರೋಲ್ ಬಂಕ್‌ನಲ್ಲಿ ಕೆಲಸ ಮಾಡಲು ಯುವಕರು (ಹುಡುಗರು) ಬೇಕಾಗಿದ್ದಾರೆ ಆಕರ್ಷಕ ಸಂಬಳ ESI ಮತ್ತು PF ನೊಂದಿಗೆ ಉಚಿತ ವಸತಿ ಸೌಲಭ್ಯವಿರುತ್ತದೆ. 6 ತಿಂಗಳಿಗೊಮ್ಮೆ ವೇತನವನ್ನು ಹೆಚ್ಚು ಮಾಡ ಲಾಗುವುದು. ಸ್ಥಳ: ಬಂಡಿಪಾಳ್ಯ, ಮೈಸೂರು.
Mob: 9739294107

ಬೇಕಾಗಿದ್ದಾರೆ
ಫರ್ನಿಶಿಂಗ್ ಅಂಗಡಿಯಲ್ಲಿ ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ.
ಸಂಬಳ: 12000 ರಿಂದ 15000 ಸಾವಿರದವರೆಗೆ
ಸ್ಥಳ: ಶಾರದಾದೇವಿನಗರ, ಮೈಸೂರು
8050744784

40x60 SITE FOR SALE
Site No. 12365
South / Park Facing
Near Ring Road
Vijayanagar 4th Stage
Price : 1.75 Crores
For Full Value Registration
7899214181

NEW HOUSE FOR SALE
@ MUDA Layout
2+1 BHK 20x30 South Facing Site East Facing Door, Shanthaveri Gopal Gowda Nagar, Mysore
9740019514
9738884777

ಬೇಕಾಗಿದ್ದಾರೆ
ಲೇಡೀಸ್ PG ಯಲ್ಲಿ ಅಡುಗೆ ಸಹಾಯಕಿ ಕೆಲಸಕ್ಕೆ ಮಹಿಳೆ ಬೇಕಾಗಿದ್ದಾರೆ. ಊಟ ವಸತಿ ಇರುತ್ತದೆ. ಕಡ್ಡಾಯವಾಗಿ PG ಯಲ್ಲೆ ಉಳಿಯಬೇಕು.
9986622769
9535744143

ಬೇಕಾಗಿದ್ದಾರೆ
ಟಿ.ಕೆ.ಲೇಔಟ್ ಅಂಗಡಿಯಲ್ಲಿ ಅನುಭವವುಳ್ಳ ಕಂಪ್ಯೂಟರ್ ಬಿಲ್ಲಿಂಗ್‌ಗೊತ್ತಿರುವ ಕ್ಯಾಶಿಯರ್ ಬೇಕಾಗಿದ್ದಾರೆ.
9742421313
9945779947

ಶೀಘ್ರ ವಿವಾಹಕ್ಕಾಗಿ ಸಂಪರ್ಕಿಸಿ
ಬಿಲ್ಲವ, ಪೂಜಾರಿ, ಈಡಿಗ, ಬಂಟ್ಸ್, ಶೆಟ್ಟಿ, ಕುಲಾಲ್, ದೇವಾಡಿಗ, ಬ್ರಾಹ್ಮಣ, ಕ್ಷತ್ರಿಯ, ಲಿಂಗಾಯತ, ಗಾಣಿಗ, ಮೊಗವೀರ, ಜೋಗಿ, ದಾಸ್, ಒಕ್ಕಲಿಗ ಗೌಡ, ಕೊಟ್ಟಾರಿ, SC, ST ಪರಿಶಿಷ್ಟ ಜಾತಿ, ಪಂಗಡ, ಕ್ರಿಶ್ಚಿಯನ್, ಮುಸ್ಲಿಂ, ಜಾತಿಯ ಅಭ್ಯಂತರವಿಲ್ಲದವರು, GSB, RSB ಕೊಂಕಣಿ, ಜೈನ್, ಇನ್ನಿತರ ಎಲ್ಲಾ ಜಾತಿಯ ವಧು–ವರರಿಗಾಗಿ ಸಂಪರ್ಕಿಸಿ: (ಎರಡನೇ ವಿವಾಹಕ್ಕಾಗಿ) ವಿಧವೆ, ವಿಧುರ, ವಿಚ್ಛೇದಿತರು, ಜಾತಿಯ ಅಭ್ಯಂತರವಿಲ್ಲದವರು ಸಂಪರ್ಕಿಸಬಹುದು. ಸದ್ಗುಣವಂತ ವಧು–ವರರ ಹೆಸರು ನೋಂದಾಯಿಸಿ (ವಿವಾಹ ವೇದಿಕೆ.)
8792731562

ಮನೆ ಬಾಡಿಗೆಗೆ ದೊರೆಯುತ್ತದೆ
ಪ್ರೌಢಶಾಲಾ ಶಿಕ್ಷಕ ಬಡಾವಣೆ ಜೆ.ಪಿ.ನಗರ ರಿಂಗ್ ರೋಡ್
IIF 2BHK, IIIF,
1 BHK ಸೋಲಾರ್ ಇದೆ.
24x7 ನೀರಿನ ಸೌಲಭ್ಯ ಇದೆ.
8073593931
9901400974

ಕುವೆಂಪುನಗರದ
'ಎಂ.ಬ್ಲಾಕ್'ನಲ್ಲಿರುವ ಬ್ರಾಹ್ಮಣರ ಮನೆಯಲ್ಲಿ ತಯಾರಾದ ಶುದ್ಧ ಸಸ್ಯಾಹಾರಿ ತಿಂಡಿ ಊಟವನ್ನು ನಿಮ್ಮ ಮನೆಯ ಬಾಗಿಲಿಗೆ ಸಪ್ಲೈ ಮಾಡಲಾಗುತ್ತದೆ.
9449380528
9242509325
7026493259

ತಕ್ಷಣ ಬೇಕಾಗಿದ್ದಾರೆ
ಅಗ್ರಹಾರ, RTO ಏರಿಯಾದಲ್ಲಿ ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡುಗಳು ಬೇಕಾಗಿದ್ದಾರೆ.
ವಿದ್ಯಾರ್ಹತೆ: SSLC ಮತ್ತು ಮೇಲ್ಪಟ್ಟು
ಸಂಬಳ: 18000+W/o 8hrs
ಊಟ ತಿಂಡಿ ಸೌಲಭ್ಯವಿರುತ್ತದೆ.
7006635122
9620777819

---

2 SITES FOR SALE
(30x40)
Trimurthy Nagara (Near Acharya Vidyakula & Central St. Joseph School) Mysore-Hunsur Road - 22 Lakshs
95388-39926

20X30 Newly construction house for sale west facing north door G+2 3BHK DATAGALI
30X40 new house for sale west facing north door G+2 Somnathanagar datagali
9900251194
9738884777

ಹೋಂ ನರ್ಸ್ ಬೇಕಾಗಿದ್ದಾರೆ
ವಯಸ್ಸಾದವರನ್ನು, ರೋಗಿಗಳನ್ನು ನೋಡಿಕೊಳ್ಳಲು ಅನುಭವ ಇರುವ ಇಲ್ಲದೆ ಇರುವ ಯುವಕ, ಯುವತಿಯರು ಮಹಿಳೆಯರು ಬೇಕಾಗಿದ್ದಾರೆ ನಮ್ಮ ಸಂಸ್ಥೆಯಲ್ಲಿ ಉಳಿದುಕೊಂಡು ಕೆಲಸ ಮಾಡುವವರು ತಕ್ಷಣ ಸಂಪರ್ಕಿಸಿ
9739292222

ಇಂದೇ ಸಂಪರ್ಕಿಸಿ
ಮೈಸೂರಿನ ಪ್ರತಿಷ್ಠಿತ ಕಂಪನಿ Office Showroom ಗಳಿಗೆ 7th, 10th, puc, Any Degree, Pass / Fail ಆದ ಯುವಕ/ ಯುವತಿಯರಿಗೆ Packing, Helper, Computer operator, Typing, Receptionist, Voice Process, ಮುಂತಾದ ಹುದ್ದೆಗಳಿಗೆ ಬೇಕಾಗಿದ್ದಾರೆ.
ಸಂಬಳ: 14500/- 38500/- (ESI+PF OT) ಸೇರಿ
6366141586,9513829246

ಹೊಸ ಮನೆ ಮಾರಾಟಕ್ಕಿದೆ
20x40, 3BHK South West Corner Railway ಬಡಾವಣೆ JP Nagar ರಮಾಬಾಯಿ ನಗರ
9448307057
9036286661

ವರ ಬೇಕಾಗಿದ್ದಾರೆ
44 ವರ್ಷದ ಹಿಂದು ವಧುವಿಗೆ ಸ್ವಂತ ಮನೆ, ಗದ್ದೆ ಹೊಂದಿರುವ ಕೃಷಿ ಅವಲಂಬಿತ ಅಥವಾ ಯಾವುದೇ ವೃತ್ತಿಯಲ್ಲಿರುವ ಯಾವುದೇ ಜಾತಿಯ 45 ರಿಂದ 60 ವರ್ಷದೊಳಗಿನ ವಿದುರ ವಿಚ್ಛೇದಿತ ಅಥವಾ ಮೊದಲನೆಯ ಸಂಬಂಧದ ವರ ಬೇಕಾಗಿದ್ದಾರೆ.
(ಬ್ರಾಹ್ಮಣರಿಗೆ ಮೊದಲ ಆದ್ಯತೆ)
6362631827

ಸೆಕ್ಯೂರಿಟಿ ಗಾರ್ಡ್ಸ್‌ಗಳು ಬೇಕಾಗಿದ್ದಾರೆ
ಮೈಸೂರಿನ ಸುತ್ತಮುತ್ತ ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡ್ಸ್‌ಗಳು ಬೇಕಾಗಿದ್ದಾರೆ. ವಯಾಮಿತಿ 55 ವರ್ಷದೊಳಗೆ ಉತ್ತಮ ವೇತನ ಹಾಗೂ ಪಿಎಫ್‌ಇಎಸ್‌ಐ ಇರುತ್ತದೆ.
6361765969
8792815411

ನಿವೃತ್ತ ನೌಕರರಿಗೆ ಉದ್ಯೋಗಾವಕಾಶ ಸೆಮಿನಾರ್
ಭಾರತದ ಅತ್ಯಂತ ವಿಶ್ವಾಸಾರ್ಹ ಬ್ಯಾಂಕ್ ಸಮೂಹ ಸಂಸ್ಥೆಯಲ್ಲಿ ಉದ್ಯೋಗ ಮತ್ತು Business ಅವಕಾಶದ ಸೆಮಿನಾರ್ ಏರ್ಪಡಿಸಲಾಗಿದೆ. Benifits (1) Fixed Salary+PF+ESI+ ಇತರೆ ಭತ್ಯೆಗಳು ಲಭ್ಯವಿರುತ್ತದೆ. ಬೇಕಾಗುವ ದಾಖಲಾತಿಗಳು: 1) ಫೋಟೋ, 2) ಪಾನ್ ಕಾರ್ಡ್, 3) ಆಧಾರ್ ಕಾರ್ಡ್, 4) ಬ್ಯಾಂಕ್ ಪಾಸ್ ಪುಸ್ತಕ, ಎಸ್.ಎಸ್.ಎಲ್.ಸಿ ಮಾರ್ಕ್ ಕಾರ್ಡ್ ಜೆರಾಕ್ಸ್. ಸ್ಥಳ:ಹೋಟೆಲ್ ಪಂಚವಟಿ, ಬಳ್ಳಾಳ್ ಸರ್ಕಲ್ ಹತ್ತಿರ, ಮೈಸೂರು. ಸಮಯ: ಬೆ.11, ದಿನಾಂಕ: 19–08–2024 ಸೋಮವಾರ, (Followed by Lunch)
9448376423,9886883858

SC ಆದಿಕರ್ನಾಟಕ (ಬಲಗೈ)
MBBS, MD, M.S, BE, M.Tech, MSc, MBA, MCA, M.Com, MA Phd, BSc, BCA, Bcom, BA Bed ವಧುವರರಿಗೆ ಸಂಪರ್ಕಿಸಿ:
"ನವಿಲೂರು ರಂಗಸ್ವಾಮಿ"
ಮೈಸೂರು ಸಿಟಿ ವಧುವರರ ಮಾಹಿತಿ ಕೇಂದ್ರ ಎನ್.ಆರ್.ಮೊಹಲ್ಲಾ, ಮೈಸೂರು
8711974172

ವರ ಬೇಕಾಗಿದ್ದಾರೆ
ಮೈಸೂರಿನಲ್ಲಿ ವಾಸವಿರುವ ನಾಯಕ ಜನಾಂಗದ, ವಯಸ್ಸು: 44, S.S.L.C, ಅವಿವಾಹಿತ ಮಹಿಳೆಗೆ ಅವಿವಾಹಿತ/ವಿಚ್ಛೇದಿತ ವರ ಬೇಕಾಗಿದ್ದಾರೆ
(Caste no bar)
9902358147

ಸೈಟುಗಳು ಮಾರಾಟಕ್ಕಿವೆ
Ready to Registration
ಮೈಸೂರು–ಹುಣಸೂರು ರೋಡ್ After Yelwala Govt. ಹೈಸ್ಕೂಲ್ ಮತ್ತು ಕಾಲೇಜು ಹತ್ತಿರ
9880774395

ತಕ್ಷಣ ಬೇಕಾಗಿದ್ದಾರೆ
ಹೆಬ್ಬಾಳ ಕೆರೆ ಮತ್ತು Fire ಬ್ರಿಗೆಡ್ ಏರಿಯಾದಲ್ಲಿ ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡುಗಳು ತಕ್ಷಣ ಬೇಕಾಗಿದ್ದಾರೆ.
ಸಂಬಳ: 19500+W/o 8hrs
ವಿದ್ಯಾರ್ಹತೆ: SSLC ಮತ್ತು ಮೇಲ್ಪಟ್ಟು
ಊಟ ತಿಂಡಿ ಸೌಲಭ್ಯವಿರುತ್ತದೆ.
9880727819
9620667819

FOR SALE
1) 4 Chair Dining-Table Latest
2) Sofa Set- Wood
3) Dewan Box - Type
4) Latest Single Cot
9900945675

ಮೈಸೂರು ಮಿತ್ರ
ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

5 ಕೋಟಿ ವೆಚ್ಚದಲ್ಲಿ ಕನಕ ಭವನ ನಿರ್ಮಾಣ

ತಿ.ನರಸೀಪುರದಲ್ಲಿ ನಡೆದ ಸಂಗೊಳ್ಳಿ ರಾಯಣ್ಣ, ಸ್ವಾತಂತ್ರ್ಯ ದಿನಾಚರಣೆಯಲ್ಲಿ ಎಂಎಲ್‌ಸಿ ಯತೀಂದ್ರ ಭರವಸೆ



ಸಮಾರಂಭವನ್ನು ಎಂಎಲ್‌ಸಿ ಡಾ.ಯತೀಂದ್ರ ಉದ್ಘಾಟಿಸಿದರು.

ತಿ.ನರಸೀಪುರ, ಆ.16– ಪಟ್ಟಣದಲ್ಲಿ 5 ಕೋಟಿ ರೂ. ವೆಚ್ಚದಲ್ಲಿ ಕನಕ ಭವನ ನಿರ್ಮಾಣವಾಗಲಿದ್ದು, ಮೊದಲ ಹಂತದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ 2 ಕೋಟಿ ರೂ. ಅನುದಾನ ಬಿಡುಗಡೆ ಮಾಡಿದ್ದಾರೆ ಎಂದು ವಿಧಾನ ಪರಿಷತ್ ಸದಸ್ಯ ಡಾ.ಯತೀಂದ್ರ ತಿಳಿಸಿದರು.

ಪಟ್ಟಣದ ದಿ.ಮರಿಗೌಡರ ಸ್ಮಾರಕ ಭವನದಲ್ಲಿ ಗುರುವಾರ ತಾಲೂಕು ಕುರುಬರ ಸಂಘದಿಂದ ಹಮ್ಮಿಕೊಂಡಿದ್ದ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಜಯಂತೋತ್ಸವ, ಸ್ವಾತಂತ್ರ್ಯ ದಿನಾಚರಣೆ ಮತ್ತು ಪ್ರತಿಭಾ ಪುರಸ್ಕಾರ ಸಮಾರಂಭ ಉದ್ಘಾಟಿಸಿ ಮಾತನಾಡಿದ ಅವರು, ತಾಲೂಕು ಕೇಂದ್ರದಲ್ಲಿ ಸಮುದಾಯಕ್ಕೆ ಕನಕ ಭವನ ಬೇಕು. ಈ ಸಂಬಂಧ ಈಗಾಗಲೇ 5 ಕೋಟಿ ರೂ.ಗಳ ಯೋಜನೆ ರೂಪಿಸಿದ್ದು, ಮೊದಲ ಹಂತದಲ್ಲಿ ಮುಖ್ಯಮಂತ್ರಿಗಳು 2 ಕೋಟಿ ರೂ. ಬಿಡುಗಡೆ ಮಾಡಿದ್ದಾರೆ ಎಂದರು.

ಸಾಮಾಜಿಕ ಸಮಾನತೆಗಾಗಿ ಜಾತಿ ವ್ಯವಸ್ಥೆ ವಿರುದ್ಧ ಶೋಷಿತರಷ್ಟೇ ಅಲ್ಲ ಹಿಂದುಳಿದ ವರ್ಗಗಳು ಹೋರಾಟ ಮಾಡಬೇಕು. ಸ್ವಾತಂತ್ರ್ಯ ಭಾರತದಲ್ಲಿ ಸಮಾನತೆಯ ಬದುಕು ಎಲ್ಲರಿಗೂ ಇರಬೇಕು. ಕೆಚ್ಚೆದೆಯ ವೀರ ಕನ್ನಡಿಗ ಸಂಗೊಳ್ಳಿ ರಾಯಣ್ಣ ಅವರು ಬ್ರಿಟಿಷರ ವಿರುದ್ಧ ಹೋರಾಡಿ ತಮ್ಮವರ ಒಳ ಸಂಚಿನಿಂದ ಹುತಾತ್ಮರಾದರು. ರಾಜಕೀಯ ಮತ್ತು ಸಾಮಾಜಿಕ ಹಕ್ಕುಗಳಿಗಾಗಿ ಅಂಬೇಡ್ಕರ್ ರಚಿಸಿರುವ ಸಂವಿಧಾನ ಹಾಗೂ ಪ್ರಜಾಪ್ರಭುತ್ವ ಉಳಿಸಿಕೊಳ್ಳಬೇಕು. ಪ್ರತಿಭಾ ಪುರಸ್ಕಾರ ಪಡೆದ ಮಕ್ಕಳು ಉನ್ನತ ಶಿಕ್ಷಣ ಪಡೆದು ಕೆಎಎಸ್ ಮತ್ತು ಐಎಎಸ್ ನಂತಹ ಸ್ಪರ್ಧಾತ್ಮಕ ಪರೀಕ್ಷೆಗಳನ್ನು ಬರೆಯಬೇಕೆಂದು ತಿಳಿಸಿದರು.

ಎಪಿಎಂಸಿ ಮಾಜಿ ನಿರ್ದೇಶಕ ಉಕ್ಕಲಗೆರೆ ಬಸವಣ್ಣ ಮಾತನಾಡಿ, ರಾಜ್ಯ ಸರ್ಕಾರ ಬಡವರು ಮತ್ತು ಮಧ್ಯಮ ವರ್ಗದ ಜನರ ಹಿತಕ್ಕಾಗಿ ಜಾರಿಗೆ ತಂದಿರುವ 5 ಗ್ಯಾರಂಟಿ ಯೋಜನೆಗಳನ್ನ ಯಾವುದೇ ಕಾರಣಕ್ಕೂ ನಿಲ್ಲಿಸಬಾರದು. ಹಿಂದುಳಿದ ವರ್ಗಗಳ ನಿಗಮದ ಬದಲಿಗೆ ಕುರುಬ ಸಮುದಾಯಕ್ಕೆ ಪ್ರತ್ಯೇಕ ಅಭಿವೃದ್ಧಿ ನಿಗಮ ತೆರೆಯಬೇಕೆಂದು ಮನವಿ ಮಾಡಿದರು.

ಜಿಪಂ ಮಾಜಿ ಸದಸ್ಯ ಕೆ.ಮಹದೇವ ಮಾತನಾಡಿದರು. ತಾಪಂ ಮಾಜಿ ಸದಸ್ಯ ಎಂ.ರಮೇಶ್ ಕನಕ ಭವನ ಸೇರಿದಂತೆ ಸಮುದಾಯದ ಪ್ರಮುಖ ಬೇಡಿಕೆಗಳ ಮನವಿ ಸಲ್ಲಿಸಿದರು. ಎಸ್‌ಎಸ್‌ಎಲ್‌ಸಿ ಹಾಗೂ ದ್ವಿತೀಯ ಪಿಯುಸಿಯಲ್ಲಿ ಅತಿ ಹೆಚ್ಚು ಅಂಕ ಪಡೆದ ಪ್ರತಿಭಾನ್ವಿತ ವಿದ್ಯಾರ್ಥಿಗಳನ್ನು ಸನ್ಮಾನಿಸಿ, ಪುರಸ್ಕಾರ ನೀಡಲಾಯಿತು.

ಸಂಘದ ಕಾರ್ಯಾಧ್ಯಕ್ಷ ಎಂ.ಮಾದೇಶ್, ನಿರ್ದೇಶಕರಾದ ಎಂ.ಮಲ್ಲಿಕಾರ್ಜುನಸ್ವಾಮಿ, ಟಿ.ಎಸ್.ಪ್ರಶಾಂತ್ ಬಾಬು ಹಾಗೂ ಟಿ.ಎಂ.ನಂಜುಂಡಸ್ವಾಮಿ ಮಾತನಾಡಿದರು.

ಕಾರ್ಯಕ್ರಮದಲ್ಲಿ ದೊರೆಸ್ವಾಮಿ ಸ್ವಾಮೀಜಿ, ಸಂಘದ ಅಧ್ಯಕ್ಷ ಎಂ.ಎಸ್.ಮಹದೇವಸ್ವಾಮಿ, ಪ್ರಧಾನ ಕಾರ್ಯದರ್ಶಿ ಬಸವರಾಜು, ಉಪಾಧ್ಯಕ್ಷರಾದ ಎಂ.ವೆಂಕಟೇಶ್, ಸೌಭಾಗ್ಯ, ಶಾಂತಿ ರಾಜು, ಖಜಾಂಚಿ ಮಲ್ಲೇಶ್, ನಿರ್ದೇಶಕರಾದ ಎಂ.ಬಿ.ಚಂದ್ರಶೇಖರ್, ಎಲ್.ಗುರುಮೂರ್ತಿ, ಎ.ಬಿ.ಮಂಜುನಾಥ್, ಚಿಕ್ಕಸಿದ್ದೇಗೌಡ, ಗೋಪಾಲ್, ಹೆಚ್.ಸಿ.ಅರುಣ್ ಕುಮಾರ್, ಕೆ.ಅಶ್ವಿನ್ ಕುಮಾರ್, ಕೆ.ಎಂ.ಲೋಹಿತ್, ಗೋವರ್ಧನ್, ಸವಿತ, ಭಾಗ್ಯ, ನಾಗಮಣಿ, ಮಾಲಿನಿ, ಪುರಸಭಾ ಸದಸ್ಯ ಎಸ್.ಸೋಮಣ್ಣ, ವರುಣ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಕೆ.ಮುದ್ದೇಗೌಡ, ಮೃಗಾಲಯ ಪ್ರಾಧಿಕಾರದ ನಿರ್ದೇಶಕಿ ಲತಾ ಜಗದೀಶ್, ಗ್ರಾಪಂ ಅಧ್ಯಕ್ಷೆ ಚಂದ್ರಮ್ಮ ಇನ್ನಿತರರಿದ್ದರು.

ನಂ.ಗೂಡಲ್ಲಿ ಸಡಗರ ಸಂಭ್ರಮದ ಸ್ವಾತಂತ್ರ್ಯೋತ್ಸವ



ನಂಜನಗೂಡಲ್ಲಿ ಸ್ವಾತಂತ್ರ್ಯ ದಿನಾಚರಣೆ ನಡೆಯಿತು.

ನಂಜನಗೂಡು, ಆ.16– ನಗರದ ತಾಲೂಕು ಕ್ರೀಡಾಂಗಣದಲ್ಲಿ ಗುರುವಾರ ರಾಷ್ಟ್ರೀಯ ಹಬ್ಬಗಳ ಆಚರಣಾ ಸಮಿತಿಯಿಂದ 78ನೇ ಸ್ವಾತಂತ್ರ್ಯ ದಿನಾಚರಣೆಯನ್ನು ಸಂಭ್ರಮ, ಸಡಗರದಿಂದ ಆಚರಿಸಲಾಯಿತು.

ತಹಸೀಲ್ದಾರ್ ಶಿವಕುಮಾರ್ ಕಾಸ್ನೂರು ಧ್ವಜಾರೋಹಣ ನೆರವೇರಿಸಿದರು. ಬಳಿಕ ನಗರದ ವಿವಿಧಶಾಲಾ ಮಕ್ಕಳು ಮತ್ತು ಪೊಲೀಸ್ ಇಲಾಖೆಯಿಂದ ಪಥ ಸಂಚಲನ ನಡೆಸಲಾಯಿತು.

ಗಾಂಧೀಜಿ ಹಾಗೂ ಡಾ.ಬಿ.ಆರ್.ಅಂಬೇಡ್ಕರ್ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡುವ ಮೂಲಕ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಶಾಸಕ ದರ್ಶನ್, ಸ್ವಾತಂತ್ರ್ಯ ಹೋರಾಟಕ್ಕೂ ನಂಜನಗೂಡಿಗೂ ಅವಿನಾಭಾವ ಸಂಬಂಧ ಇದೆ. ಸ್ವಾತಂತ್ರ್ಯ ಹೋರಾಟಗಾರರಾದ ತಗಡೂರು ರಾಮಚಂದ್ರಾವ್ ಇದೇ ನೆಲದಲ್ಲಿ ಜನಿಸಿದ್ದರು. ಹೋರಾಟಗಾರರಿಗೆ ಪ್ರೇರಣೆ ನೀಡಲು ತಾಲೂಕಿನ ಬದನವಾಳು ಹಾಗೂ ತಗಡೂರು ಗ್ರಾಮಗಳಿಗೆ ಗಾಂಧೀಜಿಯವರು ಭೇಟಿ ನೀಡಿದ್ದರು. ಅವರು ಬದನವಾಳು ಗ್ರಾಮದಲ್ಲಿ ಚಾಲನೆ ನೀಡಿದ ಖಾದಿ ಗ್ರಾಮೋದ್ಯೋಗ ಕೇಂದ್ರವನ್ನು ಸಮಗ್ರವಾಗಿ ಅಭಿವೃದ್ಧಿ ಮಾಡುತ್ತೇವೆ. ಗಾಂಧೀಜಿ ಕಾಲಿಟ್ಟ ನೆಲವನ್ನು ಅಭಿವೃದ್ಧಿಪಡಿಸಿ ಇಡೀ ವಿಶ್ವಕ್ಕೆ ಸಾರುವ ಕೆಲಸ ಮಾಡಬೇಕಿದೆ. ಭಾರತ ದೇಶ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡುತ್ತಾ ಬಂದಿದೆ ದೇಶಕ್ಕೆ ಸ್ವಾತಂತ್ರ್ಯ ಬಂದು ಇಷ್ಟು ವರ್ಷಗಳು ಕಳೆದರೂ ಹೆಣ್ಣು ಮಕ್ಕಳ ಮೇಲೆ ದೌರ್ಜನ್ಯ ಅತ್ಯಾಚಾರ ನಡೆಯುತ್ತಲೇ ಇವೆ. ಕೋಲ್ಕತ್ತಾದಲ್ಲಿ ಹೆಣ್ಣು ಮಗಳ ಹತ್ಯೆ ನಡೆದಿದೆ. ಇದನ್ನು ನಾನು ತೀವ್ರವಾಗಿ ಖಂಡಿಸುತ್ತೇನೆ. ಇಂಥ ಸಮಾಜ ಘಾತುಕ ಕೃತ್ಯ, ಹತ್ಯೆಗಳು ಇನ್ನು ಮುಂದೆ ನಡೆಯಬಾರದು. ಮಹಿಳೆಯರ ಪರ ನಾನು ನಿಲ್ಲುತ್ತೇನೆ ಎಂದರು.

ಕಾರ್ಯಕ್ರಮದಲ್ಲಿ ರಾಜ್ಯ ರೈತ ಸಂಘದ ಜಿಲ್ಲಾಧ್ಯಕ್ಷ ವಿದ್ಯಾಸಾಗರ್ ಅವರನ್ನು ಸನ್ಮಾನಿಸಲಾಯಿತು. ಎಸ್‌ಎಸ್‌ಎಲ್‌ಸಿಯಲ್ಲಿ ಹೆಚ್ಚು ಅಂಕಗಳಿಸಿದ ವಿದ್ಯಾರ್ಥಿಗಳಿಗೆ ಲ್ಯಾಪ್‌ಟಾಪ್ ವಿತರಿಸಲಾಯಿತು. ಕಾರ್ಯಕ್ರಮದಲ್ಲಿ ಡಾ.ಶೈಲೇಶ್ ರಾಜ್ ಅರಸ್, ತಾಪಂ ಇಓ ಜೆರಾಲ್ಡ್ ರಾಜೇಶ್, ಬಿಇಓ ಮಹೇಶ್, ಡಿವೈಎಸ್ಪಿ ರಘು, ನಗರಸಭೆ ಆಯುಕ್ತ ನಂಜುಂಡಸ್ವಾಮಿ, ಮುಖಂಡರಾದ ಕೇಶವಮೂರ್ತಿ, ಕೆ.ಮಾರುತಿ, ನಾಗರಾಜಯ್ಯ, ಶಶಿರೇಖಾ, ನಗರಸಭೆ ಸದಸ್ಯರಾದ ಗಾಯತ್ರಿ, ಖಾಲೀದ್ ಅಹಮ್ಮದ್, ಮಹೇಶ್, ಯೋಗೇಶ್ ಉಪಸ್ಥಿತರಿದ್ದರು.

ಹುಣಸೂರಲ್ಲಿ ಮಳೆ ನಡುವೆಯೂ ಸ್ವಾತಂತ್ರ್ಯ ದಿನಾಚರಣೆ

ಹುಣಸೂರು, ಆ.16– ಮಳೆ ನಡುವೆಯೂ ನಗರದಲ್ಲಿ 78ನೇ ಸ್ವಾತಂತ್ರ್ಯ ದಿನ ಆಚರಿಸಲಾಯಿತು. ನಗರದ ಮುನೇಶ್ವರ ಕಾವಲ್ ಮೈದಾನದಲ್ಲಿ ಬೆಳಗ್ಗೆ 9 ಗಂಟೆಗೆ ಆಯೋಜಿಸಿದ್ದ ಧ್ವಜಾರೋಹಣ ಮತ್ತು ವಿವಿಧ ಶಾಲೆ–ಕಾಲೇಜುಗಳ ಪಥಸಂಚಲನ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಭಾರೀ ಮಳೆ ಸುರಿಯುತ್ತಿದ್ದ ಸ್ಥಗಿತಗೊಳಿಸಿ ಕಾರ್ಯಕ್ರಮವನ್ನು ತಾಲೂಕು ಆಡಳಿತ ಧ್ವಜಾರೋಹಣಕ್ಕೆ ಸೀಮಿತಗೊಳಿಸಿತು.

ಧ್ವಜಾರೋಹಣ ನೆರವೇರಿಸಿ ಮಾತನಾಡಿದ ಎಸಿ ವಿಜಯ್ ಕುಮಾರ್ ಮಾತನಾಡಿ, ಇಂದಿನ ಯುವಕರಲ್ಲಿ ಸ್ವಾತಂತ್ರ್ಯದ ಮಹತ್ವದ ಬಗ್ಗೆ ತಿಳುವಳಿಕೆ ಇಲ್ಲದೇ ಭಾಗವಹಿಸುವಿಕೆ ಕ್ಷೀಣಿಸಿದೆ ಎಂದು ವಿಷಾದಿಸಿದರು.

ಜಯಂತಿ ಅಥವಾ ರಾಷ್ಟ್ರೀಯ ಹಬ್ಬಗಳನ್ನು ಆಚರಿಸುವ ಉದ್ದೇಶ ಆ ದಿನದ ಬಗ್ಗೆ ಯುವಕರಲ್ಲಿ ಜಾಗೃತಿ ಮೂಡಿಸುವುದೇ ಆಗಿದೆ. ಆಧುನಿಕತೆಯೊಂದಿಗೆ ಇತಿಹಾಸ ತಿಳಿದು ಅಭಿವೃದ್ಧಿ ಭಾರತಕ್ಕೆ ಕೈಜೋಡಿಸಿ ಸರ್ವತೋಮುಖ ಅಭಿವೃದ್ಧಿಗೆ ಸಹಕರಿಸಿ ಎಂದರು.

ಶಾಸಕ ಜಿ.ಡಿ.ಹರೀಶ್‌ಗೌಡ ಮಾತನಾಡಿ, ಹಲವು ಮಹನೀಯರು ಬ್ರಿಟಿಷರ ವಿರುದ್ಧ ಹೋರಾಡಿದರ ಫಲವಾಗಿ ನಾವಿಂದು ಸ್ವಾತಂತ್ರ್ಯ ಪಡೆದಿದ್ದೇವೆ. ಯುವ ಸಮುದಾಯ ಶೈಕ್ಷಣಿಕ ಸಾಧನೆ ಮಾಡಿ ದೇಶದ ಅಭಿವೃದ್ಧಿಗೆ ಕೊಡುಗೆ ನೀಡಬೇಕು. ಭಾರತಕ್ಕೆ ಸ್ವಾತಂತ್ರ್ಯ ಬಂದು 78 ವರ್ಷ ಕಳೆದ ಈ ಸಂದರ್ಭ ವಿಶ್ವದ ಗಮನ ಸೆಳೆದು ಬಾಹ್ಯಕಾಶ ಲೋಕದಲ್ಲಿ ತನ್ನದೇ ಸಾಧನೆ ಗೈದಿದೆ. ಈ ಸಾಧನೆಗೆ ಯುವಶಕ್ತಿ ಶ್ರಮ ಹಾಗೂ ಆಸಕ್ತಿ ಗಮನಾರ್ಹ ಎಂದರು.

ಕಾರ್ಯಕ್ರಮದಲ್ಲಿ ತಹಸೀಲ್ದಾರ್ ಡಾ.ಮಂಜುನಾಥ್, ತಾಪಂ ಇಓ ಕೆ.ಹೊಂಬಯ್ಯ, ಬಿಇಓ ಮಹದೇವ್, ಆಚರಣ ಸಮಿತಿ ಸದಸ್ಯ ಎಸ್.ಜಯರಾಮ್ ಮಾತನಾಡಿದರು. ಡಿವೈಎಸ್‌ಪಿ ಗೋಪಾಲಕೃಷ್ಣ, ನಗರಸಭೆ ಆಯುಕ್ತೆ ಮಾನಸ, ಇನ್ಸ್‌ಪೆಕ್ಟರ್ ಸಂತೋಷ್ ಕಶ್ಯಪ್, ನಗರಸಭೆ ಸದಸ್ಯರಾದ ಗಣೇಶ್ ಕುಮಾರಸ್ವಾಮಿ, ವಿವೇಕಾನಂದ, ರಾಣಿಪೆರುಮಾಳ್, ಮಾಜಿ ಅಧ್ಯಕ್ಷೆ ಗೀತಾ, ಆಶಾ, ರಾಧ ವಿವಿಧ ಇಲಾಖೆ ಅಧಿಕಾರಿಗಳು ಮತ್ತು ಗಣ್ಯರು ಇದ್ದರು.



ಹುಣಸೂರಲ್ಲಿ ಸ್ವಾತಂತ್ರ್ಯ ದಿನಾಚರಣೆ ನಡೆಯಿತು.

ಸ್ವಾತಂತ್ರ್ಯಕ್ಕಾಗಿ ಮಡಿದವರ ತ್ಯಾಗ, ಬಲಿದಾನ ಸ್ಮರಿಸಿ



ಸ್ವಾತಂತ್ರ್ಯ ದಿನಾಚರಣೆಯಲ್ಲಿ ವಾಟಾಳು ಮಠದ ಸಿದ್ಧಲಿಂಗ ಶಿವಾಚಾರ್ಯ ಸ್ವಾಮೀಜಿ ಧ್ವಜಾರೋಹಣ ನೆರವೇರಿಸಿದರು.

ತಿ.ನರಸೀಪುರ, ಆ.16– ಸ್ವಾತಂತ್ರ್ಯ ದಿನಾಚರಣೆಯಲ್ಲಿ ದೇಶಕ್ಕಾಗಿ ಮಡಿದ ಹೋರಾಟಗಾರರ ತ್ಯಾಗ, ಬಲಿದಾನ ಸ್ಮರಿಸುವ ಜೊತೆಗೆ ಮಕ್ಕಳು ಸ್ವಾತಂತ್ರ್ಯಕ್ಕಾಗಿ ಹೋರಾಡಿದವರ ಮೇರು ವ್ಯಕ್ತಿತ್ವ ಮೈಗೂಡಿಸಿಕೊಳ್ಳಬೇಕು ಎಂದು ವಾಟಾಳು ಮಠದ ಸಿದ್ಧಲಿಂಗ ಶಿವಾಚಾರ್ಯ ಸ್ವಾಮೀಜಿ ತಿಳಿಸಿದರು.

ಪಟ್ಟಣದ ಹೊರವಲಯದ ಆಲಗೂಡು ಬಳಿಯ ಎನ್‌ಕೆಎಫ್ ಪಬ್ಲಿಕ್ ಶಾಲೆ ಆವರಣದಲ್ಲಿ ನಡೆದ 78ನೇ ಸ್ವಾತಂತ್ರ್ಯ ದಿನಾಚರಣೆಯಲ್ಲಿ ಧ್ವಜಾರೋಹಣ ನೆರವೇರಿಸಿ ಮಾತನಾಡಿದ ಅವರು, ಬ್ರಿಟಿಷರ ವಿರುದ್ಧ ಹೋರಾಡಿ, ಸ್ವಾತಂತ್ರ್ಯ ತಂದು ಕೊಟ್ಟ ಮಹಾತ್ಮರು ಹಾಗೂ ತ್ಯಾಗಮಯಿ ಗಣ್ಯರನ್ನು ದೇಶದ ಜನರು ಸ್ಮರಿಸಿದರಷ್ಟೇ ಸಾಲದು. ಅವರ ಆದರ್ಶಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದರು.

ಶಾಲೆ ಸಂಸ್ಥಾಪಕ ಅಧ್ಯಕ್ಷ ಎನ್.ಕೆ.ಫರೀದ್ ಸ್ವಾತಂತ್ರ್ಯ ಹೋರಾಟದ ಹಿನ್ನೆಲೆ ಹಾಗೂ ಮಹತ್ವ ತಿಳಿಸಿಕೊಟ್ಟರು. ಶಾಲೆ ಮಕ್ಕಳು ವಿವಿಧ ದೇಶಭಕ್ತಿ ಗೀತೆಗಳು, ನೃತ್ಯ ಪ್ರದರ್ಶಿಸಿದರು. ಪುರಸಭೆ ಮುಖ್ಯಾಧಿಕಾರಿ ಬಿ.ಕೆ.ವಸಂತಕುಮಾರಿ, ಶಾಲೆ ಕಾರ್ಯದರ್ಶಿ ಜೋಹರಾ ಸುಲ್ತಾನ, ಖಜಾಂಚಿ ಅಹಮ್ಮದ್ ಸಯೀದ್, ಮುಖ್ಯ ಶಿಕ್ಷಕಿ ಹೇಮ, ಸಹ ಶಿಕ್ಷಕರಾದ ಅಶ್ವಿನಿ, ಗೀತಾ, ಭಾನುಮತಿ, ಅನಿತಾ, ರಶ್ಮಿ, ಶಿಲ್ಪ, ರಜಿಯಾ ಸುಲ್ತಾನ, ರೇಖಾ, ಬಿ.ಶೈಲಾ, ನೂರ್ ಹಾಜೀರ ಬೇಗಂ, ಶಿಲ್ಪಶ್ರೀ, ಪಲ್ಲವಿ, ಲಾವಣ್ಯ ಹಾಗೂ ಇನ್ನಿತರರಿದ್ದರು.

ಸ್ವಾತಂತ್ರ್ಯ ಬಂದು ಏಳೂವರೆ ದಶಕ ಕಳೆದರೂ

ಸಣ್ಣಪುಟ್ಟ ಸಮುದಾಯಕ್ಕೆ ಮೂಲ ಸೌಲಭ್ಯ ಸಿಕಿಲ್ಲ: ವಿಷಾದ



ಆಲಸ್ತ್ರೀ ಕಟ್ಟೆಹುಂಡಿ ಗ್ರಾಮದ ಹೊರವಲಯದಲ್ಲಿ ಸ್ವಾತಂತ್ರ್ಯ ದಿನಾಚರಣೆ ನಡೆಯಿತು.

ವರುಣ, ಆ.16– ದೇಶಕ್ಕೆ ಸ್ವಾತಂತ್ರ್ಯ ಬಂದು ಏಳೂವರೆ ದಶಕ ಕಳೆದರೂ ನಮ್ಮಂತಹ ಸಣ್ಣಪುಟ್ಟ ಸಮುದಾಯಗಳಿಗೆ ಇನ್ನೂ ಮೂಲ ಸೌಲಭ್ಯ ದೊರಕಿಲ್ಲ ಎಂದು ಅಲೆಮಾರಿ ಸಮುದಾಯದ ಮುಖಂಡ ಮಾದೇಶ್ ವಿಷಾದಿಸಿದರು.

ತಾಲೂಕಿನ ಆಲಸ್ತ್ರೀ ಕಟ್ಟೆಹುಂಡಿ ಗ್ರಾಮದ ಹೊರವಲಯದ ಅಲೆಮಾರಿ ಜನಾಂಗ ಮತ್ತು ನಾಯಕ ಸಮುದಾಯದ ಬಡಾವಣೆಯಲ್ಲಿ ನಡೆದ 78ನೇ ಸ್ವಾತಂತ್ರೋತ್ಸವದಲ್ಲಿ ಧ್ವಜಾರೋಹಣ ನೆರವೇರಿಸಿ ಅವರು ಮಾತನಾಡಿದರು.

ಮುಖ್ಯಮಂತ್ರಿಗಳ ಕ್ಷೇತ್ರ ವ್ಯಾಪ್ತಿಯ ಅಲಸ್ತ್ರೀ ಕಟ್ಟೆಹುಂಡಿ ಸಮೀಪದ ಹೊಸ ಬಡಾವಣೆಯಲ್ಲಿ ನಾವು ವಾಸಿಸುತ್ತಿದ್ದು, ಕುಡಿಯುವ ನೀರು, ವಿದ್ಯುತ್ ದೀಪ, ಚರಂಡಿ ವ್ಯವಸ್ಥೆ ಸೇರಿದಂತೆ ಮೂಲ ಸೌಲಭ್ಯಗಳಿಲ್ಲ. ಇಲ್ಲಿ 50ಕ್ಕೂ ಹೆಚ್ಚು ಕುಟುಂಬಗಳು ವಾಸಿಸುತ್ತಿವೆ. ಇಲ್ಲಿನ ಮಕ್ಕಳಿಗೆ ಶಾಲಾ ವ್ಯವಸ್ಥೆ ಇಲ್ಲದೆ ವಿದ್ಯೆಯಿಂದ ವಂಚಿತರಾಗುತ್ತಿದ್ದಾರೆ. ಈ ಬಗ್ಗೆ ವಿಧಾನಪರಿಷತ್ ಸದಸ್ಯ ಡಾ.ಯತೀಂದ್ರ ಅವರಿಗೆ ಮನವಿ ಸಲ್ಲಿಸಿದ್ದೇವೆ. ನಮ್ಮ ಬಡವರ ಕೂಗೂ ಅಧಿಕಾರಿಗಳಿಗಾಗಲಿ, ಜನಪ್ರತಿನಿಧಿಗಳಾಗಲಿ ಮುಟ್ಟದಿರುವುದು ವಿಷಾದನೀಯ ಎಂದರು.

ಮಹಾತ್ಮಾ ಗಾಂಧಿ ಸೇರಿದಂತೆ ಅನೇಕರು ಸ್ವಾತಂತ್ರಕ್ಕಾಗಿ ದುಡಿದಿದ್ದಾರೆ ಮಡಿದಿದ್ದಾರೆ. ಅವರ ಶ್ರಮಕ್ಕೆ ಕುಂದು ಬಾರದ ರೀತಿ ನಾವು ನಡೆದುಕೊಂಡು ಹೋಗಬೇಕು ಅದು ನಮ್ಮಹೊಣೆಗಾರಿಕೆ. ಡಾ.ಅಂಬೇಡ್ಕರ್ ಸಂವಿಧಾನ ನೀಡಿದ್ದಾರೆ. ಅವರನ್ನು, ಸಂವಿಧಾನವನ್ನು ಗೌರವಿಸುವ ಜವಾಬ್ದಾರಿ ನಮ್ಮದಾಗಿದೆ. ಆಗ ಮಾತ್ರ ಸ್ವಾತಂತ್ರ್ಯ ಸಂಭ್ರಮಕ್ಕೆ ಅರ್ಥ ಸಿಗುತ್ತದೆ ಎಂದರು.

ಬಡಾವಣೆ ಮುಖ್ಯಸ್ಥ ಮಾದೇಶ್, ಶಂಕರ್, ಆನಂದ, ಲೋಕೇಶ್, ಸುರೇಶ್, ಗ್ರಾಪಂ ಸದ್ಯಸ ದೊರೆಸ್ವಾಮಿ, ಶಿವಣ್ಣ ಮಹಿಳಾ ಸದಸ್ಯರಾದ ವಸಂತ, ಮಾಲಾ, ಪಾಪಮ್ಮ ಬಡಾವಣೆ ನಾಗರಿಕರು ಉಪಸ್ಥಿತರಿದ್ದರು.

ಮೂಗೂರಲ್ಲಿ ಸ್ವಾತಂತ್ರ್ಯ ದಿನಾಚರಣೆ



ಮೂಗೂರು ಗ್ರಾಪಂ ಆವರಣದಲ್ಲಿ 78ನೇ ಸ್ವಾತಂತ್ರ್ಯ ದಿನಾಚರಣೆಯ ಧ್ವಜಾರೋಹಣವನ್ನು ಉಪಾಧ್ಯಕ್ಷೆ ಶಾಂತಿ ನೆರವೇರಿಸಿದರು. ಈ ವೇಳೆ ಮುಖಂಡರಾದ ಗೌಡರ ಜಗದೀಶ್ ಮೂರ್ತಿ, ಉಪಪ್ರಾಂಶುಪಾಲ ಸಿ.ಪುಟ್ಟಸ್ವಾಮಿ, ನಾಗೇಂದ್ರ, ಪಿಡಿಓ ಪ್ರಕಾಶ್, ಜವರೇಗೌಡ, ದೀಪಾ, ಎಂ.ಎನ್.ರಾಜು, ಚಿನ್ನಸ್ವಾಮಿ, ದೈಹಿಕ ಶಿಕ್ಷಕ ಮಲ್ಲೇಶ್, ಗ್ರಾಪಂ ಸದಸ್ಯರು, ಸಿಬ್ಬಂದಿ ವರ್ಗ, ಶಾಲಾ ಶಿಕ್ಷಕರು, ಮಕ್ಕಳು, ಗ್ರಾಮಸ್ಥರು ಉಪಸ್ಥಿತರಿದ್ದರು.

ಬೆಟ್ಟದಪುರದಲ್ಲಿ ವರಮಹಾಲಕ್ಷ್ಮಿ ವ್ರತಾಚರಣೆ



ಬೆಟ್ಟದಪುರದಲ್ಲಿ ವರ ಮಹಾಲಕ್ಷ್ಮಿ ಹಬ್ಬವನ್ನು ಮಹಿಳೆಯರು ತಮ್ಮ ಮನೆಯಲ್ಲಿ ದೇವಿಯನ್ನು ಪ್ರತಿಷ್ಠಾಪಿಸಿ ವಿವಿಧ ಪುಷ್ಪಗಳಿಂದ ಅಲಂಕರಿಸಿ, ಹಣ್ಣು ಹಾಗೂ ಬಗೆ ಬಗೆಯ ತಿನಿಸುಗಳಿಂದ ನೈವೇದ್ಯ ಮಾಡಿ, ಅರಿಶಿನ–ಕುಂಕುಮ ವಿನಿಮಯ ಮಾಡಿಕೊಳ್ಳುವ ಮೂಲಕ ಅದ್ಧೂರಿಯಾಗಿ ಆಚರಿಸಿದರು.

ಗಾಂಧೀಜಿ, ಅಂಬೇಡ್ಕರ್ ಸ್ವಾತಂತ್ರ್ಯ ಭಾರತದ ಶಿಲ್ಪಿಗಳು



ಸ್ವಾತಂತ್ರ್ಯ ದಿನಾಚರಣೆಯಲ್ಲಿ ಎಸ್‌ಎಸ್‌ಎಲ್‌ಸಿ, ಪಿಯುಸಿಯಲ್ಲಿ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು.

ಸರಗೂರು, ಆ.16– ಮಹಾತ್ಮ ಗಾಂಧೀಜಿ ಹಾಗೂ ಅಂಬೇಡ್ಕರ್ ಸ್ವಾತಂತ್ರ್ಯ ಭಾರತದ ಶಿಲ್ಪಿಗಳು ಎಂದು ಚಿಂತಕ ವೈ.ಡಿ.ರಾಜಣ್ಣ ತಿಳಿಸಿದರು.

ಪಟ್ಟಣದಲ್ಲಿ ತಾಲೂಕು ರಾಷ್ಟ್ರೀಯ ಹಬ್ಬಗಳ ಆಚರಣಾ ಸಮಿತಿಯಿಂದ ನಡೆದ ಸ್ವಾತಂತ್ರ್ಯ ದಿನಾಚರಣೆಯಲ್ಲಿ ಮಾತನಾಡಿದ ಅವರು, ಗಾಂಧೀಜಿಗೆ ದೇಶದ ಸ್ವಾತಂತ್ರ್ಯ ಪಡೆಯುವ ಹಂಬಲವಾದರೆ, ಅಂಬೇಡ್ಕರ್‌ಗೆ ಕೋಟ್ಯಾಂತರ ಬಡವರ, ಶೋಷಿತರ ಬದುಕಿನ ಸ್ಥಿತಿಗತಿಗಳು ಸ್ವಾತಂತ್ರ್ಯದ ನಂತರ ಹೇಗಿರಬೇಕು ಎಂಬ ಸ್ಪಷ್ಟ ಕಲ್ಪನೆ ಇತ್ತು ಎಂದರು.

ಭಾರತ ಕೃಷಿ, ಆರೋಗ್ಯ, ಶಿಕ್ಷಣ, ತಂತ್ರಜ್ಞಾನ ಕ್ಷೇತ್ರದಲ್ಲಿ ಮಹತ್ವದ ಬೆಳವಣಿಗೆ ಕಂಡಿದೆ. ಹೊರಗೆ ಸುಖೀ ಭಾರತದ ಕಲ್ಪನೆ ಇದೆ. ಆಂತರ್ಯದಲ್ಲಿ ಅಸಮಾನತೆ, ಅಸಹಿಷ್ಣುತೆಯ ರಾಜನೀತಿಯಿಂದ ನರಳುತ್ತಿದೆ. ಸ್ವಾತಂತ್ರ್ಯ ಹೋರಾಟಗಾರರ ಆಶಯದ ಸುಖೀ ಭಾರತ ನೇಪಥ್ಯಕ್ಕೆ ಸರಿಯುತ್ತಿದೆ. ಪರಿಣಾಮ ಮೊದಲಿಗೆ ನೆಮ್ಮದಿಯ ಭಾರತ ನಮ್ಮ ಆದ್ಯತೆ ಆಗಬೇಕಿದೆ ಎಂದರು.

ತಹಸೀಲ್ದಾರ್ ರುಕಿಯಾ ಬೇಗಂ ಧ್ವಜಾರೋಹಣ ನೆರವೇರಿಸಿ ಅಂಬೇಡ್ಕರ್ ಪೀಠಿಕೆ ಓದುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ಉಪನ್ಯಾಸಕ ಹಾಲಪ್ಪ ಮಾತನಾಡಿದರು. ಇದೇ ವೇಳೆ ಎಸ್‌ಎಸ್‌ಎಲ್‌ಸಿ, ಪಿಯುಸಿಯಲ್ಲಿ ಹೆಚ್ಚು ಅಂಕಗಳಿಸಿದ ವಿದ್ಯಾರ್ಥಿಗಳು ಹಾಗೂ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದವರನ್ನು ಸನ್ಮಾನಿಸಲಾಯಿತು.

ಈ ವೇಳೆ ಪಪಂ ಸದಸ್ಯರಾದ ಶ್ರೀನಿವಾಸ್, ಚಲುವಕೃಷ್ಣ, ಹೇಮಾವತಿ, ಸಣ್ಣತಾಯಮ್ಮ, ಚೈತ್ರಾ, ಜಿಪಂ ಮಾಜಿ ಸದಸ್ಯ ಚಿಕ್ಕವೀರನಾಯಕ, ಭಾಗ್ಯಲಕ್ಷ್ಮಿ, ಆದಿಕರ್ನಾಟಕ ಮಹಾಸಭಾ ಅಧ್ಯಕ್ಷ ಶಿವಣ್ಣ, ನಾಯಕ ಸಮಾಜದ ಮುಖಂಡ ಶಂಭುಲಿಂಗನಾಯಕ, ಕಸಾಪ ಪರಿಷತ್ ಅಧ್ಯಕ್ಷ ಎಂ.ಕೆಂಡಗಣ್ಣಸ್ವಾಮಿ, ಶಿವಶಂಕರ್, ತಾಲೂಕು ಜೆಡಿಎಸ್ ಅಧ್ಯಕ್ಷ ಜಿ. ಗೋಪಾಲಸ್ವಾಮಿ, ಶಿವಣ್ಣ, ವಾಹನ ಚಾಲಕರ ಸಂಘದ ಅಧ್ಯಕ್ಷ ಚಿಕ್ಕಣ್ಣ, ಮುಖ್ಯಾಧಿಕಾರಿ ಮಂಜುನಾಥ್, ನೀರಾವರಿ ಇಲಾಖೆ ಎಇಇ ಉಷಾ, ಪಿಎಸ್‌ಐ ನಂದೀಶ್, ಇಓ ಎಸ್.ಪಿ.ಧರಣೇಶ್, ಸುನೀಲ್ ಸೇರಿದಂತೆ ಇನ್ನಿತರರಿದ್ದರು. ಇದಕ್ಕೂ ಮುನ್ನಾ ವಿದ್ಯಾರ್ಥಿಗಳು ಪಟ್ಟಣದ ಪ್ರಮುಖ ಬೀದಿಗಳಲ್ಲಿ ಪಥ ಸಂಚಲನ ಮಾಡಿದರು. ಅಲ್ಲದೇ ಕಾರ್ಯ ಕ್ರಮದಲ್ಲಿ ಸಾಂಸ್ಕೃತಿಕ ಕಾರ್ಯಕ್ರಮ ನಡೆಸಿಕೊಟ್ಟರು.

ಗಾಂಧೀಜಿ, ಅಂಬೇಡ್ಕರ್ ಭಾವಚಿತ್ರ ರಚನೆ



ನಂಜನಗೂಡು, ಆ.16– ತಾಲೂಕಿನ ದೇವಿರಮ್ಮನಹಳ್ಳಿ ಬಳಿಯ ವಿಸ್ಡಮ್ ಶಾಲಾ ವಿದ್ಯಾರ್ಥಿಗಳು ಸ್ವಾತಂತ್ರ್ಯ ದಿನಾಚರಣೆ ಅಂಗವಾಗಿ ಪುಷ್ಪಿನ್‌ಗಳಲ್ಲಿ ಗಾಂಧೀಜಿ, ಡಾ.ಬಿ.ಆರ್.ಅಂಬೇಡ್ಕರ್ ಭಾವಚಿತ್ರ ರಚಿಸುವ ಮೂಲಕ ವಿಶ್ವದಾಖಲೆ ನಿರ್ಮಿಸಿದ್ದಾರೆ.

ವಿದ್ಯಾರ್ಥಿಗಳಲ್ಲಿ ಸಾಮೂಹಿಕ ಪ್ರಯತ್ನ ಮತ್ತು ಸೃಜನಶೀಲತೆ, ಸಮರ್ಪಣೆ ಶಕ್ತಿ ಹೆಚ್ಚಿಸುವ ಸಲುವಾಗಿ ಗಾಂಧೀಜಿ ಮತ್ತು ಡಾ.ಬಿ.ಆರ್.ಅಂಬೇಡ್ಕರ್ ಭಾವಚಿತ್ರವನ್ನು ಪುಷ್ಪಿನ್ ಬಳಸಿ ರಚಿಸುವ ಯೋಜನೆ ರೂಪಿಸಲಾಯಿತು. ವಿದ್ಯಾರ್ಥಿಗಳು ಮತ್ತು ಸಿಬ್ಬಂದಿಗಳ ದೃಷ್ಟಿಗೆ ಜೀವ ತುಂಬುವ ಸಲುವಾಗಿ ಕಂಪ್ಯೂಟರ್ ಸಾಫ್ಟ್‌ವೇರ್ ಬಳಕೆ ಮಾಡಿ ಪಿಕ್ಸಲೇಟೆಡ್ ಚಿತ್ರಗಳನ್ನು ರಚಿಸಿ ನಂತರ ಅದನ್ನು ಎ3 ಹಾಳೆಯಲ್ಲಿ ಮುದ್ರಿಸಿ 5 ಗಂಟೆಗಳ ಅವಿರತ ಪ್ರಯತ್ನದ ಫಲವಾಗಿ ಹಾಳೆಗಳಲ್ಲಿ ಪುಷ್ಪಿನ್‌ಗಳನ್ನು ಸೇರಿಸುವ ಮೂಲಕ ಭಾವಚಿತ್ರವನ್ನು ರಚಿಸಿ ವಿಶ್ವ ದಾಖಲೆ ನಿರ್ಮಿಸಲು ಮುನ್ನುಡಿ ಬರೆದರು.

87 ಸಾವಿರ ಬಿಳಿ, ಕಪ್ಪು, ಕೆಂಪು, ಹಸಿರು, ನೀಲಿ, ಮತ್ತು ಹಳದಿ ಬಣ್ಣದ ಪುಷ್ಪಿನ್‌ಗಳನ್ನು ಬಳಕೆ ಮಾಡಿಕೊಂಡು 7.34 ಅಡಿ ಅಗಲ 11 ಅಡಿ ಉದ್ದದದಲ್ಲಿ ಗಾಂಧಿ ಭಾವಚಿತ್ರ ರಚಿಸಲಾಗಿದೆ. ಅಲ್ಲದೆ 83 ಸಾವಿರ ಪುಷ್ಪಿನ್‌ಗಳನ್ನು ಬಳಕೆ ಮಾಡಿಕೊಂಡು 8 ಅಡಿ ಅಗಲ, 10 ಅಡಿ ಉದ್ದದ ಡಾ.ಬಿ.ಆರ್.ಅಂಬೇಡ್ಕರ್ ಭಾವಚಿತ್ರವನ್ನು ರಚಿಸಿದ್ದು ವಿಶ್ವ ದಾಖಲೆ ಅಧಿಕೃತ ಮಾನ್ಯತೆಗಾಗಿ ಎದುರು ನೋಡುತ್ತಿದ್ದಾರೆ.

ವಿಸ್ಡಮ್ ಶಾಲೆ ಸಿಬ್ಬಂದಿ ಮತ್ತು ವಿದ್ಯಾರ್ಥಿಗಳ ಈ ಹೊಸ ಪ್ರಯತ್ನಕ್ಕೆ ಸಾರ್ವಜನಿಕರಿಂದ ಪ್ರಶಂಸೆ ವ್ಯಕ್ತವಾಗಿದೆ.

ಅರ್ಥಪೂರ್ಣ ದಿ.ಅರಸು ಜಯಂತಿಗೆ ತೀರ್ಮಾನ



ಹುಣಸೂರಲ್ಲಿ ಡಿ.ದೇವರಾಜ ಅರಸು ಪೂರ್ವಭಾವಿ ಸಭೆ ನಡೆಯಿತು.

ಹುಣಸೂರು, ಆ.16– ಭೂ ಸುಧಾರಣೆ ಹರಿಕಾರ, ಮಾಜಿ ಮುಖ್ಯಮಂತ್ರಿ ಡಿ.ದೇವರಾಜ ಅರಸು ಅವರ ಜಯಂತಿಯನ್ನು ಆ.20ರಂದು ತಾಲೂಕಿನ ಕಲ್ಲಹಳ್ಳಿ ಗ್ರಾಮದಲ್ಲಿ ಅರಸು ಸಮಾಧಿಗೆ ಗೌರವ ಸಮರ್ಪಿಸಿ, ಬಳಿಕ ನಗರದಲ್ಲಿ ವಿವಿಧ ಕಾರ್ಯಕ್ರಮ ಹಮ್ಮಿಕೊಳ್ಳುವ ಮೂಲಕ ಅರ್ಥಪೂರ್ಣವಾಗಿ ಆಚರಿಸಲು ಸಭೆಯಲ್ಲಿ ತೀರ್ಮಾನಿಸಲಾಯಿತು.

ನಗರದ ನಗರಸಭೆ ಸಭಾಂಗಣದಲ್ಲಿ ಶಾಸಕ ಜಿ.ಡಿ.ಹರೀಶ್‌ಗೌಡರ ಅಧ್ಯಕ್ಷತೆಯಲ್ಲಿ ನಡೆದ ಪೂರ್ವಭಾವಿ ಸಭೆಯಲ್ಲಿ ಮುಖಂಡರಿಂದ ಸಲಹೆ ಪಡೆದ ಬಳಿಕ ಅರಸು ಹುಟ್ಟೂರು ಕಲ್ಲಹಳ್ಳಿ ಗ್ರಾಮದಲ್ಲಿ ಅವರ ಸಮಾಧಿಗೆ ಪುಷ್ಪನಮನ ಸಲ್ಲಿಸಿದ ಬಳಿಕ ನಗರದ ದೇವರಾಜ ಅರಸು ಪುತ್ಥಳಿ ಬಳಿ ಸಮಾಜ ಕಲ್ಯಾಣ ಇಲಾಖೆ ಆಶ್ರಯದಲ್ಲಿ ವ್ಯಾಸಂಗ ಮಾಡಿ ಎಸ್‌ಎಸ್‌ಎಲ್‌ಸಿ, ಪಿಯುಸಿಯಲ್ಲಿ ಹೆಚ್ಚು ಅಂಕಗಳಿಸಿದ ವಿದ್ಯಾರ್ಥಿಗಳಿಗೆ ಸನ್ಮಾನ, ನಂತರ ಉಪನ್ಯಾಸಕರಿಂದ ದೇವರಾಜ ಅರಸು ಕುರಿತು ಉಪನ್ಯಾಸ ಹಮ್ಮಿಕೊಳ್ಳಲು ಸಭೆ ತೀರ್ಮಾನಿಸಿತು.


ದೇವರಾಜ ಅರಸು ಹೆಸರಲ್ಲಿ ನಿರ್ಮಿಸುತ್ತಿರುವ ಕಲಾಮಂದಿರ ಪೂರ್ಣಗೊಳಿಸಲು ಕ್ರಮವಹಿಸಬೇಕು ಎಂದು ದಸಂಸ ಮುಖಂಡರು ಧ್ವನಿ ಎತ್ತಿದಾಗ ಇದಕ್ಕೆ ಶಾಸಕರು ಉತ್ತರಿಸಿ ಈ ಸಂಬಂಧ ಈಗಾಗಲೇ ಸದನದಲ್ಲಿ ಚರ್ಚಿಸಿದ್ದೇನೆ. ಅನುದಾನ ಬಿಡುಗಡೆ ಆಗಬೇಕು ಎಂದರು.

ಶಾಸಕ ಹರೀಶ್‌ಗೌಡ ಮಾತನಾಡಿ, ದಿ.ಡಿ.ದೇವರಾಜ ಅರಸು ಸಾರ್ವಜನಿಕ ಹೈಟೆಕ್ ಆಸ್ಪತ್ರೆ ಕಾಮಗಾರಿ ಪೂರ್ಣಗೊಳ್ಳಲು ಬೇಕಾದ 9.50 ಕೋಟಿ ಅನುದಾನ ಸರ್ಕಾರ ಬಿಡುಗಡೆ ಮಾಡಿದೆ. ಬಾಕಿ ಕಾಮಗಾರಿ ಸದ್ಯದಲ್ಲೇ ಪೂರ್ಣಗೊಳಿಸಿ 2 ತಿಂಗಳಲ್ಲಿ ನೂತನ ಆಸ್ಪತ್ರೆ ಲೋಕಾರ್ಪಣೆಗೆ ಸಿದ್ಧಗೊಳ್ಳಲಿದೆ ಎಂದರು.

ಡಿ.ದೇವರಾಜ ಅರಸು ಪುತ್ಥಳಿ ಬಳಿ ಉದ್ಯಾನವನ ನಿರ್ಮಿಸಲು ಖಾಸಗಿ ಕಂಪನಿಯೊಂದಿಗೆ ಒಡಂಬಡಿಕೆ ಮಾಡಿಕೊಳ್ಳಲಾಗಿದ್ದು, ಶೀಘ್ರದಲ್ಲೇ ಉದ್ಯಾನವನ ನಿರ್ಮಾಣ ಕಾಮಗಾರಿ ಕೈಗೆತ್ತಿಕೊಳ್ಳಲಿದ್ದಾರೆ ಎಂದರು.

ಕಲ್ಲಹಳ್ಳಿ ಗ್ರಾಮದ ಡಿ.ದೇವರಾಜ ಅರಸರ ಮನೆ ಶಿಥಿಲವಾಗುತ್ತಿದ್ದು, ಈ ಸಂಬಂಧ ರಾಜ್ಯ ಸರ್ಕಾರದ ಗಮನ ಸೆಳೆದು ಅಭಿವೃದ್ಧಿಗೊಳಿಸಿ ಪ್ರವಾಸಿ ತಾಣವನ್ನಾಗಿಸಬೇಕು ಎಂದು ದಸಂಸ ಮುಖಂಡ ಡಿ.ಕುಮಾರ್, ವಕೀಲ ಪುಟ್ಟರಾಜ್ ಧ್ವನಿ ಎತ್ತಿದರು. ಈ ಸಂಬಂಧ ಶಾಸಕರು ಪ್ರತಿಕ್ರಿಯಿಸಿ ಲೋಕೋಪಯೋಗಿ ಇಲಾಖೆಗೆ ದುರಸ್ಥಿಗೆ ಅಂದಾಜು ವೆಚ್ಚ ಪಟ್ಟಿ ಸಿದ್ಧಪಡಿಸುವಂತೆ ಸೂಚಿಸಲಾಗಿದೆ. ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿ ಅಭಿವೃದ್ಧಿಗೊಳಿಸಲು ಬದ್ಧ ಎಂದರು.

ಸ್ವಾತಂತ್ರ್ಯ, ಸಂವಿಧಾನ ದೇಶದ ಹೆಮ್ಮೆ: ಶಾಸಕ ಅನಿಲ್



ಕಾರ್ಯಕ್ರಮದಲ್ಲಿ ಸಾಧಕರನ್ನು ಸನ್ಮಾನಿಸಲಾಯಿತು.

ಹೆಚ್.ಡಿ.ಕೋಟೆ, ಆ.16– ಮಹಾತ್ಮ ಗಾಂಧಿ ತಂದುಕೊಟ್ಟ ಸ್ವಾತಂತ್ರ್ಯ ಹಾಗೂ ಅಂಬೇಡ್ಕರ್ ನೀಡಿದ ಸಂವಿಧಾನ ದೇಶದ ಹೆಮ್ಮೆ ಎಂದು ಶಾಸಕ ಅನಿಲ್ ತಿಳಿಸಿದರು.

ಪಟ್ಟಣದ ಜೂನಿಯರ್ ಕಾಲೇಜು ಆವರಣದಲ್ಲಿ ನಡೆದ 78ನೇ ಸ್ವಾತಂತ್ರ್ಯ ದಿನಾಚರಣೆಯಲ್ಲಿ ಮಾತನಾಡಿದ ಅವರು, ದೇಶದ ಸ್ವಾತಂತ್ರ್ಯಕ್ಕಾಗಿ ಸಾಕಷ್ಟು ಮಂದಿ ಹೋರಾಡಿ ಮಡಿದಿದ್ದಾರೆ. ಅವರ ಶ್ರಮಕ್ಕೆ ಕುಂದು ಬಾರದ ರೀತಿ ನಡೆಯಬೇಕು. ಯುವಕರು ದೇಶ ರಕ್ಷಣೆಗೆ ಮುಂದಾಗಬೇಕು ಎಂದರು. ಹಿಂದುಳಿದ ತಾಲೂಕು ಎಂಬ ಹಣೆಪಟ್ಟಿ ಹೊಂದಿದ್ದ ಕೋಟೆ ತಾಲೂಕು ಇದೀಗ ಅಭಿವೃದ್ಧಿ ಹೊಂದಿದ್ದು, ಇದಕ್ಕಾಗಿ ನಮ್ಮ ತಂದೆ ಚಿಕ್ಕಮಾದು ಹಾಗೂ ನಾನು ಶಕ್ತಿಮೀರಿ ಶ್ರಮಿಸಿದ್ದೇವೆ ಎಂದರು.

ತಹಸೀಲ್ದಾರ್ ಶ್ರೀನಿವಾಸ್ ಮಾತನಾಡಿದರು. ಇದೇ ವೇಳೆ ತಾಪಂ ವತಿಯಿಂದ ವಿಶೇಷಚೇತನರಿಗೆ ವ್ಹೀಲ್‌ಚೇರ್, ಕಂಕಳು ಗುಜ್ಜು, ವಾಟರ್ ಬೆಡ್, ತೋಟಗಾರಿಕೆ ಇಲಾಖೆಯಿಂದ ತಾಳೆ ಬೆಳೆಗಾರರಿಗೆ ತಾಳೆ ಗಿಡ ವಿತರಿಸಲಾಯಿತು. ಆದರ್ಶ ಶಾಲೆ ವಿದ್ಯಾರ್ಥಿ ಮೊಹಮ್ಮದ್ ಅಬೂಬಕರ್ ಸಿದ್ಧಿಕ್‌ಗೆ ಮಾಜಿ ಶಾಸಕ ದಿ.ಹೆಸರಿನಲ್ಲಿ 20 ಸಾವಿರ ರೂ.ಗಳ ಚೆಕ್ ಅನ್ನು ಶಾಸಕರು ವಿತರಿಸಿದರು. ಅಲ್ಲದೇ ಎಸ್‌ಎಸ್‌ಎಲ್‌ಸಿಯ ಕನ್ನಡ ಪರೀಕ್ಷೆಯಲ್ಲಿ ಹೆಚ್ಚು ಅಂಕ ಗಳಿಸಿದ ನಾಲ್ವರು ವಿದ್ಯಾರ್ಥಿಗಳಿಗೆ ಉಪ ನಿರ್ದೇಶಕರ ಕಚೇರಿಯಿಂದ ಲ್ಯಾಪ್‌ಟಾಪ್ ವಿತರಿಸಲಾಯಿತು.

ಇದೇ ವೇಳೆ ಶಾಲಾ ಮಕ್ಕಳು ಸಾಂಸ್ಕೃತಿಕ ಕಾರ್ಯಕ್ರಮ ನಡೆಸಿಕೊಟ್ಟರು. ಈ ವೇಳೆ ತಾಪಂ ಇಓ ಎಸ್.ಪಿ.ಧರಣೇಶ್, ಬಿಇಓ ಮಾರಯ್ಯ, ಪುರಸಭಾ ಮುಖ್ಯಾಧಿಕಾರಿ ಸುರೇಶ್, ಸಮಾಜ ಕಲ್ಯಾಣ ಇಲಾಖೆ ಸಹಾಯಕ ನಿರ್ದೇಶಕ ರಾಮಸ್ವಾಮಿ, ಟಿಹೆಚ್‌ಓ ರವಿಕುಮಾರ್, ಗೋಪಾಲಕೃಷ್ಣ ಡಿವೈಎಸ್‌ಪಿ ಗೋಪಾಲಕೃಷ್ಣ, ಎಇಇ ರಾಮೇಗೌಡ, ಸಿಡಿಪಿಓ ಆಶಾ, ಹಿಂದುಳಿದ ವರ್ಗಗಳ ಇಲಾಖೆ ಸಹಾಯಕ ನಿರ್ದೇಶಕಿ ಶಶಿಕಲಾ, ಕೃಷ್ಣಮೂರ್ತಿ, ಮಹದೇವಯ್ಯ, ಕೆಇಬಿ ಚಂದುಕುಮಾರ್, ಕೃಷಿ ಇಲಾಖೆ ಸಹಾಯಕ ನಿರ್ದೇಶಕ ಜಯರಾಮಯ್ಯ, ಇನ್ಸ್‌ಪೆಕ್ಟರ್ ಶಬ್ಬೀರ್ ಹುಸೇನ್, ಪಶು ವೈದ್ಯಾಧಿಕಾರಿ ಪ್ರಸನ್ನ, ಗ್ರೇಡ್–2 ತಹಸೀಲ್ದಾರ್ ಪ್ರಸನ್ನ, ಮುಖಂಡರಾದ ಹೆಚ್.ಸಿ.ನರಸಿಂಹಮೂರ್ತಿ, ಸತೀಶ್‌ಗೌಡ, ಪ್ರಮೋದ್, ಬಸವರಾಜಪ್ಪ, ಬಿ.ನಂದೀಶ್, ಮಂಜು, ಪುಟ್ಟಬಸವ, ಗಂಗರಾಜು, ದಾಕ್ಷಾಯಿಣಿ ಬಸವರಾಜು, ಈರೇಗೌಡ, ಕಾವೇರ, ಬಿ.ಬಸವರಾಜು, ಮಹದೇವ ನಾಯಕ, ಎ.ಎಸ್.ಮಹದೇವ ಇದ್ದರು.

ಮೈಸೂರು ಮಿತ್ರ

ಶನಿವಾರ 17 ಆಗಸ್ಟ್ 2024

ಮೈಸೂರು ರಿಂಗ್ ರಸ್ತೆಯಲ್ಲಿ ನಗರ ಸಾರಿಗೆ ಬಸ್‌ಗಳ ಸೇವೆ ಆರಂಭ



ಮೈಸೂರು, ಆ.16 (ಆರ್‌ಕೆ)–ಪ್ರಯಾಣಿಕರ ಬೇಡಿಕೆಗನುಗುಣವಾಗಿ ಮೈಸೂರು ಹೊರವರ್ತುಲ ರಸ್ತೆಗೆ ಸಂಪರ್ಕ ಕಲ್ಪಿಸಲು ಕೆಎಸ್‌ಆರ್‌ಟಿಸಿ ನಗರ ವಿಭಾಗವು 14 ಬಸ್ಸುಗಳ ಸಂಚಾರ ಆರಂಭಿಸಿದೆ.

ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಅವರು ರಿಂಗ್ ರಸ್ತೆ ಸಂಚಾರ ಸೇವೆಗೆ ಚಾಲನೆ ನೀಡಿದರು. ಮೈಸೂರು ನಗರ ಬಸ್ ನಿಲ್ದಾಣದಿಂದ 14 ಬಸ್ಸುಗಳು ರಿಂಗ್ ರಸ್ತೆಯ ವಿವಿಧ ಭಾಗಗಳಲ್ಲಿ ಸಂಚರಿಸಲಿವೆ.

ಈವರೆಗೆ ನಗರದ ಹೃದಯ ಭಾಗದಿಂದ 42 ಕಿಮೀ ಸುತ್ತಳತೆಯ ರಿಂಗ್ ರಸ್ತೆಗೆ ಸಾರಿಗೆ ಬಸ್ ಸಂಪರ್ಕವಿಲ್ಲದ ಕಾರಣ ಪ್ರಯಾಣಿಕರು ಆಟೋ, ಕ್ಯಾಬ್‌ಗಳನ್ನು ಅವಲಂಭಿಸಬೇಕಾಗಿತ್ತಲ್ಲದೆ, ರಾತ್ರಿ ವೇಳೆ ಸಂಚರಿಸುವುದು ಕಷ್ಟವಾಗಿತ್ತು ಸಾರ್ವಜನಿಕರಿಗೆ ಅನುಕೂಲ ಮಾಡಿಕೊಡುವ ಸಲುವಾಗಿ ಸಾರಿಗೆ ಸಂಸ್ಥೆಯು ಇದೇ ಮೊದಲ ಭಾರಿ ರಿಂಗ್ ರಸ್ತೆಗೆ 14 ಬಸ್‌ಗಳ ಸಂಚಾರ ಸೌಲಭ್ಯವನ್ನು ಒದಗಿಸಿದೆ.

ಮಾಜಿ ಸಚಿವ ತನ್ವೀರ್ ಸೇಠ್, ಕರ್ನಾಟಕ ವಸ್ತು ಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಆಯೂಬ್ ಖಾನ್, ಜಿಲ್ಲಾಧಿಕಾರಿ ಜಿ.ಲಕ್ಷ್ಮಿಕಾಂತ್ ರೆಡ್ಡಿ, ನಗರ ಪೊಲೀಸ್ ಕಮಿಷ್ನರ್ ಸೀಮಾ ಲಾಟ್ಕರ್, ಜಿಲ್ಲಾ ಪಂಚಾಯ್ತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಕೆಎಂ.ಗಾಯತ್ರಿ ಮುಡಾ ಅಧ್ಯಕ್ಷ ಕೆ.ಮರೀಗೌಡ, ಕೆಎಸ್‌ಆರ್‌ಟಿಸಿ ಸಿಟಿ ಡಿವಿಷನ್ ವಿಭಾಗೀಯ ನಿಯಂತ್ರಣಾಧಿಕಾರಿ ವೀರೇಶ್ ಹಾಗೂ ಇತರರು ರಿಂಗ್ ರಸ್ತೆಗೆ ನಗರ ಸಾರಿಗೆ ಬಸ್‌ಗಳ ಸೇವೆಗೆ ಹಸಿರು ನಿಶಾನೆ ತೋರಿ ಚಾಲನೆ ನೀಡುವ ವೇಳೆ ಉಪಸ್ಥಿತರಿದ್ದರು.


4 ಮಾರ್ಗಗಳು: ನಗರ ಬಸ್ ನಿಲ್ದಾಣ(ಸಿಬಿಎಸ್)ದಿಂದ ರಿಂಗ್ ರಸ್ತೆಯ ವಿವಿಧ ಭಾಗಗಳ ಶಿಕ್ಷಣ ಸಂಸ್ಥೆ, ಆಸ್ಪತ್ರೆ, ಕೈಗಾರಿಕೆಗಳು, ವಾಣಿಜ್ಯ ಕೇಂದ್ರ, ಗಾರ್ಮೆಂಟ್ಸ್ ಕಾರ್ಖಾನೆಗಳಿಗೆ ಸಂಪರ್ಕ ಕಲ್ಪಿಸುವಂತೆ ಬಸ್ ರೂಟ್‌ಗಳನ್ನು ಸಿದ್ದಪಡಿಸಲಾಗಿದೆ ಎಂದು ಕೆಎಸ್‌ಆರ್‌ಟಿಸಿ ನಗರ ವಿಭಾಗೀಯ ನಿಯಂತ್ರಣಾಧಿಕಾರಿ ಹೆಚ್.ಟಿ.ವೀರೇಶ್ ಅವರು 'ಮೈಸೂರು ಮಿತ್ರ'ನಿಗೆ ತಿಳಿಸಿದ್ದಾರೆ.

ಮಾರ್ಗ ಮಧ್ಯೆ ಕೆ.ಆರ್.ಸರ್ಕಲ್, ಇರ್ವಿನ್ ರಸ್ತೆ, ಸಯ್ಯಾಜಿ ರಾವ್ ರಸ್ತೆ ಕಲಾ ಮಂದಿರ, ಕೆಆರ್ ಆಸ್ಪತ್ರೆ, ಕೆಆರ್‌ಎಸ್ ರಸ್ತೆ, ನಾರಾಯಣ ಹೃದಯಾಲಯ, ಮಣಿಪಾಲ್ ಆಸ್ಪತ್ರೆ, ಭಾರತ್ ಕ್ಯಾನ್ಸರ್ ಆಸ್ಪತ್ರೆ ಸೇರಿದಂತೆ ವಿವಿಧ ಸಾರ್ವಜನಿಕರಿಗೆ ಅನುಕೂಲವಾಗುವಂತೆ ಸಿಟಿ ಬಸ್ ಸಂಚಾರ ಮಾರ್ಗವನ್ನು ವಿನ್ಯಾಸಗೊಳಿಸಲಾಗಿದೆ ಎಂದು ಅವರು ತಿಳಿಸಿದರು.

- ನಗರ ಬಸ್ ನಿಲ್ದಾಣದಿಂದ ಹೊರಡಲಿರುವ ಮೊದಲನೇ ಮಾರ್ಗದ ಬಸ್ ನಂಜುಮಳಿಗೆ, ಪರಸಯ್ಯನಹುಂಡಿ, ದಟ್ಟಗಳ್ಳಿ, ಬೋಗಾದಿ, ಹಿನಕಲ್, ಹುಣಸೂರು ರಸ್ತೆ ಮೆಟ್ರೋಪೋಲ್ ಸರ್ಕಲ್, ಜೆಎಲ್‌ಬಿ ರಸ್ತೆ ರಾಮಸ್ವಾಮಿ ಸರ್ಕಲ್ ಚಾಮರಾಜ ಜೋಡಿ ರಸ್ತೆ ಹಾರ್ಡಿಂಗ್ ಸರ್ಕಲ್ ಮೂಲಕ ಸಾಗಿ ಮರಳಿ ನಗರ ಬಸ್ ನಿಲ್ದಾಣ ತಲುಪಲಿದೆ.
- 2ನೇ ಮಾರ್ಗದ ಬಸ್ ಸಿಬಿಎಸ್, ಮೆಟ್ರೋಪೋಲ್ ಸರ್ಕಲ್, ಕಲಾಮಂದಿರ, ಹಿನಕಲ್, ಭಾರತ ಕ್ಯಾನ್ಸರ್ ಆಸ್ಪತ್ರೆ, ಮಣಿಪಾಲ್ ಆಸ್ಪತ್ರೆ, ಎಲ್‌ಐಸಿ ಸರ್ಕಲ್ ಹೈವೆ ಸರ್ಕಲ್, ಸಯ್ಯಾಜಿ ರಾವ್ ರಸ್ತೆ ಮೂಲಕ ಸಿಬಿಎಸ್ ತಲುಪುತ್ತದೆ.
- 3ನೇ ಮಾರ್ಗದಲ್ಲಿ ಸಿಬಿಎಸ್, ಹೈವೇ ಸರ್ಕಲ್ ಎಲ್‌ಐಸಿ ಸರ್ಕಲ್, ಮಣಿಪಾಲ್ ಜಂಕ್ಷನ್ ನಾರಾಯಣ ಹೃದಯಾಲಯ, ಸಾತಗಳ್ಳಿ ಬಸ್ ನಿಲ್ದಾಣ, ದೇವೇಗೌಡ ಸರ್ಕಲ್, ನಜರಬಾದ್ ಮೂಲಕ ಸಿಬಿಎಸ್‌ಗೆ ಮರಳಲಿದೆ.
- 4ನೇ ಮಾರ್ಗದ ಬಸ್ಸು ಸಿಬಿಎಸ್, ನಂಜುಮಳಿಗೆ ಪರಸಯ್ಯನ ಹುಂಡಿ, ನಂಜನಗೂಡು ರಿಂಗ್‌ರಸ್ತೆ ಜಂಕ್ಷನ್, ಉತ್ತನಹಳ್ಳಿ, ತಿ.ನರಸೀಪುರ ರಸ್ತೆ ಜಂಕ್ಷನ್, ದೇವೇಗೌಡ ಸರ್ಕಲ್, ನಜರ್‌ಬಾದ್ ಮೂಲಕ ಮರಳಿ ಸಿಟಿ ಬಸ್ ಸ್ಟ್ಯಾಂಡ್ ತಲುಪಲಿದೆ.

ಎಂಜಿ ರಸ್ತೆ ಮಾರುಕಟ್ಟೆ ಬಳಿ ಬಿಡಾಡಿ ದನಗಳ ಹಾವಳಿ

ರಸ್ತೆಯಲ್ಲೇ ಮಲಗುವುದು; ಓಡಾಡುವುದರಿಂದ ವಾಹನ ಚಾಲಕರಿಗೆ ಭಾರೀ ಕಿರಿಕಿರಿ



ಕಾರು ಡಿಕ್ಕಿ ಹೊಡೆದು ಗಾಯಗೊಂಡಿರುವ ಹಸು

ಮೈಸೂರು, ಆ.16(ಎಂಕೆ)– ಮೈಸೂರಿನ ಎಂಜಿ ರಸ್ತೆ ಮಾರುಕಟ್ಟೆ ಬಳಿ ಬಿಡಾಡಿ ಹಸುವಿಗೆ ಕಾರೊಂದು ಡಿಕ್ಕಿ ಹೊಡೆದ ಘಟನೆ ಶುಕ್ರವಾರ ರಾತ್ರಿ ನಡೆದಿದೆ.

ರಾತ್ರಿ 9 ಗಂಟೆಗೆ ಸುಮಾರಿಗೆ ಜೆಎಸ್‌ಎಸ್ ಆಸ್ಪತ್ರೆ ಕಡೆಯಿಂದ ಮಾಲ್ ಆಫ್ ಮೈಸೂರ್ ಕಡೆಗೆ ಬರುತ್ತಿದ್ದ ಕಾರೊಂದು(ಕೆ.ಎ.55.ಆರ್.2470) ರಸ್ತೆ ಮಧ್ಯದಲ್ಲಿ ನಿಂತಿದ್ದ ಹಸುವಿಗೆ ಡಿಕ್ಕಿ ಹೊಡೆದಿದೆ. ಈ ವೇಳೆ ನೆಲಕ್ಕೆ ಬಿದ್ದ ಹಸುವಿನ ಕಾಲಿಗೆ ಗಾಯವಾಗಿದ್ದು, ಪ್ರಾಣಾಪಾಯದಿಂದ ಪಾರಾಗಿದೆ. ಸ್ಥಳದಲ್ಲೇ ಇದ್ದ ಸಿದ್ದಾರ್ಥ ನಗರ ಸಂಚಾರ ಠಾಣೆ ಪೊಲೀಸರು ಕಾರನ್ನು ವಶಕ್ಕೆ ಪಡೆದಿದ್ದು, ಸಾರ್ವಜನಿಕರು ಗಾಯಗೊಂಡು ನರಳುತ್ತಿದ್ದ ಹಸುವಿನ ಆರೈಕೆ ಮಾಡಿದ್ದಾರೆ.

ಬಿಡಾಡಿ ದನ–ಕರುಗಳಿಂದ ತೊಂದರೆ: ಎಂಜಿ ರಸ್ತೆ ಮಾರುಕಟ್ಟೆಯ(ಮಾಲ್ ಆಫ್ ಮೈಸೂರ್‌ನಿಂದ ಅಂಡರ್ ಬ್ರೀಡ್ಜ್‌ವರೆಗೆ) ರಸ್ತೆ ಎರಡು ಬದಿಯಲ್ಲಿ ವಾಹನಗಳ ಪಾರ್ಕಿಂಗ್‌ನಿಂದ ಉಂಟಾಗುತ್ತಿದ್ದ ಟ್ರಾಫಿಕ್ ಸಮಸ್ಯೆ ಸ್ವಲ್ಪ ಪ್ರಮಾಣದಲ್ಲಿ ಬಗೆಹರಿದಿದ್ದರೂ ಬಿಡಾಡಿ ದನ–ಕರುಗಳಿಂದಾಗುತ್ತಿರುವ ತೊಂದರೆ ಮಾತ್ರ ಹಾಗೆಯೇ ಇದೆ. ಬೆಳಗ್ಗೆಯಿಂದ ಸಂಜೆಯವರೆಗೂ ದನ–ಕರಗಳು ರಸ್ತೆ ನಡುವೆಯೇ ಅಡ್ಡಾಡುತ್ತಿರುತ್ತವೆ. ಇದರಿಂದ ಆಗಾಗ ಅಪಘಾತಗಳು ಸಂಭವಿಸುತ್ತಿದ್ದು, ಬಿಡಾಡಿ ದನ–ಕರುಗಳನ್ನು ನಿಯಂತ್ರಿಸುವ ಕ್ರಮವಾಗಿಲ್ಲ ಎಂದು ಸ್ಥಳೀಯರು ದೂರಿದ್ದಾರೆ.

ಬಿಡಾಡಿ ದನ–ಕರುಗಳನ್ನು ನಿಯಂತ್ರಿಸುವಂತೆ ಹಲವು ಬಾರಿ ಪಾಲಿಕೆ ಅಧಿಕಾರಿಗಳಿಗೆ ಮನವಿ ಮಾಡಲಾಗಿದೆ. ರಸ್ತೆ ಮಧ್ಯದಲ್ಲಿಯೇ ಮಲಗಿಕೊಳ್ಳುವ, ಅಡ್ಡಾಡುವ ದನ–ಕರುಗಳಿಂದ ವಾಹನಗಳ ಸಂಚಾರಕ್ಕೆ ತೊಂದರೆಯಾಗುತ್ತಿದೆ ಎಂದು ಪರಿಪರಿಯಾಗಿ ಹೇಳಿದರೂ ಯಾವುದೇ ಕ್ರಮಕೈಗೊಂಡಿಲ್ಲ ಎಂದು ಪೊಲೀಸರು ಅಸಮಾದಾನ ವ್ಯಕ್ತಪಡಿಸಿದ್ದಾರೆ.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ ಚಿತ್ರಮಂದಿರ	(ದೂ: 2521923)
ಡಬಲ್ ಐಸ್ಮಾರ್ಟ್ (ತೆ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ರಾಯನ್ (ತ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ವೇದ (ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಕೃಷ್ಣಂ ಪ್ರಣಯ ಸಖಿ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಭೀಮಾ (ಕ)	4 ಪ್ರದರ್ಶನಗಳು
ರಾಜಕಮಲ್	
ತಂಗಾಲಾನ್ (ತ)	4 ಪ್ರದರ್ಶನಗಳು
ಸಂಗಂ	
ಭೀಮಾ (ಕ)	4 ಪ್ರದರ್ಶನಗಳು
ಲಿಡೋ	
ಗೌರಿ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ಸ್ತ್ರೀ–2 (ಹಿ)	4 ಪ್ರದರ್ಶನಗಳು
ಪ್ರಭಾ	
ಡಬಲ್ ಐಸ್ಮಾರ್ಟ್ (ಕ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್

ದೂ : 4240422/4241800

ಸ್ಕ್ರೀನ್ 1	**ಡೆಡ್‌ಪೂಲ್ ಅಂಡ್ ವೊಲ್ವೆರಿನ್ (3ಡಿ)(ಇಂ):** ಬೆ.10.55ಕ್ಕೆ, ಮ.1.35ಕ್ಕೆ, ಸಂ.4.20ಕ್ಕೆ, ರಾ.7.10ಕ್ಕೆ, **ಕಮಿಟಿ ಕುರ್ರೋಳು (ತೆ):** ರಾ.9.55ಕ್ಕೆ.
ಸ್ಕ್ರೀನ್ 2	**ಭೀಮಾ (ಕ):** ಬೆ.10.05ಕ್ಕೆ, **ಮಿನ್‌ಮಿನಿ (ತ):** ಮ.1ಕ್ಕೆ, **ಕಲ್ಕಿ 2898 ಎಡಿ(3ಡಿ) (ತೆ):** ಮ.3.50ಕ್ಕೆ, **ರಾಯನ್ (ತ):** ರಾ.7.15ಕ್ಕೆ, **ಅಡಿಯೋಸ್ ಅಮಿಗೋ (ಮ):** ಬೆ.10.05ಕ್ಕೆ.
ಸ್ಕ್ರೀನ್ 3	**ಕಬಂಧ (ಕ):** ಬೆ.10.35ಕ್ಕೆ, **ಜೀನಿಯಸ್ ಮುತ್ತ (ಕ):** ಮ.1.20ಕ್ಕೆ, **ಅಂಧಗನ್ ದಿ ಪೇನಿಸ್ಟ್ (ತ):** ಸಂ.4ಕ್ಕೆ, **ಇಟ್ ಎಂಡ್ಸ್ ವಿಥ್ ಅಸ್ (ಇಂ):** ರಾ.7ಕ್ಕೆ, ರಾ.9.40ಕ್ಕೆ.
ಸ್ಕ್ರೀನ್ 4	**ಭೀಮಾ (ಕ):** ಬೆ.10ಕ್ಕೆ, ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ.

ಐನಾಕ್ಸ್ ಮೂವೀಸ್

INOX LIVE THE MOVIE

ದೂ : 2533444 / 2433456

ಸ್ಕ್ರೀನ್ 1	**ಬ್ಯಾಡ್ ನ್ಯೂಸ್ (ಹಿಂ):** ಬೆ.10ಕ್ಕೆ, ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ.
ಸ್ಕ್ರೀನ್ 2	**ಕಲ್ಕಿ 2898 ಎಡಿ (ಕ):** ಬೆ.11.40ಕ್ಕೆ, ಸಂ.6.05ಕ್ಕೆ, **ಟ್ವಿಸ್ಟರ್ಸ್ (ಇಂ):** ಮ.3.20ಕ್ಕೆ, ರಾ.9.45ಕ್ಕೆ.
ಸ್ಕ್ರೀನ್ 3	**ಇಂಡಿಯನ್ 2 (ತ):** ಬೆ.9.40ಕ್ಕೆ, ಸಂ.4.05ಕ್ಕೆ, **ಟ್ವಿಸ್ಟರ್ಸ್ (ಇಂ):** ಮ.1.20ಕ್ಕೆ, ರಾ.7.45ಕ್ಕೆ, **ಡಾರ್ಲಿಂಗ್ ವೈ ದಿಸ್ ಕೊಲವರಿ (ತೆ):** ರಾ.10.30ಕ್ಕೆ.
ಸ್ಕ್ರೀನ್ 4	**ವಿದ್ಯಾರ್ಥಿ ವಿದ್ಯಾರ್ಥಿನಿಯರೇ (ಕ):** ಬೆ.11.30ಕ್ಕೆ, **ಕಲ್ಕಿ 2898 ಎಡಿ (3ಡಿ)(ತೆ):** ಮ.2.50ಕ್ಕೆ, **ಹಿರಣ್ಯ (ಕ):** ಸಂ.6.30ಕ್ಕೆ, **ಕಲ್ಕಿ 2898 ಎಡಿ (ಹಿಂ):** ರಾ.9.30ಕ್ಕೆ.

ಮೈಸೂರು ವಿಷನ್ ಸಿನಿಮಾ

ದೂ : 0821–2973519

ಸ್ಕ್ರೀನ್ 1	**ಅಂಧಗನ್ (ತ):** ಮ.1.30ಕ್ಕೆ, ಸಂ.6.30ಕ್ಕೆ, **ಪೇಚಿ (ತ):** ಸಂ.4.15ಕ್ಕೆ, **ಸೂಪರ್ ಜಿಂದಗಿ (ಮ):** ರಾ.9.15ಕ್ಕೆ.
ಸ್ಕ್ರೀನ್ 2	**ಭೀಮಾ (ಕ):** ಬೆ.9.30ಕ್ಕೆ, ಮ.12.30ಕ್ಕೆ, ಮ.3.30ಕ್ಕೆ, ಸಂ.6.30ಕ್ಕೆ, ರಾ.9.30ಕ್ಕೆ.
ಸ್ಕ್ರೀನ್ 3	**ಭೀಮಾ (ಕ):** ಸಂ.4.45ಕ್ಕೆ, ರಾ.7.45ಕ್ಕೆ.
ಸ್ಕ್ರೀನ್ 4	**ರಾಯನ್ (ತ):** ಮ.1.15ಕ್ಕೆ, ರಾ.9.30ಕ್ಕೆ.

ಪಿವಿಆರ್ ಸಿನಿಮಾಸ್

ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ, ಮೊ.ನಂ: 8951357139

ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಎಪಿಸ್ (ಇಂ): ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ, **ಶ್ರೀಕಾಂತ್ (ಹಿಂ):** ಬೆ.10ಕ್ಕೆ, ಮ.1ಕ್ಕೆ, ಸಂ.4.25ಕ್ಕೆ, ರಾ.7ಕ್ಕೆ, ರಾ.10.15ಕ್ಕೆ, **ಸ್ಟಾರ್ (ತ):** ಬೆ.11.45ಕ್ಕೆ, ಮ.3.05ಕ್ಕೆ, ಸಂ.6.25ಕ್ಕೆ, ರಾ.9.45ಕ್ಕೆ, **ಅರಮನೈ 4 (ತ):** ಮ.12.30ಕ್ಕೆ, **ಪ್ರತಿನಿಧಿ 2 (ತೆ):** ಮ.12.55ಕ್ಕೆ, ರಾ.9.15ಕ್ಕೆ, **ರಾಮನ ಅವತಾರ (ಕ):** ಮ.3.40ಕ್ಕೆ, **ಅಂಜನೀಪುತ್ರ (ಕ):** ಸಂ.4ಕ್ಕೆ, **ಗ್ರೇ ಗೇಮ್ಸ್ (ಕ):** ಸಂ.6.35ಕ್ಕೆ, **ಕೃಷ್ಣಮ್ಮ (ತೆ):** ರಾ.7.25ಕ್ಕೆ, **ಮಾರಿವಿಲ್ಲಿನ್ ಗೋಪುರಂಗಲ್ (ಮ):** ರಾ.10ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಬೈಕ್ ಕಳ್ಳತನ ಮಾಡುತ್ತಿದ್ದ ಬಾಲಕರಿಬ್ಬರ ಬಂಧನ

ಆರೋಪಿಗಳಿಂದ 2.50 ಲಕ್ಷ ರೂ ಮೌಲ್ಯದ ಬೈಕುಗಳು ವಶಕ್ಕೆ



ಮೈಸೂರು, ಆ.16(ಜಿಎ)–ಮೈಸೂರಿನ ಆಲನಹಳ್ಳಿ ಪೊಲೀಸರು ಬೈಕ್ ಕಳ್ಳತನ ಮಾಡುತ್ತಿದ್ದ ಇಬ್ಬರು ಬಾಲಕರನ್ನು ಬಂಧಿಸಿ, ಅವರಿಂದ 2.50 ಲಕ್ಷ ಮೌಲ್ಯ 5 ಬೈಕ್‌ಗಳನ್ನು ವಶಪಡಿಸಿಕೊಂಡಿದ್ದಾರೆ.

ಆ.10ರಂದು ಮೈಸೂರು ನಗರದ ಆಲನಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಯ ಲಲಿತ್‌ಮಹಲ್ ಬಳಿಯ ಇಂದಿರಾ ಕ್ಯಾಂಟಿನ್ ಸರ್ಕಲ್ ಹತ್ತಿರದ ಕೆಇಬಿ ಆಫೀಸ್ ಎದುರುಗಡೆ ನಿಲ್ಲಿಸಿದ್ದ ಹೀರೋ ಹೊಂಡ ಪ್ಯಾಷನ್ ಪ್ಲಸ್ ಬೈಕ್ ಕಳ್ಳತನವಾಗಿತ್ತು. ನಗರದಲ್ಲಿ ದಿನದಿಂದ ದಿನಕ್ಕೆ ಹೆಚ್ಚಾಗುತ್ತಿರುವ ಬೈಕುಗಳ ಕಳ್ಳತನ ಬೇದಿಸಲು ಪೊಲೀಸರ ತಂಡ ರಚಿಸಲಾಗಿತ್ತು.

ಆ.12ರಂದು ಬೆಳಿಗ್ಗೆ 9 ಗಂಟೆಯಲ್ಲಿ ದೇವೇಗೌಡ ಸರ್ಕಲ್ ಬಳಿ ಗಸ್ತಿನಲ್ಲಿದ್ದಾಗ ಇಬ್ಬರು ಅಪ್ರಾಪ್ತ ವಯಸ್ಸಿನ ಬಾಲಕರು ಬೈಕ್‌ನ್ನು ಮಾರಾಟ ಮಾಡಲು ಪ್ರಯತ್ನಿಸಿದ್ದನ್ನು ಕಂಡು ಪೊಲೀಸರು ಆರೋಪಿಗಳನ್ನು ವಶಕ್ಕೆ ಪಡೆದು ವಿಚಾರಣೆಗೆ ಒಳಪಡಿಸಿದಾಗ ಇವರಿಬ್ಬರು ದ್ವಿಚಕ್ರ ವಾಹನಗಳನ್ನು ಕಳ್ಳತನ ಮಾಡಿರುವುದು ಬೆಳಕಿಗೆ ಬಂದಿತ್ತು. ಬಾಲಕರನ್ನು ಬಂಧಿಸಿ ಅವರಿಂದ ಒಟ್ಟು 2.50 ಲಕ್ಷ ರೂ. ಮೌಲ್ಯದ 5 ಬೈಕ್‌ಗಳನ್ನು ವಶಪಡಿಸಿಕೊಳ್ಳಲಾಯಿತು.

ಈ ಪತ್ತೆ ಕಾರ್ಯದಿಂದ ಆಲನಹಳ್ಳಿ ಪೊಲೀಸ್ ಠಾಣೆಯ –2, ನಜರ್‌ಬಾದ್ –2 ಮತ್ತು ಬನ್ನೂರು ಪೊಲೀಸ್ ಠಾಣೆಯ –1 ಒಟ್ಟು 5 ದ್ವಿಚಕ್ರ ವಾಹನ ಕಳ್ಳತನ ಪ್ರಕರಣಗಳು ಪತ್ತೆಯಾಗಿವೆ ಈ ಪತ್ತೆ ಕಾರ್ಯವನ್ನು ಮೈಸೂರು ನಗರದ ಡಿಸಿಪಿ ಎಸ್.ಜಾಹ್ನವಿ ಅವರ ಮಾರ್ಗ ದರ್ಶನದಲ್ಲಿ ದೇವರಾಜ ವಿಭಾಗದ ಎಸಿಪಿ ಶಾಂತ ಮಲ್ಲಪ್ಪನವರ ನೇತೃತ್ವದಲ್ಲಿ ಆಲನಹಳ್ಳಿ ಪೊಲೀಸ್ ಠಾಣೆಯ ಪೊಲೀಸ್ ಇನ್ಸ್‌ಪೆಕ್ಟರ್ ಸ್ವರ್ಣ ಜಿ.ಎಸ್ ಮತ್ತು ಪಿಎಸ್‌ಐ ಗಂಗಾಧರ್.ಕೆ.ಎಸ್., ಎ.ಎಸ್.ಐ ಶ್ರೀನಿವಾಸ್ ಗೌಡ ಹಾಗೂ ಸಿಬ್ಬಂದಿಯವರುಗಳಾದ ಕಿರಣ್ ರಾಥೋಡ್, ಮಂಜುನಾತ್ ಗದಗೈಗೋಳ, ಮಲ್ಲಿಕಾರ್ಜುನ್ ಮತ್ತು ಮಾಲತಿ.ಆರ್ ಅವರುಗಳು ಕಾರ್ಯಚರಣೆಯಲ್ಲಿ ಪಾಲ್ಗೊಂಡಿದರು.

ಅಭಿವೃದ್ಧಿ ಕಾಮಗಾರಿಗಳಿಗೆ ಚಾಲನೆ



ಕೆ.ಆರ್ ಕ್ಷೇತ್ರದ ವಲಯ ಕಚೇರಿ 2ರ ವ್ಯಾಪ್ತಿಯಲ್ಲಿ ಬರುವ ವಾರ್ಡ್ ನಂಬರ್ 48. 60. 62 ರಲ್ಲಿ ಸುಮಾರು 160 ಲಕ್ಷ ರೂ.ಗಳ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಶಾಸಕ ಟಿ.ಎಸ್. ಶ್ರೀವತ್ಸ ವಾರ್ಡ್ ನುಬರ್ 60 ರ ನೆಲ್ಲೂರುಶೆಡ್ ಬಳಿ ಚಾಲನೆ ನೀಡಿದರು. ಈ ಸಂದರ್ಭದಲ್ಲಿ ಯಜಮಾನರಾದ ಸಿ.ಪಿ. ರಂಗಯ್ಯ. ಹನುಮಯ್ಯ, ವಾರ್ಡ್ ಅಧ್ಯಕ್ಷ ಮಧು, ಬಿಜೆಪಿ ಮುಖಂಡರಾದ ವಿಶ್ವೇಶ್ವರಯ್ಯ. ಬಿಲ್ಲಯ್ಯ, ರವಿ, ಶೈಲೇಂದ್ರ, ಪಿ.ಟಿ.ಕೃಷ್ಣ, ಮುರಳಿ, ರಾಜು, ವೆಂಕಟೇಶ್, ಹರ್ಷ, ಮಹದೇವು, ವಾರ್ಡಿನ ಪ್ರಮುಖ ಕಾರ್ಯಕರ್ತರು ಇದ್ದರು

ಗಜಪಯಣ: ವೀರನಹೊಸಳ್ಳಿ ಗೇಟ್ ಬಳಿ ಸಿದ್ಧತೆ

- 4 ಸಾವಿರ ಜನರಿಗೆ ವ್ಯವಸ್ಥೆ ಮಾಡಲು ಸೂಚನೆ
- ಸ್ಥಳೀಯ ಕಲಾವಿದರ ಆಹ್ವಾನಕ್ಕೆ ನಿರ್ಧಾರ

ಮೈಸೂರು, ಆ.16(ಎಂಟಿವೈ)– ನಾಡಹಬ್ಬ ದಸರಾ ಮಹೋತ್ಸವದ ಮೊದಲ ಕಾರ್ಯಕ್ರಮವಾದ ಗಜಪಯಣ ಆ.21ರಂದು ಜರುಗಲಿದ್ದು, ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶದ ಪ್ರವೇಶ ದ್ವಾರ ವೀರನಹೊಸಳ್ಳಿ ಗೇಟ್ ಬಳಿ ಕಾರ್ಯಕ್ರಮದ ಸಿದ್ಧತೆ ಮಾಡಿಕೊಳ್ಳಲು ಮೈಸೂರು ವನ್ಯಜೀವಿ ವಿಭಾಗದ ಅಧಿಕಾರಿಗಳು ಸ್ಥಳ ಪರಿಶೀಲನೆ ನಡೆಸಿದರು.

ಮೈಸೂರು ವನ್ಯಜೀವಿ ವಿಭಾಗದ ಡಿಸಿಎಫ್ ಪ್ರಭುಗೌಡ ನೇತೃತ್ವದ ಅಧಿಕಾರಿಗಳ ತಂಡ ವೀರನಹೊಸಳ್ಳಿಗೆ ತೆರಳಿ ಸ್ಥಳ ಪರಿಶೀಲಿಸಿ, ಗಜಪಯಣ ಕಾರ್ಯಕ್ರಮದ ಯಶಸ್ಸಿಗೆ ಅಗತ್ಯ ಸಿದ್ಧತೆ ಮಾಡಿಕೊಳ್ಳುವಂತೆ ಸೂಚಿಸಿತು. ವೀರನಹೊಸಳ್ಳಿ ಗೇಟ್ ಬಳಿ ಪ್ರತಿವರ್ಷದಂತೆ ಈ ಬಾರಿಯೂ ಅಂಬಾರಿ ಆನೆ ಅಭಿಮನ್ಯು ನೇತೃತ್ವದ ಮೊದಲ ತಂಡಕ್ಕೆ ಪೂಜೆ ಸಲ್ಲಿಸಿ ಬರಮಾಡಿಕೊಳ್ಳಲಾಗುತ್ತದೆ. ಬಳಿಕ ಆಶ್ರಮ ಶಾಲೆ ಬಳಿ ವೇದಿಕೆ ಕಾರ್ಯಕ್ರಮ ಜರುಗಲಿದ್ದು, ಸ್ಥಳೀಯ ಹಾಡಿ ಹಾಗೂ ಗ್ರಾಮಗಳ ನಾಲ್ಕು ಸಾವಿರ ಜನ ಗಜಪಯಣ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುವ ನಿರೀಕ್ಷೆ ಇದೆ.



ಗಜಪಯಣ ಕಾರ್ಯಕ್ರಮ ನಡೆಯುವ ಹುಣಸೂರಿನ ವೀರನಹೊಸಳ್ಳಿ ಬಳಿ ಡಿಸಿಎಫ್ ಪ್ರಭುಗೌಡ ಹಾಗೂ ಇನ್ನಿತರರು ಸ್ಥಳ ಪರಿಶೀಲಿಸಿದರು.

ಈ ಕುರಿತು ಡಿಸಿಎಫ್ ಪ್ರಭುಗೌಡ ಮಾತನಾಡಿ, ಆ.21ರಂದು ನಡೆಯುವ ಗಜಪಯಣಕ್ಕೆ ಸಿದ್ಧತೆ ಮಾಡಿಕೊಳ್ಳಲಾಗುತ್ತಿದೆ. ವೀರನಹೊಸಳ್ಳಿ ಬಳಿ ಪ್ರವೇಶ ದ್ವಾರ, ವೇದಿಕೆ, ವಾಹನ ನಿಲುಗಡೆಗೆ ವ್ಯವಸ್ಥೆ, ಕಾರ್ಯಕ್ರಮಕ್ಕೆ ಬರುವ ಜನರಿಗೆ ಊಟದ ವ್ಯವಸ್ಥೆ ಎಂದಿನಂತೆ ಮಾಡಲು ಸೂಚನೆ ನೀಡಲಾಗಿದೆ. ಅಲ್ಲದೆ, ಸಭಾ ಕಾರ್ಯಕ್ರಮದಲ್ಲಿ ಸಾಂಸ್ಕೃತಿಕ ಕಾರ್ಯಕ್ರಮ ಜರುಗಲಿದ್ದು, ಗಜಪಯಣದ ಚಾಲನೆ ವೇಳೆ ಸ್ಥಳೀಯ ಕಲಾವಿದರು ಇರುವ 7–8 ಸಾಂಸ್ಕೃತಿಕ ಕಲಾ ತಂಡಗಳು ಪಾಲ್ಗೊಳ್ಳಲಿದೆ ಎಂದು ತಿಳಿಸಿದರು. ಈ ಸಂದರ್ಭದಲ್ಲಿ ಮೈಸೂರು ವನ್ಯಜೀವಿ ವಿಭಾಗದ ಆರ್‌ಎಫ್ ಸಂತೋಷ್ ಹೂಗಾರ್, ವೀರನಹೊಸಳ್ಳಿ ಆರ್‌ಎಫ್‌ಓ ಅಭಿಷೇಕ್ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶದ ಮೊದಲ ಮಹಿಳಾ ನಿರ್ದೇಶಕರಾಗಿ ಪಿ.ಎ.ಸೀಮಾ ಅಧಿಕಾರ ಸ್ವೀಕಾರ

2017 ಬ್ಯಾಚ್‌ನ ಮಹಿಳಾ ಅಧಿಕಾರಿ

ಸುಧಾರಣೆ ತರಲು ಯತ್ನಿಸುತ್ತೇನೆ



ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶದ ನಿರ್ದೇಶಕರಾಗಿ ಅಧಿಕಾರ ವಹಿಸಿಕೊಂಡಿದ್ದೇನೆ. ಈ ಹಿಂದೆ ಮಡಿಕೇರಿ ವನ್ಯಜೀವಿ ವಿಭಾಗದ ಡಿಸಿಎಫ್ ಹಾಗೂ ಎಲಿಫ್ಯಾಂಟ್ ಟಾಸ್ಕ್‌ಫೋರ್ಸ್ ಡಿಸಿಎಫ್ ಆಗಿ ಸೇವೆ ಸಲ್ಲಿಸಿದ ಅನುಭವವಿದ್ದು, ಇದೀಗ ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶದಲ್ಲಿ ಸಮರ್ಥವಾಗಿ ನಿಭಾಯಿಸಿ, ವ್ಯವಸ್ಥೆಯಲ್ಲಿ ಸುಧಾರಣೆ ತರಲು ಕ್ರಮ ಕೈಗೊಳ್ಳಲಾಗುವುದು.

– **ಪಿ.ಎ.ಸೀಮಾ,** ನಿರ್ದೇಶಕರು, ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶ

ಮೈಸೂರು,ಆ.16(ಎಂಟಿವೈ)– ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶದ ನಿರ್ದೇಶಕರಾಗಿ ಕೊಡಗು ಜಿಲ್ಲೆಯ ಪೊನ್ನಂಪೇಟೆ ಮೂಲದ ಪಿ.ಎ.ಸೀಮಾ ಅಧಿಕಾರವಹಿಸಿಕೊಂಡಿದ್ದು, ಈ ವಿಭಾಗದ ಮೊದಲ ಮಹಿಳಾ ಅಧಿಕಾರಿ ಎಂಬ ಹೆಗ್ಗಳಿಕೆಗೆ ಪಾತ್ರರಾಗಿದ್ದಾರೆ.

ರಾಜ್ಯದಲ್ಲಿ ಹುಲಿ ಸಂರಕ್ಷಿತ ಪ್ರದೇಶಗಳಲ್ಲಿ ಸುಂದರ ಅರಣ್ಯ ಪ್ರದೇಶ ಹಾಗೂ ಪ್ರಾಣಿಗಳ ಸಾಂದ್ರತೆ ಹೆಚ್ಚಾಗಿರುವ ಖ್ಯಾತಿಗೆ ಒಳಗಾಗಿರುವ ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶದ ನಿರ್ದೇಶಕರ ಸ್ಥಾನಕ್ಕೆ ಈ ಹಿಂದೆ ಹುಣಸೂರು ವಿಭಾಗದ ಡಿಸಿಎಫ್ ಆಗಿ ಸೇವೆ ಸಲ್ಲಿಸುತ್ತಿದ್ದ ಪಿ.ಎ. ಸೀಮಾ ಅವರನ್ನು ನೇಮಕ ಮಾಡಲಾಗಿದೆ. ಆ.14ರಂದು ಸರ್ಕಾರದ ಅಧಿಕೃತ ಆದೇಶ ಹೊರಬಿದ್ದಿದ್ದು, ಸೀಮಾ ಅವರು ಈಗ ಅಧಿಕಾರ ಸ್ವೀಕರಿಸಿದ್ದಾರೆ.

2017ರ ಬ್ಯಾಚ್‌ನ ಐಎಫ್‌ಎಸ್ ಅಧಿಕಾರಿಯಾಗಿರುವ ಪಿ.ಎ.ಸೀಮಾ ಅವರು ಈ ಹಿಂದೆ ಮಡಿಕೇರಿ, ಮೈಸೂರು, ಮಂಡ್ಯ ಹಾಗೂ ಹುಣಸೂರು ವಿಭಾಗದಲ್ಲಿ ಡಿಸಿಎಫ್ ಆಗಿ ಸೇವೆ ಸಲ್ಲಿಸಿದ್ದಾರೆ. ಕಳೆದ ಎರಡು ವರ್ಷದಿಂದ ಹುಣಸೂರು ವಿಭಾಗದ ಡಿಸಿಎಫ್ ಹುದ್ದೆಯೊಂದಿಗೆ ಹೆಚ್ಚುವರಿಯಾಗಿ ಎಲಿಫ್ಯಾಂಟ್ ಟಾಸ್ಕ್‌ಪೋರ್ಸ್ ಡಿಸಿಎಫ್ ಆಗಿಯೂ ಕಾರ್ಯನಿರ್ವಹಿಸಿದ್ದರು.

ಮೈಸೂರು ಭಾಗದಲ್ಲಿ ಮೂವರು ಅಧಿಕಾರಿಗಳು: ಮೈಸೂರು ವೃತ್ತದ ಸಿಎಫ್ ಆಗಿ ಡಾ.ಮಾಲತಿ ಪ್ರಿಯಾ, ಬಿಳಿಗಿರಿ ರಂಗನಾಥಬೆಟ್ಟ ಹುಲಿ ಸಂರಕ್ಷಿತ ಪ್ರದೇಶದ ನಿರ್ದೇಶಕರಾಗಿ ದೀಪಾ ಜೆ.ಕಂಟ್ರಾಕ್ಟರ್ ಹಾಗೂ ನಾಗರಹೊಳೆ ನಿರ್ದೇಶಕರಾಗಿ ಪಿ.ಎ.ಸೀಮಾ ಅವರು ಕಾರ್ಯನಿರ್ವಹಿಸುತ್ತಿದ್ದು, ಇನ್ನಷ್ಟು ಮಂದಿ, ಎಸಿಎಫ್, ಆರ್‌ಎಫ್‌ಓ ಹಾಗೂ ಡಿಆರ್‌ಎಫ್‌ಗಳಾಗಿಯೂ ಮಹಿಳಾ ಅಧಿಕಾರಿಗಳು ಸೇವೆ ಸಲ್ಲಿಸುತ್ತಿದ್ದಾರೆ.

ಪಿಂಚಣಿ ಮಂಜೂರಾತಿ ಪತ್ರ ವಿತರಣೆ



ಸ್ವಾತಂತ್ರ್ಯೋತ್ಸವ ಹಾಗೂ ವರಮಹಾಲಕ್ಷ್ಮಿ ಹಬ್ಬದ ಪ್ರಯುಕ್ತ ಮಾಜಿ ಕಾರ್ಪೋರೇಟರ್ ಭಾಗ್ಯ ಮಾದೇಶ್ ನೇತೃತ್ವದಲ್ಲಿ ಮಹಿಳೆಯರಿಗೆ ವಿಧವಾ ವೇತನ, ವೃದ್ಧಾಪ್ಯ ವೇತನದ ಮಂಜೂರಾತಿ ಪತ್ರ ಹಾಗೂ ಸೀರೆಗಳನ್ನು ವಿತರಿಸಲಾಯಿತು. ಈ ವೇಳೆ ಮಾಜಿ ಕಾರ್ಪೋರೇಟರ್ ಮಾದೇಶ್, ಪಡುವಾರಹಳ್ಳಿ ಪಾಪಣ್ಣ, ಸುಣ್ಣದಕೇರಿ ರಮೇಶ್, ಕೃಷ್ಣ, ಪುರುಷೋತ್ತಮ್, ಪ್ರದೀಪ್, ಸುರೇಶ್, ವೆಂಕಟೇಶ್ ಇನ್ನಿತರರಿದ್ದರು.

ಭಾರತಕ್ಕೆ ಸರಿ ಸಮಾನ ದೇಶ ಪ್ರಪಂಚದಲ್ಲಿ ಮತ್ತೊಂದಿಲ್ಲ

ಹಿರಿಯ ಸಾಹಿತಿ ಬನ್ನೂರ್ ರಾಜು ಅಭಿಮತ

ಮೈಸೂರು, ಆ.16(ಜಿಎ)–ವಿವಿಧತೆಯಲ್ಲಿ ಏಕತೆಯನ್ನು ಸಾಧಿಸಿ ಎಲ್ಲ ವಿಚಾರ–ವಿಷಯದಲ್ಲೂ ಇಡೀ ಪ್ರಪಂಚಕ್ಕೆ ಪಾಠ ಹೇಳುವ ಶಕ್ತಿ–ಸಾಮರ್ಥ್ಯವನ್ನು ಹೊಂದಿ ಇಂದು ವಿಶ್ವಗುರು ಸ್ಥಾನದಲ್ಲಿರುವ ನಮ್ಮ ಭಾರತಕ್ಕೆ ಸಮ ಜಗತ್ತಿನಲ್ಲಿ ಮತ್ತೊಂದು ದೇಶವಿಲ್ಲವೆಂದು ಸಾಹಿತಿ ಬನ್ನೂರು ಕೆ.ರಾಜು ಹೆಮ್ಮೆಯಿಂದ ನುಡಿದರು.

ಮೈಸೂರಿನ ಹೆಬ್ಬಾಳಿನ ಶ್ರೀಭೈರವೇಶ್ವರ ನಗರದಲ್ಲಿರುವ ಅಣ್ಣಯ್ಯಪ್ಪ ಮೆಮೋರಿಯಲ್ ಎಜುಕೇಶನ್ ಸೊಸೈಟಿಯ ಶ್ರೀಭೈರವೇಶ್ವರ ಪ್ರಾಥಮಿಕ ಮತ್ತು ಮಾಂಟೆಸರಿ ಪ್ರೌಢಶಾಲೆ ಹಾಗೂ ಎಎಂಬಿ ಪದವಿಪೂರ್ವ ಕಾಲೇಜಿನ ಸಂಯುಕ್ತ ಆಶ್ರಯದಲ್ಲಿ ನಡೆದ 78ನೇ ಸ್ವಾತಂತ್ರ್ಯ ದಿನಾಚರಣೆ ಕಾರ್ಯಕ್ರಮದಲ್ಲಿ ಧ್ವಜಾರೋಹಣ ನೆರವೇರಿಸಿ ಮಾತನಾಡಿದ ಅವರು, ಭಾರತವೆಂದರೆ ಸ್ವರ್ಗಸಿರಿಯ ಶಾಂತಿ, ಸೌಹಾರ್ದತೆಯ, ನೆಮ್ಮದಿಯ ನೆಲೆಯಾಗಿದ್ದು ಈ ನಿಟ್ಟಿನಲ್ಲಿ ಭಾರತೀಯರಷ್ಟು ಭಾಗ್ಯಶಾಲಿಗಳು ಯಾವ ದೇಶದಲ್ಲೂ ಇಲ್ಲ ಎಂದರು.

ನನ್ನ ದೇಶ ನನ್ನ ಹೆಮ್ಮೆ, ಎಂಬ ಭಾವ ಎಲ್ಲರೆದೆಯಲ್ಲೂ ಅರಳಬೇಕು. ನನ್ನದಿದು ಭಾರತ, ಪುಣ್ಯ ಭೂಮಿ ಭಾರತ ಎನ್ನುವ ದೇಶಭಕ್ತಿ ಧಮನಿ ಧಮನಿಗಳಲ್ಲಿ ತುಂಬಿ ತುಳುಕಬೇಕು. ನಾವೆಲ್ಲರೂ ಒಂದೇ ಎಂಬ ಕೂಡಿ ಬಾಳುವ ನಡೆ ನಮ್ಮದಾಗಬೇಕು. ಸ್ವಾತಂತ್ರ್ಯವೆಂದರೆ ಸ್ವಾರ್ಥ ತುಂಬಿದ ಸ್ವೇಚ್ಛೆಯಲ್ಲ. ದೇಶಕ್ಕಾಗಿ ಬದುಕುವ ತ್ಯಾಗಮಯಿಗಳಾಗಬೇಕು ಆಗಲೇ ಸ್ವಾತಂತ್ರ್ಯಕ್ಕಾಗಿ ತಮ್ಮ ಜೀವ–ಜೀವನವನ್ನೆಲ್ಲ ಕಳೆದುಕೊಂಡ ಮಹಾತ್ಮರ ತ್ಯಾಗ ಸಾರ್ಥಕವಾಗುವುದು.



ಮೈಸೂರಿನ ಅಣ್ಣಯ್ಯಪ್ಪ ಮೆಮೋರಿಯಲ್ ಎಜುಕೇಶನ್ ಸೊಸೈಟಿಯ 78ನೇ ಸ್ವಾತಂತ್ರ್ಯ ದಿನಾಚರಣೆ ಆಚರಿಸಲಾಯಿತು

ಬಾಬಾ ಸಾಹೇಬ್ ಅಂಬೇಡ್ಕರ್ ಅವರ ಮಾತುಗಳಲ್ಲೇ ಹೇಳುವುದಾದರೆ ನನ್ನ ದೃಷ್ಟಿಯಲ್ಲಿ 'ಸ್ವಾತಂತ್ರ್ಯ' ಎಂದರೆ ಅದು ಪ್ರಜಾತಂತ್ರ ವ್ಯವಸ್ಥೆಯ ಅಡಿಪಾಯ. ಒಬ್ಬರನ್ನೊಬ್ಬರು ಗೌರವಿಸುವ, ಸರ್ವರ ಘನತೆಯನ್ನು ಕಾಯುವ, ಮನುಷ್ಯನ ಮೂಲಭೂತ ಹಕ್ಕುಗಳು ಮತ್ತು ನ್ಯಾಯವನ್ನು ಎತ್ತಿ ಹಿಡಿಯುವ ಆದರ್ಶ. ಸಾಮಾಜಿಕ ಭದ್ರತೆ, ಗುಣಮಟ್ಟದ ಬದುಕು, ಮಾನವ ಸಮಾನತೆ, ಸ್ತ್ರೀಯರನ್ನು ಗೌರವಿಸುವ ಮತ್ತು ಸಹಿಷ್ಣುತೆಯನ್ನು ಉತ್ತೇಜಿಸುವ ಉದಾತ್ತ ತತ್ವ ಇದೆಲ್ಲವನ್ನು ನಾವು ಹೃದಯದಲ್ಲಿ, ಮನಸ್ಸಿನಲ್ಲಿ ಭದ್ರವಾಗಿ ಇರಿಸಿಕೊಂಡು ಬಾಳಬೇಕು. ಆಗಲೇ ನಾವು ಸ್ವಾತಂತ್ರ್ಯಗೊಂಡು ಬಾಳುತ್ತಿರುವುದಕ್ಕೊಂದು ಅರ್ಥ ಬರುತ್ತದೆಂದು ತಿಳಿಸಿದರು.

ಮುಖ್ಯ ಅತಿಥಿಗಳಾಗಿದ್ದ ಕರ್ನಾಟಕ ರಾಜ್ಯ ಜ್ಞಾನ ವಿಜ್ಞಾನ ಸಮಿತಿಯ ಮೈಸೂರು ಜಿಲ್ಲಾಧ್ಯಕ್ಷ ಮತ್ತು ಖ್ಯಾತ ಓರಿ ಗಾಮಿ ಕಲಾವಿದ, ವಿಶ್ರಾಂತ ಶಿಕ್ಷಕ ಹೆಚ್.ವಿ.ಮುರಳೀಧರ್ ಮಾತನಾಡಿ, ದೇಶ ನನಗೇನು ಮಾಡಿದೆ ಎನ್ನುವುದಕ್ಕಿಂತ ದೇಶಕ್ಕಾಗಿ ನಾನೇನು ಮಾಡಿದ್ದೇನೆ ಎಂದು ನಮ್ಮನ್ನು ನಾವು ಕೇಳಿಕೊಂಡು ನಿಸ್ವಾರ್ಥದಿಂದ ಪ್ರಾಮಾಣಿಕವಾಗಿ ದೇಶ ಸೇವೆ ಮಾಡಬೇಕು. ಆಗಲೇ ನಾವು ಈ ಭರತ ಭೂಮಿಯ ಪುಣ್ಯ ನೆಲದಲ್ಲಿ ಜನಿಸಿದ್ದು ಸಾರ್ಥಕವಾಗುತ್ತದೆಂದು ಹೇಳಿದರು.

ಕಾರ್ಯಕ್ರಮದಲ್ಲಿ ಹಿರಿಯ ಸಾಹಿತಿ ಬನ್ನೂರು ಕೆ.ರಾಜು ಮತ್ತು ವಿಶ್ರಾಂತ ಶಿಕ್ಷಕರೂ ಓರಿಗಾಮಿ ಕಲಾವಿದರೂ ಆದ ಹೆಚ್.ವಿ.ಮುರಳೀಧರ್ ಹಾಗೂ ಗಾಯಕಿ ರೇವತಿ ಅವರನ್ನು ಗೌರವಿಸಲಾಯಿತು. ಶ್ರೀ ಅಣ್ಣಯ್ಯಪ್ಪ ಭೈರವೇಶ್ವರ ವಿದ್ಯಾಸಂಸ್ಥೆಯ ಅಧ್ಯಕ್ಷ ಡಾ.ಜಗದೀಶ್, ಪ್ರಾಂಶುಪಾಲರೂ ಹಾಗೂ ನಿರ್ದೇಶಕಿ ಎಸ್.ಸೌಮ್ಯ, ಉಪಪ್ರಾಂಶುಪಾಲ ಪುರುಷೋತ್ತಮ್, ಮುಖ್ಯಶಿಕ್ಷಕಿ ಕಾಮಾಕ್ಷಿ, ಆಡಳಿತಾಧಿಕಾರಿ ಬಿ.ಆರ್.ಪಂಚಾಕ್ಷರಿ, ಶಿಕ್ಷಕ ಭರತ್, ಚಿತ್ರಕಲಾ ಶಿಕ್ಷಕ ಮನೋಹರ್ ಇನ್ನಿತರರು ಉಪಸ್ಥಿತರಿದ್ದರು.

ಜಾಕೀರ್ ಹುಸೇನ್– ಮಮತಾ ದಂಪತಿಯಿಂದ ವರಮಹಾಲಕ್ಷ್ಮಿ ಹಬ್ಬ ಸೌಹಾರ್ದತೆ ಆಚರಣೆ



ಮೈಸೂರು, ಆ.16(ಜಿಎ)–ಹಿಂದೂ–ಮುಸ್ಲಿಂ ನಡುವೆ ಭಾವೈಕ್ಯತೆ ಮೂಡಿಸುವ ನಿಟ್ಟಿನಲ್ಲಿ ವರ ಮಹಾಲಕ್ಷ್ಮೀ ಹಬ್ಬವನ್ನು ಡಿ.ದೇವರಾಜ ಅರಸ್ ಪ್ರತಿಮೆ ಪ್ರತಿಷ್ಠಾಪನಾ ಸಮಿತಿ ರಾಜ್ಯಾಧ್ಯಕ್ಷ ಜಾಕೀರ್ ಹುಸೇನ್ ಅವರ ಮನೆಯಲ್ಲಿ ವಿಶೇಷವಾಗಿ ಆಚರಿಸಲಾಯಿತು.

ಮೈಸೂರಿನ ಹೆಚ್.ಡಿ.ಕೋಟೆ ರಸ್ತೆಯ ಕೋಟೆ ಹುಂಡಿ ಗ್ರಾಮದಲ್ಲಿರುವ ತಮ್ಮ ನಿವಾಸದಲ್ಲಿ ಜಾಕೀರ್ ಹುಸೇನ್ ಮತ್ತು ಮಮತಾ ದಂಪತಿ ವರಮಹಾಲಕ್ಷ್ಮೀ ಹಬ್ಬವನ್ನು ಆಚರಿಸುವ ಮೂಲಕ ಹಿಂದೂ–ಮುಸ್ಲಿಂ ಸೌಹಾರ್ದ ಸಾರಿದ್ದಾರೆ.

ಕಳೆದ ಏಳು ವರ್ಷಗಳಿಂದ ಈ ದಂಪತಿ ವರಮಹಾಲಕ್ಷ್ಮೀ ಹಬ್ಬವನ್ನು ಆಚರಿಸಿಕೊಂಡು ಬರುತ್ತಿದ್ದು, ಹಿಂದೂ ಮತ್ತು ಮುಸ್ಲಿಂ ಸಮುದಾಯದ ಹಬ್ಬಗಳನ್ನು ಸಂಪ್ರದಾಯದ ಎಲ್ಲಾ ನಿಯಮಗಳನ್ನು ಪಾಲಿಸಿಕೊಂಡು ಆಚರಿಸುತ್ತಿದ್ದಾರೆ. ಇಂದು ಲಕ್ಷ್ಮಿ ದೇವಿಗೆ ವಿಶೇಷ ಅಲಂಕಾರ ಮಾಡಿ ಪ್ರಸಾದ ಸಿದ್ದಪಡಿಸಿ ಶ್ರದ್ಧಾ ಭಕ್ತಿಯಿಂದ ಪೂಜೆ ಸಲ್ಲಿಸಿದರು.

ಮೈಸೂರು ಮಿತ್ರ 45
ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

-ಜಾಹೀರಾತು ವ್ಯವಸ್ಥಾಪಕರು